
ಪುಸ್ತಕ ಪ್ರಪಂಚ

ಮಾರ್ಚ್ ೧೯೯೫



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦೦೦೪

ಲೇಖಕ ಬಂಧುಗಳಲ್ಲಿ ಮನವಿ

ಮಾನ್ಯರೆ,

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಕಳೆದ ನಾಲ್ಕು ದಶಕಗಳಿಂದ "ಪುಸ್ತಕ ಪ್ರಪಂಚ"ವನ್ನು ಪ್ರಕಟಿಸುತ್ತಿದೆಯಷ್ಟೆ. ಇದು ನಾಡಿನಲ್ಲಿ ಹಿರಿಯ ಸಾಹಿತ್ಯಿಕ ಸಾಂಸ್ಕೃತಿಕ ಚಿಂತನಾತ್ಮಕ ಮಾಸಪತ್ರಿಕೆಯಾಗಿ ಹಲವು ಹತ್ತು ವೈಶಿಷ್ಟ್ಯ ಗಳಿಂದ ಕೂಡಿದೆಯೆಂದು ಓದುಗರಿಂದ ಮೆಚ್ಚುಗೆ ಪಡೆದಿದೆ.

ಕಲೆ, ಸಾಹಿತ್ಯ, ಜ್ಞಾನ, ವಿಜ್ಞಾನ, ಮಾನವಿಕ, ಸೃಜನಶೀಲ ವಾಙ್ಮಯ, ಸಾಹಸಘಟನೆ, ಪ್ರಚಲಿತ ವಿಷಯಗಳು ಹಾಗೂ ಮಹಾತ್ಮರ ಜೀವನ ಚಿತ್ರ ಮುಂತಾದ ವಿಷಯಗಳನ್ನೊಳಗೊಂಡಂತಹ ಲೇಖನಗಳನ್ನು, ಕಥೆಗಳನ್ನು, ಅನುವಾದಗಳನ್ನು ಪ್ರಕಟಿಸಲಾಗುತ್ತಿದೆ. "ರೀಡರ್ಸ್ ಡೈಜೆಸ್ಟ್" ಮಾದರಿಯಲ್ಲಿ ಕನ್ನಡ ಭಾಷೆಯ ಪರಿಸರಕ್ಕೆ ಒಪ್ಪುವ ಶೈಲಿಯಲ್ಲಿ ಸಂಪಾದಿಸಿ ಆಯಾ ತಿಂಗಳ ಮೊದಲ ವಾರದಲ್ಲಿ ಹೊರತರಲಾಗುತ್ತಿದೆ. ಇದೇ ರೀತಿಯಲ್ಲಿ ಇತರೆ ಭಾಷೆಗಳಿಂದ ಅನುವಾದಗೊಂಡ ಲೇಖನಗಳ ಪ್ರಕಟಣೆಗೂ ಅವಕಾಶವಿರುತ್ತದೆ. ಈ ಮಾಸಿಕವು ಡೆಮ್ಮಿ $\frac{1}{8}$ ವಿನ್ಯಾಸದಲ್ಲಿ ೮೦ ಪುಟಗಳ ವಿಷಯ ವ್ಯಾಪ್ತಿ ಹೊಂದಿದ್ದು, ಅಗತ್ಯವಾದ ಸಂದರ್ಭಗಳಲ್ಲಿ ವಿಶೇಷ ಸಂಚಿಕೆಗಳನ್ನು ಹೊರತರಲಾಗುವುದು. ಪುಸ್ತಕ ಪ್ರಪಂಚಕ್ಕೆ ಕಳುಹಿಸುವ ಲೇಖನಗಳ ಬರಹವು ಸಾಧ್ಯವಾದಮಟ್ಟಿಗೂ ಸ್ಫುಟವಾಗಿದ್ದು, ಒಂದು ಭಾಗದಲ್ಲಿ ಬರಹ ಇರುವುದು ಅಗತ್ಯವಾಗಿರುತ್ತದೆ. ಲೇಖನಗಳ ವ್ಯಾಪ್ತಿಗೆ ಪುಟಗಳ ಮಿತಿ ಇಲ್ಲವಾಗಿದ್ದು ಒಂದು ಬಾರಿಗೆ ಎಷ್ಟು ಲೇಖನಗಳನ್ನಾದರೂ ಕಳುಹಿಸಬಹುದಾಗಿರುತ್ತದೆ. ಸಂಪಾದಕ ಮಂಡಳಿಯ ನಿರ್ಣಯದಂತೆ ಲೇಖನಗಳು ಪ್ರಕಟವಾಗುತ್ತವೆ. ಪ್ರಕಟಿತ ಲೇಖನಕ್ಕೆ ಯುಕ್ತ ಸಂಭಾವನೆಯೊಂದಿಗೆ ಲೇಖನ ಪ್ರಕಟಗೊಂಡ ಸಂಚಿಕೆಯನ್ನು ಕಳುಹಿಸಿ ಕೊಡಲಾಗುವುದು.

'ಪುಸ್ತಕ ಪ್ರಪಂಚ'ದ "ಪುಸ್ತಕ ಪರಿಚಯ" ವಿಭಾಗದಲ್ಲಿ ಲೇಖಕರ ಕೃತಿಗಳನ್ನು ಪರಿಚಯಿಸಿಕೊಡಲಾಗುವುದು. ಪ್ರಕಟವಾದ ಪುಸ್ತಕಗಳ ಎರಡು ಪ್ರತಿ ಗಳನ್ನು ಕಳುಹಿಸಿಕೊಡಬೇಕಾಗಿ ವಿನಂತಿಸಿಕೊಳ್ಳಲಾಗಿದೆ. ತಮ್ಮ ಲೇಖನಗಳನ್ನು ಮತ್ತು ಪುಸ್ತಕಗಳನ್ನು ಸಂಪಾದಕರು, "ಪುಸ್ತಕ ಪ್ರಪಂಚ" ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಮೈಸೂರು–೫೭೦ ೦೦೬ ಈ ವಿಳಾಸಕ್ಕೆ ಕಳುಹಿಸಿಕೊಟ್ಟು ಸೂಕ್ತ ಸಲಹೆಗಳನ್ನು ನೀಡಿ, 'ಪುಸ್ತಕ ಪ್ರಪಂಚ' ಬೆಳವಣಿಗೆಗೆ ಸಹಕರಿಸುವಿರೆಂದು ನಂಬಿರುತ್ತೇನೆ.

ಸಮಿತಿಯ ಈ ಪ್ರತಿಷ್ಠೆಯ ಪತ್ರಿಕೆ ಇಪ್ಪತ್ತೈದು ಸಹಸ್ರ ಆಜೀವ ಸದಸ್ಯ ರನ್ನು ಹೊಂದುವ ನಿರೀಕ್ಷೆಯಿದೆಯೆಂದು ತಿಳಿಸಲು ಸಂತೋಷವಾಗುತ್ತದೆ.

ವಂದನೆಗಳೊಂದಿಗೆ.

ಪ್ರಧಾನ ಸಂಪಾದಕ

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೫ ಸಂಚಿಕೆ ೭

ರಕ್ಷಾಪುಟ ಚಿತ್ರ
ಶ್ರೀ|| ಬಿ. ವಿ. ಕಾರಂತ

೭. ೪. ೧೯೯೫

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ: ರೂ. 6

ವಾರ್ಷಿಕ ಚಂದಾ: ರೂ. 60

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. 400

ಸಂಸ್ಥೆಗೆ: ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 006

"ಕಾಳಿದಾಸ್ ಸನ್ಮಾನ" ವಿಜೇತ ಶ್ರೀ ಬಿ. ವಿ. ಕಾರಂತರು

ಸಿ. ನಾಗಣ್ಣ

ಯಶಸ್ಸಿನ ಶಿಖರವನ್ನು ಮುಟ್ಟಿದ ಮೇಲೆ ಭೂತಕಾಲದ ಬಡತನದ ಬೇಗುದಿಯನ್ನು ನೆನೆಯುವುದು ಸ್ವಲ್ಪ ಸಹ್ಯವಾಗಬಹುದು. ಸಾಂಸ್ಕೃತಿಕ ವಲಯಕ್ಕೆ ಅನೇಕ ಅಪ್ಪಟ ಅಪರಂಜಿಗಳನ್ನು ಕೊಟ್ಟಿರುವ ಬಡತನಕ್ಕೆ ನಾವು ನಮಸ್ಕರಿಸಬೇಕೊ ಏನೋ? ಇತ್ತೀಚೆಗೆ "ಜ್ಞಾನಪೀಠ ಪ್ರಶಸ್ತಿ" ಗಳಿಸಿರುವ ಡಾ. ಯು. ಆರ್. ಅನಂತಮೂರ್ತಿಯವರು ಬಾಲ್ಯದ ಬಡತನವನ್ನು ಮರೆಯದೆ ನೆನೆಯುತ್ತಾರೆ. ಅದೇ ಪ್ರಕಾರ ಬಿ. ವಿ. ಕಾರಂತರು ಹುಟ್ಟಿದ ಊರನ್ನು ತಾವು ಬಿಟ್ಟು ಓಡಿದುದೂ ಕಿತ್ತು ತಿನ್ನುವ ಬಡತನದ ಬಿಗಿಮುಷ್ಟಿಯಿಂದ ತಪ್ಪಿಸಿಕೊಳ್ಳಲು ಎಂದು ತಿಳಿಸುತ್ತಾರೆ. ಬಡತನದ ವಿರುದ್ಧ ಹೋರಾಡಿ ಯಶಸ್ಸಿನ ಹಾದಿ ತುಳಿದ ಮಹನೀಯರ "ಹೋರಾಟದ ಬದುಕು" ನಮ್ಮ ಕಣ್ಮುಂದಿದೆ. ಸುದೈವದಿಂದ ಇವರು ಗೆದ್ದರು, ಕನ್ನಡ ಸಂಸ್ಕೃತಿಗೆ ಲಾಭವಾಯಿತು ; ಒಂದು ವೇಳೆ ಸಮರದಲ್ಲಿ ಪರಾಭವಗೊಂಡು ಮರೆಯಾಗಿದ್ದರೆ ಎಂಥ ನಷ್ಟವಾಗುತ್ತಿತ್ತು ಊಹಿಸುವುದಕ್ಕಾಗುತ್ತದೆಯೇ?

ನೆಹರೂರವರು ಮಗಳಿಗೆ ಬರೆದ ಒಂದು ಪತ್ರದಲ್ಲಿ ಕಾವ್ಯ, ಸಾಹಿತ್ಯ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆ ಗೈದ ಫ್ರಾನ್ಸ್, ಜರ್ಮನಿ ಹಾಗೂ ಇಂಗ್ಲೆಂಡಿನ ಕವಿ, ಸಾಹಿತಿಗಳ ಪಟ್ಟಿ ಮಾಡುತ್ತ ಒಂದು ಮಾತು ಹೇಳುತ್ತಾರೆ: ಕಾವ್ಯಾದಿ ಲಲಿತಕಲೆಗಳ ಕ್ಷೇತ್ರದಲ್ಲಿ ಕೃಷಿ ಮಾಡಲು, ಯಶಸ್ಸು ಪಡೆಯಲು ಒಂದು ಹಂತದ ಆರ್ಥಿಕ ಸದೃಢತೆ ಅತ್ಯಗತ್ಯ. ತೀರಾ ಬಡತನದಲ್ಲಿರುವವರು ತಮ್ಮ ದೈನಂದಿನ ದುಡಿತದಲ್ಲೇ ದಣಿವಾಗುವುದರಿಂದ ಮನಸ್ಸು ಪ್ರಫುಲ್ಲವಾಗಿ ಲಲಿತಕಲೆಗಳ ನಿರ್ಮಾಣದಲ್ಲಿ ತೊಡಗಲಾರದು ಎನ್ನುತ್ತಾರೆ. ಬಡತನದ ಒಡೆತನವೇ ಎದ್ದು ಕಾಣುವ ನಮ್ಮ ರಾಷ್ಟ್ರದ ಉದಾಹರಣೆ ಅವರಿಗೆ ಚಿಂತೆ ತರುತ್ತದೆ. ಕೋಟ್ಯಾಂತರ ಜೀವಿಗಳಿಗೆ ಉಣ್ಣಲು ಅನ್ನ, ಹೊದೆಯಲು ಬಟ್ಟೆ, ವಾಸಿಸಲು ಯೋಗ್ಯವಾದ ಆಶ್ರಯ ದುರ್ಲಭವಾಗಿರುವ ನಮ್ಮ ದೇಶದಲ್ಲಿ ಕಾವ್ಯ, ಸಾಹಿತ್ಯ, ಸಂಗೀತ, ನಾಟಕಾದಿ ಲಲಿತ ಕಲೆಗಳು ಅರಳುವುದು ದುಸ್ತರವೆಂಬುದು ಅವರ ಅಭಿಪ್ರಾಯ. ಈ ಮಾತಿನ

ಸತ್ಯಾಂಶವನ್ನು ಅಲ್ಲಗಳೆಯಲಾಗದು.

ಪರಿಸ್ಥಿತಿ ಅನುಕೂಲಕರವಾಗಿಲ್ಲದಿದ್ದರೂ ಬೇಗುದಿಯ ಒಡಲಲ್ಲೇ ಅನೇಕರು ಕವಿಗಳಾಗಿದ್ದಾರೆ, ಸಾಹಿತಿಗಳಾಗಿದ್ದಾರೆ, ಸಂಗೀತಗಾರರಾಗಿದ್ದಾರೆ, ಕಲೆಗಾರರಾಗಿದ್ದಾರೆ. ಯಾವ ಪವಾಡದಿಂದ ಇವರು ತಮ್ಮ ಅಂತರಂಗದ ಅಭೀಪ್ಸೆಯನ್ನು ಈಡೇರಿಸಿಕೊಂಡರು ಹೇಳುವುದು ಕಷ್ಟ. ಒಂದಂಶವನ್ನು ಮಾತ್ರ ನಾವು ಸಾಮಾನ್ಯವಾಗಿ ಊಹಿಸಬಹುದು. ಅಜ್ಞಾತದಲ್ಲಿ, ಅಂಧಕಾರದಲ್ಲಿ ಕಮರಿಹೋಗುವುದಕ್ಕೆ ಅಂಜಿ ತಮ್ಮೊಳಗಿನ ಚೈತನ್ಯವನ್ನು ಸಮಸ್ತರೆದುರು ಸಾಬೀತು ಪಡಿಸಿ ಸೈ ಎನ್ನಿಸಿಕೊಳ್ಳಬೇಕೆಂಬ ಉತ್ಕಟವಾದ ಇಚ್ಛೆ ಇಂಥವರಲ್ಲಿ ಗರಿಗೆದರಿದ ಹಾಗೆ ತೋರುತ್ತದೆ. ಹಾಗಿಲ್ಲದಿದ್ದರೆ, ವಿಸ್ಮಯಕಾರಿಯಾದ ಇವರ ಸಾಧನೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟ.

ಸನ್ಮಾನ್ಯ ಶ್ರೀ ಬಿ. ವಿ. ಕಾರಂತರ ಜೀವನವನ್ನು ಸ್ಥೂಲವಾಗಿ ಅರಿಯಲು ಈ ಪೀಠಿಕೆ ಅನಿವಾರ್ಯವಾಯಿತು. ದಕ್ಷಿಣ ಕನ್ನಡದ ಗ್ರಾಮೀಣ ಪರಿಸರದವರಾದ ಕಾರಂತರು ನಮ್ಮ ದೇಶದ ರಾಜಧಾನಿಯಾದ ದೆಹಲಿಯ ನಾಟಕ ಶಾಲೆಯ ನಿರ್ದೇಶಕರಾಗಿ ಉನ್ನತ ಪದವಿಯನ್ನು ಅಲಂಕರಿಸಿದ್ದವರು. ಆದಾಗ್ಯೂ ನಿಮ್ಮ ಜೀವನ ಕುರಿತು ಮಾತನಾಡಿ ಎಂದು ನಾವು ಕೇಳಿದರೆ ಅವರ ಮನಸ್ಸು ತಮ್ಮ ಬಾಲ್ಯಕಾಲದ ಗ್ರಾಮ ಜೀವನದ ಕಡೆ ನಾಗಾಲೋಟದಿಂದ ಹಿಮ್ಮುಖವಾಗಿ ಹರಿಯುತ್ತದೆ.

ಅವರು ಹುಟ್ಟಿದ ಊರಾದ ಕುಕ್ಕಜೆ, ಮಂಗಳೂರಿನಿಂದ ಸುಮಾರು ೩೦ ಕಿಲೋಮೀಟರ್ ದೂರದಲ್ಲಿರುವಂಥ ಗ್ರಾಮ. ಊರಿನ ತುಂಬೆಲ್ಲಾ ಯಕ್ಷಗಾನದ ಸೊಗಡು. ಈ ಪರಂಪರೆ ಇಂದಿಗೂ ಉಳಿದುಕೊಂಡು ಬಂದಿದೆ. ಈ ಪರಿಸರದಲ್ಲಿ ಬೆಳೆದ ಕಾರಂತರಿಗೆ ನಾಡಿ ಬಡಿತದಷ್ಟು ಆಪ್ತವಾಗಿ ಹೋಯಿತು ಯಕ್ಷಗಾನದ, ಕುಣಿತ ಮತ್ತು ಲಯ. "ನನ್ನ ತಂದೆ ಮತ್ತು ಚಿಕ್ಕಪ್ಪರಿಗೆ ಸಂಗೀತವೆಂದರೆ ಎಲ್ಲಿಲ್ಲದ ಹುಚ್ಚು" ಎನ್ನುತ್ತಾರೆ ಕಾರಂತರು. ಅವರ ಹಿನ್ನೆಲೆಯನ್ನು ಗಮನಿಸಿದರೆ ಕಾರಂತರು ಎಂಟನೇ ಇಯತ್ತೆವರೆಗೆ ಓದಿದುದೇ ಹೆಚ್ಚುಗಾರಿಕೆ ಎನ್ನಬೇಕು. ಆ ದಿನಗಳನ್ನು ನೆನೆಯುತ್ತಾ ಕಾರಂತರು ಹೇಳುತ್ತಾರೆ: "ನಾನು ಹನ್ನೆರಡನೇ ವಯಸ್ಸಿನವನಾಗಿದ್ದಾಗ ಶ್ರೀಮಂತರ ಮನೆಯ ಮಕ್ಕಳಿಗೆ ಪಾಠ ಹೇಳಿ ನನ್ನ ಶಾಲಾ ಶುಲ್ಕಕ್ಕೆ ಸಂಪಾದಿಸಿಕೊಳ್ಳುತ್ತಿದ್ದೆ." ಸಿಕ್ಕಿದಷ್ಟು ಜ್ಞಾನವನ್ನು ದಕ್ಕಿಸಿಕೊಳ್ಳಬೇಕೆನ್ನುವ ಸರ್ವಗ್ರಾಹಿ ಶ್ರದ್ಧೆ ಅವರಿಗೆ. ಶಾಲೆ ಕಲಿಯುತ್ತಿರುವಾಗಲೇ ರಂಗಭೂಮಿಯ ಸಹವಾಸ ಎಡೆಬಿಡದೆ ಅಂಟಿಕೊಂಡಿತು. ತಾವು ಮೂರು ಅಥವಾ ನಾಲ್ಕನೆಯ ತರಗತಿಯಲ್ಲಿರುವಾಗಲೇ ಶಾಲೆಯ ಸಮೀಪವಿದ್ದ 'L' ಆಕಾರದ ರಂಗಸ್ಥಳದಲ್ಲಿ ಅಭಿನಯಿಸಿದರಂತೆ. ಗುಬ್ಬಿ ಕಂಪನಿಯವರ "ಕೃಷ್ಣಲೀಲಾ" ನಾಟಕವನ್ನು ನೋಡಿದ ಬಳಿಕವಂತೂ ರಂಗಭೂಮಿಯ ಗೀಳು ಇನ್ನಿಲ್ಲವೆಂಬಂತೆ ಕಾಡತೊಡಗಿತಂತೆ. ಈ ಗುಂಗಿನಲ್ಲೇ ಅವರು ಮೈಸೂರಿನ ಕಡೆ ಹೆಜ್ಜೆ ಇಟ್ಟಾಗ ಮನಸ್ಸಿನಲ್ಲಿ ಭವಿಷ್ಯದ ಬಗ್ಗೆ ಅಸ್ಪಷ್ಟವಾದ ರೂಪುರೇಷೆಗಳು ಕಣ್ಣೊಡೆದಿದ್ದವು.

ಸಂಗೀತವೇ ತಮ್ಮ ಜೀವದ ಉಸಿರಾಗಿರುವುದಾಗಿ ಕಾರಂತರು ಅರಿತಿದ್ದರು. ಮಹಾ

ರಾಜರು ಮುಂಜಾನೆ ಬೆಳಗಿನ ಹವಾ ಸೇವನೆಗೆ ಹೊರಡುವರೆಂದು ಕಲ್ಪಿಸಿ ಕೊಂಡು, ಅಂಥ ಸಮಯ ನೋಡಿ ಪೊದೆಯಲ್ಲಿ ಅಡಗಿದ್ದು ಮಹಾರಾಜರು ಸಮೀಪವಾದಾಗ ಚಂಗನೆ ಪೊದೆಯಿಂದ ಹಾರಿ ಅವರ ಪಾದಕ್ಕೆ ಸಾಷ್ಟಾಂಗವೆರಗಿ "ಸಂಗೀತ ಕಲಿಯಬೇಕೆನ್ನುವ ನನ್ನ ಇಚ್ಛೆಯನ್ನು ಸಾಕಾರಗೊಳಿಸಿಕೊಡಿ" ಎಂದು ಪ್ರಾರ್ಥಿಸಬೇಕೆಂದು ಲೆಕ್ಕ ಹಾಕಿದರು. ಕಲಾವಿದನೊಬ್ಬನ ಮನಸ್ಸಿನಲ್ಲಿ ಏನೇನು ಕಲ್ಪನೆ ಹೊಳೆಯಬಹುದೆಂಬುದಕ್ಕೆ ಕಾರಂತರ ಈ ಆಲೋಚನೆ ಸಾಕ್ಷಿ. ಮಹಾರಾಜರು ಬೆಳಗಿನ ಹವಾ ಸೇವನೆಗೆ ಹೊರಗೆ ಬರಲಿಲ್ಲ, ಕಾರಂತರು ಅವರ ಕಾಲಿಗೆ ಬಿದ್ದು ತಾವೇ ನನ್ನೂ ಬೇಡಿಕೊಳ್ಳಲಿಲ್ಲ; ಆದರೆ ಗುಬ್ಬಿ ಕಂಪನಿಯ ಸಂಗೀತ ನಿರ್ದೇಶಕರು ಏಕಾಂತದಲ್ಲಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ಅವರ ಕಾಲಿಗೆ ಎರಗಿ "ನನಗೆ ಸಂಗೀತ ಕಲಿಸಿಕೊಡಿ" ಎಂದು ಬೇಡಿದ್ದುಂಟು. ಗುಬ್ಬಿ ಕಂಪನಿಯಲ್ಲಿ ಉತ್ತರಾದಿ, ದಕ್ಷಿಣಾದಿ, ಗಜಲ್, ಕವ್ವಾಲಿ, ಜನಪದ ಸಂಗೀತ, ಪಾಶ್ಚಾತ್ಯ ಸಂಗೀತ—ಇಷ್ಟೂ ಅಭ್ಯಾಸವಾಗುತ್ತಿದ್ದವು. ಕಾರಂತರ ಆಳತೆ ಅರಿಯದ ದಾಹಕ್ಕೆ ಇಲ್ಲಿ ತಣಿಯುವಷ್ಟು ಸಂಗೀತ ಲಭ್ಯವಾದದ್ದು ಸಹಜವೇ ಆಗಿದೆ.

ತಮ್ಮ ಮತ್ತು ಗುಬ್ಬಿ ಕಂಪನಿಯ ನಂಟನ್ನು ಹಾಗೂ ನಂತರದ ತಮ್ಮ ಬದುಕನ್ನು ಕಾರಂತರು ಬಣ್ಣಿಸುವ ರೀತಿ ವಿಶಿಷ್ಟವಾದದ್ದು :

"ನಾನು ಮೊದಲ ಬಾರಿ ಗುಬ್ಬಿ ಕಂಪನಿ ನಾಟಕ ನೋಡಿದಾಗ ನನಗೆ ಎಂಟೋ-ಒಂಭೂತ್ತೋ ವಯಸ್ಸು. ನಮ್ಮ ಗ್ರಾಮಕ್ಕೆ ಹತ್ತಿರವಾದ ದೊಡ್ಡ ಊರೆಂದರೆ ನಾಲ್ಕು ಮೈಲು ದೂರದಲ್ಲಿತ್ತು. ಅಲ್ಲಿಂದ ಬಾಡಿಗೆ ಸೈಕಲ್ಲು ತೆಗೆದುಕೊಂಡು ನಮ್ಮ ಚಿಕ್ಕಪ್ಪನವರೊಟ್ಟಿಗೆ ಅಲ್ಲಿಂದ ೧೫ ಮೈಲು ಆಚೆ ಇದ್ದ ಊರಿಗೆ ಹೋಗಿ ಗುಬ್ಬಿ ಕಂಪನಿ ನಾಟಕ ನೋಡಿದೆ. ರಾತ್ರಿ ಏಳರ ನಂತರ ಬೆಳಗಿನ ಐದು ಅಥವಾ ಆರು ಗಂಟೆಯ ತನಕ ಬಾಡಿಗೆ ಸೈಕಲ್‌ಗೆ ಮೂರು ಆಣೆ. ರಾತ್ರಿ ಹತ್ತಕ್ಕೆ ನಾಟಕ ಶುರುವಾಗಿ ಮುಂಜಾನೆ ಮೂರಕ್ಕೆ ಮುಗಿಯುವುದು. ಎರಡುಗಂಟೆ ಸೈಕಲ್ ಒತ್ತಿ ಬಾಡಿಗೆ ಸೈಕಲ್ ಬಿಟ್ಟು ಉಳಿದ ನಾಲ್ಕುಮೈಲು ಕಾಲ್ನಡಿಗೆ ಮಾಡಿ ಊರು ಸೇರುತ್ತಿದ್ದೆವು. ಈ ಸೈಕಲ್ ಸವಾರಿಯ ನೆನಪು ಬೇರೊಂದು ಕಾರಣಕ್ಕಾಗಿಯೂ ಹಸಿರಾಗಿದೆ. ಒಮ್ಮೆ ಹೀಗೆ ಹೋಗಿ ಬರುವಾಗ ಕ್ಯಾರಿಯರ್‌ನಲ್ಲಿ ಕುಳಿತಿದ್ದವನು ತೂಕಡಿಸಿ ಸ್ಪೋಕ್ಸ್ ಕಡ್ಡಿಗೆ ಕಾಲು ಸಿಕ್ಕಿಸಿಕೊಂಡು ಕತ್ತರಿಸಿ ರಕ್ತ ಸೋರಿದ್ದಿದೆ. ಗಾಯ ಮಾಯಬೇಕಾದರೆ ಹದಿನೈದು ದಿನ ಹಿಡಿಯಿತು. ಇದೇ ಗುಬ್ಬಿ ಕಂಪನಿಯನ್ನು ಮುಂದೊಂದು ದಿನ ಸೇರುತ್ತೇನೆ ಎಂದು ಆಗ ಅಂದುಕೊಂಡಿರಲಿಲ್ಲ. ಸೇರಿದ್ದಂತೂ ಆಕಸ್ಮಿಕ. ಗುಬ್ಬಿ ಕಂಪನಿಯಲ್ಲಿರುವಾಗಲೇ ಹಾರ್ಮೋನಿಯಂ ಬಾರಿಸುವುದು ಕಲಿತೆ. ಹಿಂದಿ ಭಾಷೆಯನ್ನು ಕಲಿಯುವ ಮನಸ್ಸಾಯಿತು. ಗಾಂಧೀಜಿಯವರು ಹೊರಡಿ

ಸುತ್ತಿದ್ದ 'ಹರಿಜನ್' ಪತ್ರಿಕೆಯನ್ನು ಓದುತ್ತಿದ್ದೆ. ಅದರಲ್ಲಿ ದೇಶ ಸೇವೆ ಮಾಡುವುದಕ್ಕಾಗಿ ಸ್ಪಷ್ಟವಾದ ಯಾವುದಾದರೊಂದು ಮಾರ್ಗವನ್ನು ಜನರು ಅನುಸರಿಸಬೇಕೆಂದು ಕರೆಯಿತ್ತಿದ್ದರು. ಜೈಲು ಶಿಕ್ಷೆ ಅನುಭವಿಸುವುದು, ಇಲ್ಲ ರಾಷ್ಟ್ರಭಾಷೆ ಕಲಿಯುವುದು ಅವರು ಜನರ ಮುಂದೊಡ್ಡಿದ ಎರಡು ಮಾರ್ಗಗಳು. ರಾಷ್ಟ್ರಭಾಷೆ ಕಲಿಯುವುದೆಂದು ನಾನದನ್ನು ಆರಿಸಿಕೊಂಡೆ; ಜೈಲಿಗೆ ಹೋಗಲು ನನಗೆ ಉತ್ಸಾಹವಿರಲಿಲ್ಲ. ಕಂಪನಿಯ ಮಾಲೀಕರು ನನ್ನ ಕಲಿಕೆಗೆ ಪ್ರೋತ್ಸಾಹ ನೀಡಿದರು. ನಂತರ ಬೆಂಗಳೂರಿನ ಪ್ರದರ್ಶನಗಳಾದ ಬಳಿಕ ಕಂಪನಿ ಮುಚ್ಚಿತು. ಕಂಪನಿಯಲ್ಲಿದ್ದ ಅನೇಕರು ಇತರೆ ಕಂಪನಿಗಳಿಗೆ ಸೇರಿಕೊಂಡರು. ಸ್ವಲ್ಪ ಕಾಲ ರಂಗಭೂಮಿಯಿಂದ ದೂರ ಉಳಿಯುವುದೆಂದು ನಾನು ತೀರ್ಮಾನ ತೆಗೆದುಕೊಂಡು ಹಿಂದಿ ಭಾಷೆ ಕಲಿಯುವುದರ ಕಡೆ ಗಮನ ಹರಿಸತೊಡಗಿದೆ. ಹಿಂದಿ 'ಪ್ರಚಾರಕ' ಪರೀಕ್ಷೆಗೆ ಕುಳಿತುಕೊಳ್ಳಲು ಕಂಪನಿ ಯಜಮಾನರೇ ಪ್ರೋತ್ಸಾಹ ನೀಡಿದರು. ಜಿ. ವಿ. ಅಯ್ಯರ್ ಮತ್ತು ಬಾಲಕೃಷ್ಣ ನನಗೆ ಆಶ್ರಯ ಕೊಟ್ಟರು. ಜಿ. ವಿ. ಅಯ್ಯರ್ ಆ ಕಾಲದಲ್ಲಿ ಅಂಗಡಿ ಮುಂಭಾಗದ ನಾಮಫಲಕ ಬರೆಯುವ ಕಾಯಕದಲ್ಲಿದ್ದರು. ಬಣ್ಣ ಅಳಿದು ಮಂಕಾಗಿದ್ದ ಬೋರ್ಡುಗಳನ್ನು ರಾತ್ರಿಯ ವೇಳೆ ಪತ್ತೆ ಮಾಡುವುದು, ಹಗಲುಹೊತ್ತು ಆ ಅಂಗಡಿಗಳ ಮಾಲೀಕರ ಹತ್ತಿರ ಹೋಗಿ ಮಾತನಾಡಿ 'ನಿಮ್ಮ ಅಂಗಡಿ ಬೋರ್ಡು ಬರೆಯಲೆ?' ಎಂದು ಕೇಳಿ ಒಪ್ಪಿಸಿ ಕೆಲಸ ಪಡೆಯುತ್ತಿದ್ದುದು ಜಿ. ವಿ. ಅಯ್ಯರ್‌ರವರ ರೀತಿಯಾಗಿತ್ತು. ಆ ಸಮಯದಲ್ಲೇ ಮಾರವಾಡಿಗಳ ಶಾಲೆಯೊಂದರಲ್ಲಿ ನಾನು ಹಿಂದಿ ಮೇಷ್ಟರಾಗಿ ಕೆಲಸಕ್ಕೆ ಸೇರಿಕೊಂಡೆ.

ಉಪಾಧ್ಯಾಯನಾಗಿ ತಿಂಗಳಿಗೆ ಐವತ್ತು ರೂಪಾಯಿ ಸಂಬಳ ಪಡೆಯುತ್ತಿದ್ದೆ. ಮೆಟ್ರಿಕ್ಯುಲೇಶನ್ ಪಾಸ್ ಮಾಡಿಕೊಂಡರೆ ಐದು ರೂಪಾಯಿ ಸಂಬಳದಲ್ಲಿ ಹೆಚ್ಚಾಗುವುದೆಂದು ಶಾಲೆಯ ಮುಖ್ಯೋಪಾಧ್ಯಾಯರು ನನಗೆ ತಿಳಿಸಿದರು. ಮದರಾಸು ವಿಶ್ವವಿದ್ಯಾನಿಲಯ ನಡೆಸುತ್ತಿದ್ದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತುಕೊಳ್ಳಬಹುದೆಂದು ಅವರು ಸೂಚಿಸಿದರು. ಬೋಧನಾ ಮಾಧ್ಯಮ ಆಂಗ್ಲಭಾಷೆಯಲ್ಲಿತ್ತು. ಶೇಕ್ಸ್‌ಪಿಯರ್‌ನ ಸಾನೆಟ್ಟುಗಳು, ಚಾರ್ಲ್ಸ್ ಡಿಕನ್ಸ್‌ನ 'ಎರಡು ನಗರಗಳ ಕಥೆ' ಮತ್ತು ಸ್ಟೀವನ್‌ಸನ್‌ನ 'ಸಿರಿ ದ್ವೀಪ' ಇವುಗಳನ್ನು ಓದಬೇಕಾಗಿತ್ತು. ನನಗೆ ಇಂಗ್ಲಿಷ್ ಅಷ್ಟು ಚೆನ್ನಾಗಿ ಬಾರದ ಕಾರಣ ಹೆದರಿದೆ. ಬನಾರಸ್ ವಿಶ್ವವಿದ್ಯಾನಿಲಯದ ಮೂಲಕ ಖಾಸಗಿಯಾಗಿ ಕುಳಿತು ಹಿಂದಿ ಮಾಧ್ಯಮದಲ್ಲಿ

ಮೆಟ್ರಿಕ್ಯುಲೇಶನ್ ತೆಗೆದುಕೊಳ್ಳ ಬಹುದೆಂದು ಇನ್ನೊಬ್ಬರು ಧೈರ್ಯ ತುಂಬಿದರು. ನನ್ನ ಕೆಲಸ ಬಿಟ್ಟೆ, ಹಾಡುವುದನ್ನು ಬಿಟ್ಟೆ. ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿ ಪರೀಕ್ಷೆ ಹೊತ್ತಿಗೆ ಬನಾರಸ್ಸಿಗೆ ಹೋಗಿ ಪರೀಕ್ಷೆ ಬರೆದು ಬರುವುದು ರೂಢಿ ಮಾಡಿಕೊಂಡೆ. ಹೀಗೆ ಮಾಡಿ ಮೆಟ್ರಿಕ್ಯುಲೇಶನ್ ಪಾಸ್ ಮಾಡಿದೆ, ಇಂಟರ್‌ಮೀಡಿಯೆಟ್ ನಂತರ ಬಿ.ಎ.ನೂ ಕೂಡ ಪಾಸ್ ಮಾಡಿದೆ.

ಬಿ.ಎ. ಪಾಸಾದ ಮೇಲೆ ಹಿಂದಿ ಭಾಷೆ ಮಾತನಾಡುವ ಊರಿನಲ್ಲೇ ಇದ್ದು ಹಿಂದಿ ಚೆನ್ನಾಗಿ ಕಲಿಯಬೇಕೆಂದು ನನಗೆ ಮನಸ್ಸಾಯಿತು. ಶಾಲೆಯಲ್ಲಿದ್ದ ನನ್ನ ಸಹೋದ್ಯೋಗಿಗಳು ಇನ್ನೇನು ಬಿ.ಎ. ಆಗಿದೆ, ಇದೇ ಶಾಲೆಯಲ್ಲಿ ಹೆಡ್‌ಮಾಸ್ಟರಾಗಿ ನೆಲವೂರುತ್ತಾನೆ ಎಂದು ಎಣಿಸಿದ್ದರು. ಆದರೆ ನನ್ನ ಜೀವನವೇ ವಿಚಿತ್ರ. ಎಣಿಕೆಯ ಪ್ರಕಾರ ಅದು ಎಂದೂ ನಡೆದದ್ದಿಲ್ಲ. ಬದಲಾವಣೆಯಿಂದ ಬದಲಾವಣೆಗೆ ಅದು ನಿರಂತರವಾಗಿ ನೆಲೆನಿಲ್ಲದೆ ಸಾಗುತ್ತಲೇ ಬಂದಿದೆ. ಹೀಗಾಗಿ ಬನಾರಸ್‌ನಲ್ಲಿ ಉಳಿದು–ಎಲ್ಲ ರಂಗಭೂಮಿ ಹಾಗೂ ಸಂಗೀತದ ಹಿಡಿತದಿಂದ ದೂರಾಗಿ–ಸ್ನಾತಕೋತ್ತರ ಪದವಿಗಾಗಿ ಅಭ್ಯಾಸ ಮಾಡತೊಡಗಿದೆ.

ಹಿಂದಿ ಸಾಹಿತ್ಯ ಕ್ಷೇತ್ರದಲ್ಲಿ ಸಿಂಹಸ್ವರೂಪಿಗಳಾದ ಮಹಾಪಂಡಿತರು ಆಗ ಬನಾರಸ್ ವಿಶ್ವವಿದ್ಯಾನಿಲಯದ ಹಿಂದಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. 'ಕಲ್ಪನಾ', 'ಮಾಧುರಿ', 'ಹಂಸ್' ಇತ್ಯಾದಿ ಸಾಹಿತ್ಯ ಪತ್ರಿಕೆಗಳನ್ನು ತರಿಸಿ ಓದುತ್ತಿದ್ದೆ. ಹಣವನ್ನು ಗುಬ್ಬಿ ವೀರಣ್ಣನವರು ಹಾಗೂ ಇತರೆ ಕೆಲವು ಸ್ನೇಹಿತರು ಕಳುಹಿಸುತ್ತಿದ್ದರು. ಎಲ್ಲಾ ಕೂಡಿಸಿ ಎಂಭತ್ತರಿಂದ ತೊಂಭತ್ತು ರೂಪಾಯಿ ಆಗುತ್ತಿತ್ತು. ಆ ಕಾಲಕ್ಕೆ ಅಷ್ಟು ಹಣ ಮಸ್ತು. ನಾನು ವಿದ್ಯಾರ್ಥಿನಿಲಯದಲ್ಲಿ ಉಳಿದಿದ್ದೆ.

ಎಂ.ಎ. ಓದುವಾಗ ಸಂಪ್ರಬಂಧ ಬರೆಯಲು "'ಲಯತತ್ವ' ಹಾಗೂ ಹಿಂದಿ ಕಾವ್ಯ" ಎಂಬ ವಿಷಯವನ್ನು ಆರಿಸಿಕೊಂಡಿದ್ದೆ. ಪಿ.ಎಚ್.ಡಿ. ಮಹಾ ಪ್ರಬಂಧಕ್ಕೆ ವಿಷಯ ಹುಡುಕುವ ಸಂದರ್ಭದಲ್ಲಿ ಹಿಂದಿ ವಿಭಾಗದ ಮುಖ್ಯಸ್ಥರಾಗಿದ್ದ ಹರಿಪ್ರಸಾದ್ ದ್ವಿವೇದಿಯವರು ನಾಟಕ ಕ್ಷೇತ್ರದಲ್ಲಿ ಯಾವುದಾದರೊಂದು ವಿಷಯವನ್ನು ಆರಿಸಿಕೊಳ್ಳುವಂತೆ ಸಲಹೆ ಮಾಡಿದರು. ಅದೇ ಸಂದರ್ಭದಲ್ಲಿ ಯಾವುದೋ ಒಂದು ಮುಷ್ಕರ ಶುರುವಾಗಿ ಮೂರು ತಿಂಗಳ ಕಾಲ ವಿಶ್ವವಿದ್ಯಾನಿಲಯ ಮುಚ್ಚಲ್ಪಟ್ಟಿತು. ನಾನು ನಂತರ ಕಲ್ಕತ್ತೆಯ ಕಡೆ ನಡೆದೆ. ಈ ನಡುವೆ ಪ್ರೇಮಾಕಾರಂತರನ್ನು ನಾನು ಮದುವೆಯಾದೆ. ಕಲಿಯುವ ಹಂಬಲವಿದ್ದ ಕಾಲದಲ್ಲಿ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಸೇರಲು

ಅರ್ಜಿ ಹಾಕಿದೆ. ಮೂವತ್ತೆರಡನೆಯ ವಯಸ್ಸಿನಲ್ಲಿ ನಾನು ರಾಷ್ಟ್ರೀಯ ನಾಟಕ ಶಾಲೆಯಲ್ಲಿ ವಿದ್ಯಾರ್ಥಿಯಾಗಿ ಸೇರಿಕೊಂಡೆ. ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಮೊದಲೆರಡು ವರ್ಷ ನಾನು ಹೆಚ್ಚು ಸಾಧಿಸಲಿಲ್ಲ. "ಸ್ವಪ್ನಾವಾಸವದತ್ತ" ನಾಟಕವನ್ನು ಸಂಸ್ಕೃತದಿಂದ ಹಿಂದಿ ಭಾಷೆಗೆ ಅನುವಾದ ಮಾಡಿದೆ. ರಂಗಭೂಮಿಗೆ ಸಂಬಂಧಿಸಿದ ಶಬ್ದಗಳನ್ನು ಕುರಿತಂತೆ ಒಂದು "ರಂಗ ಕೋಶ" ಬರೆದೆ. ಇದಕ್ಕೆ ನಾನೇ ಕೆಲವು ಪದಗಳನ್ನು ಟಂಕಿಸಿದೆ. ಮೂರನೇ ವರ್ಷದಲ್ಲಿ ವಿಶೇಷ ತರಬೇತಿಯ ಸಂದರ್ಭದಲ್ಲಿ ಗಿರೀಶ್ ಕಾರ್ನಾಡರ 'ತುಘಲಕ್' ನಾಟಕವನ್ನು ಹಿಂದಿಗೆ ಅನುವಾದ ಮಾಡಿದೆ. ಇಲ್ಲಿಂದ ಮುಂದೆ ನಾಟಕ ಶಾಲೆಯಲ್ಲಿ ನನ್ನ ಬಗ್ಗೆ ಉಳಿದವರ ಗೌರವ ಹೆಚ್ಚಾಯಿತು. ೧೯೬೪ ರಲ್ಲಿ ಶೇಕ್ಸ್‌ಪಿಯರ್‌ನ ನಾಲ್ಕನೇ ಜನ್ಮ ಶತಾಬ್ದಿಯ ನೆನಪಿಗಾಗಿ ಶಾ. ಬಾಲೂರಾಯರ ಸಂಪಾದಕತ್ವದಲ್ಲಿ "ಶೇಕ್ಸ್‌ಪಿಯರ್‌ಗೆ ನಮಸ್ಕಾರ" ಎಂಬ ಪುಸ್ತಕ ಹೊರತಂದೆವು. ನೇಮಿಚಂದ್ರ ಜೈನ್ ಅವರೊಡನೆ ಕೂಡಿ ಶ್ರೀರಂಗರ "ಕೇಳು ಜನಮೇಜಯ" ನಾಟಕವನ್ನು ಹಿಂದಿಗೆ ಅನುವಾದ ಮಾಡಿದೆ. ಈ ನಡುವೆ ಕಾರ್ನಾಡರ "ಹಯವದನ" ನಾಟಕವನ್ನು ನಾನೇ ಭಾಷಾಂತರಿಸಿ ಪ್ರಯೋಗಿಸಿದೆ.

ಅಲ್ಲಿಂದ ಕರ್ನಾಟಕಕ್ಕೆ ಬಂದು ಭೈರಪ್ಪನವರ "ವಂಶವೃಕ್ಷ" ಕಾದಂಬರಿಯನ್ನು ಚಲಚಿತ್ರ ಮಾಡಲು ತೊಡಗಿದೆ. ಇದಾದ ಬಳಿಕ ಮತ್ತೆ ದೆಹಲಿಯ ರಾಷ್ಟ್ರೀಯ ಕಲಾಶಾಲೆಯ ನಿರ್ದೇಶಕತ್ವ ಪ್ರಾಪ್ತವಾಯಿತು. ಹೀಗೆ ನಾನು ಒಂದು ಕಡೆ ನಿಲ್ಲದವನ ಹಾಗೆ ಊರಿನಿಂದ ಊರಿಗೆ ಸ್ಥಳ ಬದಲಾವಣೆ ಮಾಡುತ್ತಲೇ ಸಾಗಿದ್ದೇನೆ.

"ವಂಶವೃಕ್ಷದ" ಚಿತ್ರೀಕರಣವನ್ನು ಪೂರ್ಣಗೊಳಿಸಿ ಸಂಕಲನ ಕಾರ್ಯದಲ್ಲಿ ತೊಡಗಿದ ಸಮಯದಲ್ಲೇ ನಾಟಕ ಹಾಗೂ ರಂಗಭೂಮಿ ಕುರಿತಂತೆ ಬೆಂಗಳೂರು ವಿಶ್ವವಿದ್ಯಾನಿಲಯದವರು ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ನಾನು ಮತ್ತು ಗಿರೀಶ್ ಕಾರ್ನಾಡ್ ಹೋಗಿದ್ದೆವು. ಪಿ. ಲಂಕೇಶರು ಇದ್ದರು. ಲಂಕೇಶರು ಆವಾಗ ರಂಗ ಚಟುವಟಿಕೆಯಲ್ಲಿ ಪದಾರ್ಪಣ ಮಾಡುತ್ತಿದ್ದ ಸಮಯ. ಖ್ಯಾತ ಬೆಳಕು ತಜ್ಞರಾದ ರಾಮಮೂರ್ತಿ ಐದು ವರ್ಷಗಳ ಅಧ್ಯಯನದ ನಂತರ ಅಮೆರಿಕೆಯಿಂದ ಆಗತಾನೆ ಬಂದಿದ್ದರು. ಚಂದ್ರಶೇಖರ ಕಂಬಾರರೂ ಕೂಡ ಧಾರವಾಡದಿಂದ ಬೆಂಗಳೂರಿಗೆ ಅದೇ ತಾನೇ ಬಂದು ನೆಲೆಸಿದ್ದರು. ಅದೊಂದು ಅದ್ಭುತವಾದ ಸಂಗಮ."

ಕಾರಂತರನ್ನು ಮಾತನಾಡಲು ಬಿಟ್ಟರೆ ಮಾತನಾಡುತ್ತಲೇ ಇರುತ್ತಾರೆ. 'ದೆಹಲಿ

ನಾಟಕ ಶಾಲೆಯಲ್ಲಿ ಕಲಿಯುವ ಕಾಲಕ್ಕೆ ಚೆನ್ನಾಗಿ ಹಿಂದಿಯೂ ಮಾತನಾಡಲು ಬರುತ್ತಿರಲಿಲ್ಲ, ಇಂಗ್ಲೀಷಂತೂ ಸರಿಯೇ ಸರಿ' ಎನ್ನುವ ಕಾರಂತರು ಮಾತೃಭಾಷೆಯಲ್ಲಿ ಮಾತಿಗಿಳಿದರೆ ಹೊತ್ತು ಹೋಗುವುದೇ ಗೊತ್ತಾಗುವುದಿಲ್ಲ. ತಮ್ಮ ಅಗಾಧವಾದ ಅನುಭವವನ್ನು ಮುತ್ತು ಪೋಣಿಸಿದ ಹಾಗೆ ಒಂದೊಂದನ್ನೇ ಹೆಕ್ಕಿ ತೆಗೆದು ಕೇಳುಗರ ಮುಂದಿಡುವ ಕಲೆ ಕಾರಂತರಿಗೆ ಕರತಲಾ ಮಲಕವಾಗಿಲ್ಲ ಎನ್ನುವವರಿದ್ದಾರೆ. ಇದು ಒಂದು ಅರ್ಥದಲ್ಲಿ ನಿಜ. ಮಲೆನಾಡಿನ ಗುಡ್ಡದಿಂದಿಳಿಯುವ ಜಲಪಾತದಂತೆ ಕಾರಂತರ ಬದುಕು. ಬಯಲುಸೀಮೆಯ ನಿರುಮ್ಮಳ ನೀರಿನ ಹಾಗೆ ತಣ್ಣಗೆ ಹರಿಯುವುದು ಅವಕ್ಕೆ ತಿಳಿಯದು. ಬದುಕು ಹೇಗೊ ಭಾಷೆ ಹಾಗೆ. ಭೋರ್ಗರೆತವೇ ಅವರ ಜೀವ ನಾಡಿ. ಹಾಗಿಲ್ಲದೆ ಸಪ್ಪೆಯಾಗಿ ತೆಪ್ಪಗೆ ಒಂದು ಗೊತ್ತಿನಲ್ಲಿ ಗೂಟ ಹೊಡೆದು ಕುಳಿತ .ಕಾರಂತರನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ.

ದೆಹಲಿಯ ನಾಟಕಶಾಲೆಯ ನಿರ್ದೇಶಕತ್ವ, ಹಾಗೆಯೇ ಭೂಪಾಲದ ಭಾರತ್ ಭವನದ ನಿರ್ದೇಶಕತ್ವದ ನಂತರ ೧೯೮೯ರಲ್ಲಿ ಮೈಸೂರಿಗೆ ಬಂದು ಕಾರಂತರು "ರಂಗಾಯಣ"ವನ್ನು ಸ್ಥಾಪಿಸಿದರು. ಕರ್ನಾಟಕ ಸರ್ಕಾರದ ಅಧೀನದಲ್ಲಿ ನಡೆಯುತ್ತಿರುವ ಈ ನಾಟಕ ಶಾಲೆಯಲ್ಲಿ ಒಟ್ಟು ಇಪ್ಪತ್ನಾಲ್ಕು ಮಂದಿ ನಟನಟಿಯರಿದ್ದಾರೆ (ಹದಿನೆಂಟು ಜನ ನಟರು, ಆರು ಜನ ನಟಿಯರು). ಆರು ವರ್ಷದ ಹಿಂದೆ ಇವರು ವಿದ್ಯಾರ್ಥಿಗಳಾಗಿ ಸೇರಿದ್ದುದು ನಿಜವಾದರೂ ಈ ಆರುವರ್ಷಗಳ ಅವಧಿಯಲ್ಲಿ ಅವರು ರಂಗಭೂಮಿಯ ವಿವಿಧ ಮುಖಗಳನ್ನು ಚೆನ್ನಾಗಿ ಅರಿತಿರುವುದರಿಂದ ಈಗ ಸ್ವತಂತ್ರವಾಗಿ ನಾಟಕಗಳನ್ನು ಕೈಗೆತ್ತಿಕೊಂಡು ಪ್ರಯೋಗಿಸಬಲ್ಲ ಪ್ರೌಢಿಮೆಯನ್ನು ಗಳಿಸಿಕೊಂಡಿದ್ದಾರೆ. ಈ ರೆಪರ್ಟರಿಯಲ್ಲಿ ತರಬೇತು ಪಡೆಯುತ್ತಿರುವವರು ಮೂರು ಹಂತಗಳಲ್ಲಿ ಕೆಲಸ ಮಾಡುತ್ತಾರೆ. ಪ್ರತಿನಿತ್ಯ ಬೆಳಗ್ಗೆ ನಾಟಕವನ್ನು ಅಭ್ಯಾಸ ಮಾಡಿ ಸಂಜೆ ಅಭಿನಯಿಸುವುದು, ಈ ನಡುವೆ ಮುಂದೆ ತಾವು ಪ್ರದರ್ಶಿಸಲು ಉದ್ದೇಶಿಸಿರುವ ಬೇರೆ ನಾಟಕದ ಬಗ್ಗೆ ಸೃಜನಾತ್ಮಕವಾಗಿ ಚಿಂತಿಸುವುದು. ಮುಂಜಾನೆ ೬-೩೦ ಗಂಟೆಗೆ ಅವರ ತರಬೇತಿ ಪ್ರಾರಂಭವಾದರೆ ಸತತವಾಗಿ ಸುಮಾರು ಹತ್ತು ಗಂಟೆಯ ಕಾಲ ಅವರ ತಾಲೀಮು ನಡೆಯುತ್ತದೆ. ಅವರ ತರಬೇತಿಯಲ್ಲಿ ರಂಗ ಸಜ್ಜಿಕೆ, ವಸ್ತ್ರವಿನ್ಯಾಸ, ಬೆಳಕು ಮತ್ತು ಧ್ವನಿ, ಸಂಗೀತ, ಜಾನಪದ ನೃತ್ಯ ಹಾಗೂ ಸಮರ ಕಲೆಗಳು, ಮುಖವಾಡಗಳು ಹಾಗೂ ಪ್ರಸಾದನ, ಪೋಸ್ಟರ್ ವಿನ್ಯಾಸ ಮತ್ತು ಕರಪತ್ರ ತಯಾರಿಸುವುದು—ಇವು ಮುಖ್ಯವಾಗಿ ಸೇರಿರುತ್ತವೆ. ಅವರ ತರಬೇತಿಯನ್ನು ಚುರುಕುಗೊಳಿಸಲು ಅನುಕೂಲವಾಗುವಂತೆ ವಾರಕ್ಕೆ ಒಂದಾವರ್ತಿ ಮೈಸೂರಿನ ಆಜುಬಾಜುವಿನ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ, ಸಂತೆ, ಜಾತ್ರೆ, ಬಸ್ ನಿಲ್ದಾಣಗಳನ್ನು ವೀಕ್ಷಿಸಿ—ಆಯಾ ಸನ್ನಿವೇಶಗಳಲ್ಲಿ ಮಂದಿ ಮಾತನಾಡುವ ರೀತಿ, ರಿವಾಜುಗಳು, ಅವರ ಹಾವಭಾವಗಳನ್ನು ಗಮನಿಸುತ್ತಾರೆ. ಗ್ರಾಮೀಣ ಪರಿಸರದ ನಾಟಕಗಳನ್ನಾಡುವಾಗ ಅವರ ವೀಕ್ಷಣೆ ಅನುಕೂಲಕ್ಕೆ ಬರುತ್ತದೆ. ನಾಡಿನ

ಹಾಗೂ ಹೊರದೇಶಗಳ ಸುಪ್ರಸಿದ್ಧ ಕಲಾವಿದರು ಹಾಗೂ ನಾಟಕ ವಿಮರ್ಶಕರು ಬಂದು ಇಲ್ಲಿ ಉಪನ್ಯಾಸ ನೀಡುತ್ತಾರೆ. "ವಿಭಿನ್ನ ರೀತಿಯ ಗಾಳಿ, ಗಂಧಕ್ಕೆ ನಮ್ಮ ನಟ-ನಟಿಯರನ್ನೊಡ್ಡುವುದರಲ್ಲಿ ನಮಗೆ ನಂಬಿಕೆಯಿದೆ" ಎಂದು ಕಾರಂತರು ಹೇಳುತ್ತಾರೆ.

"ರಂಗಾಯಣ" ಮೈಸೂರಿನಲ್ಲಿ ನೆಲೆಗೊಂಡಾಗಿನಿಂದ ಪ್ರೇಕ್ಷಕ ವರ್ಗದಲ್ಲಿ ನಾಟಕಾಭಿರುಚಿ, ಬೆಳೆಯಲು ಸಹಾಯಕವಾಗಿದೆ. ರಂಗಾಯಣ ಮಕ್ಕಳಿಗಾಗಿ ಮೊದಲು ಎರಡು ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದೆ. ಕರ್ನಾಟಕದಲ್ಲಿ ಮನೆಮಾತಾಗಿರುವ "ಗೋವಿನ ಹಾಡು" ಹಾಗೂ ಅಷ್ಟೇ ಪ್ರಸಿದ್ಧವಾದ ಕುವೆಂಪು ಅವರ "ಬೊಮ್ಮನಹಳ್ಳಿಯ ಕಿಂದರಿಜೋಗಿ" ನೆನಪಿನಲ್ಲಿ ಉಳಿಯುವ ಪ್ರಾರಂಭಿಕ ಪ್ರಯೋಗಗಳು. ಕ್ರಿಸ್ತಪೂರ್ವದ ಗ್ರೀಕ್ ನಾಟಕಕಾರ ಯೂರಿಪಿಡೀಸ್ ವಿರಚಿತ "ಹಿಪ್ಪೊಲಿಟಸ್" ನಾಟಕವನ್ನು ಪ್ರಯೋಗಿಸುವುದರ ಮೂಲಕ "ರಂಗಾಯಣ" ರಾಷ್ಟ್ರಮಟ್ಟದ ಕೀರ್ತಿಗೆ ಅರ್ಹತೆ ಪಡೆಯಿತು. ಮೂರುಗಂಟೆಗಳ ಕಾಲ ನಿರಂತರವಾಗಿ ನಡೆಯುವ ಈ ನಾಟಕದಲ್ಲಿ ರಂಗಾಯಣದ ಕಲಾವಿದರು ತಮ್ಮ ಕಲಾಚೈತನ್ಯವನ್ನು ಪೂರ್ಣಪ್ರಮಾಣದಲ್ಲಿ ಪ್ರೇಕ್ಷಕನ ಮುಂದೆ ಅನಾವರಣ ಮಾಡಿ ತೋರಿದರು. ಇದಾದ ಬಳಿಕ ಕನ್ನಡದ ಶ್ರೇಷ್ಠ ಕಥೆಗಾರರಲ್ಲೊಬ್ಬರಾದ ದೇವನೂರು ಮಹಾದೇವ ಅವರ ಪ್ರಸಿದ್ಧ ನೀಳ್ಗಥೆ "ಕುಸುಮಬಾಲೆ" ಇನ್ನೊಂದು ರೀತಿಯಲ್ಲಿ ನಟ-ನಟಿಯರ ಪ್ರತಿಭೆಯನ್ನು ಒರೆಗೆ ಹಚ್ಚಿತು.

ಕನ್ನಡ ಸಂಸ್ಕೃತಿಯಲ್ಲಿ ಭದ್ರವಾಗಿ ನೆಲೆಯೂರಿರುವ ಕಾರಂತರು ಶೇಕ್ಸ್‌ಪಿಯರ್‌ನ ಆಕರ್ಷಣೆಗೆ ವಿಮುಖರಾಗಿರುವವರಲ್ಲ. ಜಗದ್ವಿಖ್ಯಾತ ನಾಟಕಕಾರ ಶೇಕ್ಸ್‌ಪಿಯರ್‌ನ "ಹ್ಯಾಮ್ಲೆಟ್" ನಾಟಕದ ದೃಶ್ಯಗಳನ್ನೂ "ಎಮಿಡ್‌ಸಮ್ಮರ್ ನೈಟ್ಸ್ ಡ್ರೀಮ್" ಅಥವಾ "ನಡು ಬೇಸಗೆಯ ಇರುಳಿನ ಕನಸು" ನಾಟಕವನ್ನೂ ಸಂಪೂರ್ಣವಾಗಿಯೂ ರಂಗದ ಮೇಲೆ ತಂದಿದ್ದಾರೆ, "ದೊರೆ ಲಿಯರ್" ನಾಟಕವೂ ಪ್ರಯೋಗವಾಗಿದೆ. ಕರ್ನಾಟಕದಲ್ಲಿ ರಂಗ ಚಳವಳಿಯನ್ನು ಉದ್ದೀಪನಗೊಳಿಸುವಲ್ಲಿ ಅವರು ಹೊರದೇಶದ ನಾಟಕಗಳನ್ನು ತಮ್ಮ ಸಹೋದ್ಯೋಗಿಗಳ ಸಹಾಯದಿಂದ ರೂಪಾಂತರಗೊಳಿಸಿ ಆಡಿಸಿದ್ದಾರೆ. ಈ ನಿಟ್ಟಿನಲ್ಲಿ ಇತ್ತೀಚೆಗೆ ರಂಗವೇರಿದ "ಗುಂಡೇಗೌಡನ ಚರಿತ್ರೆ" ಹೆಸರಿಸಲೇಬೇಕಾದ ನಾಟಕ. ಸುಮಾರು ಮೂರುವರೆ ಗಂಟೆಗಳ ಕಾಲ ನಡೆಯುವ ಈ ನಾಟಕ ರಂಗಾಯಣದ ಕಲಾವಿದರ ಅಭಿನಯಕೌಶಲ್ಯವನ್ನು ನಾನಾ ವಿಧವಾಗಿ ಪರೀಕ್ಷೆಗೆ ಒಡ್ಡುತ್ತದೆ. ಆರು ವರ್ಷಗಳ ಕಲಿಕೆಯ ನಂತರ ಕೈಗೆತ್ತಿಕೊಂಡಿರುವುದರಿಂದ ಈ ಅಗ್ನಿಪರೀಕ್ಷೆಯಲ್ಲಿ ಎಲ್ಲರೂ ತೇರ್ಗಡೆ ಹೊಂದಿದ್ದಾರೆ.

"ಗುಂಡೇಗೌಡನ ಚರಿತ್ರೆ"ಯ ಯಶಸ್ಸಿನಿಂದ ಉತ್ತೇಜಿತರಾಗಿ ಕನ್ನಡ ಸಾಹಿತ್ಯಲೋಕದಲ್ಲಿ ಒಂದು ವಿಶಿಷ್ಟ ಮಣಿಯಾಗಿ ಹೊಳೆಯುತ್ತಿರುವ ದಿವಂಗತ ರಾವ್ ಬಹದ್ದೂರರ ಪ್ರಸಿದ್ಧ ಕಾದಂಬರಿ "ಗ್ರಾಮಾಯಣ"ವನ್ನು ಪ್ರಯೋಗಿಸಲು "ರಂಗಾಯಣ" ಮುಂದಾಗಿರುವುದು ಸಂತೋಷದ ಸಂಗತಿಯಾಗಿದೆ. ಆರು ಗಂಟೆ

ಗಳ ಕಾಲ ನಡೆಯುವ ಈ ನಾಟಕವನ್ನು ಎರಡು ಭಾಗ ಮಾಡಿ ಎರಡು ದಿನ ಪ್ರದರ್ಶಿಸುವ ಯೋಜನೆ ಹಾಕಿಕೊಂಡಿದ್ದಾರೆ. ಈ ದಿಕ್ಕಿನಲ್ಲೂ ಕೂಡ "ಗ್ರಾಮಾಯಣ" ಒಂದು ವಿಶಿಷ್ಟ ಪ್ರಯೋಗವಾಗಲಿದೆ. ನಿಂತ ಊರಿನಲ್ಲಿ ನಿಲ್ಲದ ಕಾರಂತರು ತುಳಿದ ಜಾಡನ್ನೇ ತುಳಿಯುವುದರಲ್ಲಿ ನಂಬಿಕೆಯುಳ್ಳವರಲ್ಲ. ಹಳೆಯ ರಾಗವನ್ನು ಆಲಾಪಿಸಿದಾಗಲೂ ಅದು ತಮ್ಮ ಶ್ವಾಸಕೋಶದಲ್ಲಿ ಹಾಯ್ದು ಬರುವಾಗ ಹೊಸ ಕಂಪನದಿಂದ ಪರಿಮಳಿಸುವಂತೆ ಮಾಡುವ ಮಂತ್ರವಾದಿ. ಆ ಕಾರಣದಿಂದಲೇ ಅವರ "ಗ್ರಾಮಾಯಣ" ವನ್ನು ಪ್ರೇಕ್ಷಕರು ಎದುರು ನೋಡುವಂತಾಗಿದೆ.

ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಾದ "ರಂಗಾಯಣ" ಹೊಸ ಸರ್ಕಾರ ಅಧಿಕಾರ ಸೂತ್ರ ಹಿಡಿದಾಗೆಲ್ಲಾ ಮತ್ತೆ ಮತ್ತೆ ತನ್ನ ಅಸ್ತಿತ್ವದ ಬಗ್ಗೆ ಮನವರಿಕೆ ಮಾಡಬೇಕಾದದ್ದು ವಿಚಿತ್ರವೆನಿಸುತ್ತದೆ. ಕರ್ನಾಟಕದ ರಂಗ ಚಳವಳಿಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಂಡಿರುವ "ರಂಗಾಯಣ" ಹಣಕಾಸಿನ ಮುಗ್ಗಟ್ಟಿನಿಂದ ಎಂದೂ ಮುಗ್ಗರಿಸುವಂತಾಗಬಾರದು. ಪ್ರಾಯಶಃ ತಮ್ಮ ಕನಸನ್ನು ನನಸಾಗಿಸಲು ಇರುವ ತೊಡಕುಗಳ ಕಾರಣದಿಂದಲೊ ಏನೊ ಬದುಕಿನಲ್ಲಿ ನೀವು ಈಗ ಯಾವ ಘಟ್ಟ ಮುಟ್ಟಿದ್ದೀರಿ ಎಂದು ಪ್ರಶ್ನಿಸಿದರೆ ಕಾರಂತರು ಈ ರೀತಿ ಉತ್ತರಿಸುತ್ತಾರೆ: "ಯಾವುದೇ ಸಂಸ್ಥೆಯ ಮುಖ್ಯಸ್ಥನಾಗುವುದು ನನಗೆ ಬೇಕಾಗಿರಲಿಲ್ಲ. ಈ ಎಲ್ಲ ಜವಾಬ್ದಾರಿಯನ್ನು ಬಿಟ್ಟುಬಿಡಬೇಕೆಂದು ನಾನು ಗಂಭೀರವಾಗಿ ಯೋಚಿಸುತ್ತಿದ್ದೇನೆ. ಸ್ವತಂತ್ರವಾಗಿ ಮತ್ತು ಕೆಲವು ವಯಕ್ತಿಕವಾದ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಮನಸ್ಸಾಗುತ್ತಿದೆ ಅಥವಾ ಉಪನ್ಯಾಸಗಳನ್ನು ನೀಡಬೇಕು ಎನ್ನಿಸುತ್ತಿದೆ. ಈಗ "ರಂಗಾಯಣ"ಕ್ಕೆ ಅಗತ್ಯವಾಗಿರುವುದು ಯುವಕರ ಮುಂದಾಳತ್ವ. ನನಗೆ ಶಕ್ತಿ ಕಡಿಮೆಯಾಗಿದೆ; ಸೂತ್ರವನ್ನು ಯಾರಾದರೂ ತರುಣರಿಗೆ ಒಪ್ಪಿಸುವ ತವಕವಾಗಿದೆ. ವಯಕ್ತಿಕ ಯೋಜನೆಗಳಲ್ಲಿ ತೊಡಗಿಕೊಂಡರೇನೇ ನನಗೆ ಸಂಪೂರ್ಣ ತೃಪ್ತಿ ಎನ್ನಿಸಿದೆ."

ಹುಟ್ಟು ಕಲಾವಿದರಾದ ಕಾರಂತರು ಅರವತ್ತರ ಹರೆಯದಲ್ಲಿ 'ನೇಪಥ್ಯ'ಕ್ಕೆ ತೆರಳಿಬಿಡುವರೆಂಬ ಭಯವಿಲ್ಲ. ರಾಷ್ಟ್ರದ ಪ್ರತಿಷ್ಠಿತ ಬಹುಮಾನವಾದ "ಕಾಳಿದಾಸ್ ಸನ್ಮಾನ" ವನ್ನು ಗಳಿಸಿರುವ ಕಾರಂತರು ಹರ್ಷೋಲ್ಲಾಸದ ಹೊಸ ಅಧ್ಯಾಯವನ್ನು ತೆರೆದಿರುವ ಕುರುಹುಗಳು ಕಾಣಿಸುತ್ತಿವೆ. "ರಂಗಾಯಣ"ದ ನಿರ್ಮಾಣಕ್ಕೆ ಮೈಸೂರನ್ನು ಇವರು ಆಯ್ಕೆ ಮಾಡಿಕೊಂಡದ್ದು ಹೆಮ್ಮೆಯ ವಿಷಯ. ಇವರು ಹುಟ್ಟುಹಾಕಿರುವ ರಂಗ ಚಳವಳಿ ಪೂರ್ಣ ಫಲ ಕೊಡುವವರೆಗಾದರೂ ಇವರು ಇಲ್ಲಿ ನೆಲೆ ನಿಲ್ಲಲಿ; ರಂಗ ಪ್ರೇಮಿಗಳಿಂದ ಇವರಿಗೆ ಎಲ್ಲ ಬಗೆಯ ಸಹಕಾರವೂ ದೊರೆಯಲಿ. ಇನ್ನೂ ಅನೇಕ ಪುರಸ್ಕಾರಗಳು ಇವರನ್ನು ಹುಡುಕಿಕೊಂಡು ಬರಲಿ ಎಂದು ಹಾರೈಸುತ್ತೇನೆ.

ಪರಮಾಣು ಸ್ಥಾವರಗಳು ಮತ್ತು ಪರಿಸರ

ಜೆ. ಆರ್. ಲಕ್ಷ್ಮಣರಾವ್

ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತು. ಈ ಗಾದೆಯ ವಾಸ್ತವ ಮುಖ ಈಗ ಪ್ರಪಂಚಕ್ಕೆ ಸಾವು ನೋವು ಸಹಿತ ಪ್ರಕಟವಾಗುತ್ತಿದೆ. ನಿಸರ್ಗದ ಅಗಾಧ ಶಕ್ತಿನಿಧಿ "ಪರಮಾಣು ಶಕ್ತಿ" ಅಥವಾ "ಬೈಜಿಕ ಶಕ್ತಿ" ಮಾನವನ ವಶವಾಯಿತು. ಮಹಾಸಾಧನೆ ನಿಜ. ಆದರೆ ಇದನ್ನು ತಹಬಂದಿಯಲ್ಲಿಡಲು ಅವಶ್ಯವಾಗುವ ವಿವೇಕ ವಿಕಾಸಗೊಳ್ಳಲಿಲ್ಲ. ಫಲಿತಾಂಶ? ಭಸ್ಮಾಸುರತ್ವ. ಅಂದರೆ ಸಿಕ್ಕವರ ತಲೆ ಮೇಲೆ—ಅಂತಿಮವಾಗಿ ಖುದ್ದು ತನ್ನ ತಲೆ ಮೇಲೆಯೂ—ಕೈ ಇಟ್ಟು ಪರೀಕ್ಷೆ ಮಾಡುವ ಉತ್ಸಾಹೋನ್ಮಾದ. ಈ ವಿಷಯದ ಬಗ್ಗೆ ಅಧಿಕಾರಯುತವಾಗಿ ಬರೆಯಬಲ್ಲ. ಪ್ರೊ॥ ಜೆ. ಆರ್. ಲಕ್ಷಣರಾಯರ ಈ ಲೇಖನ ನಾವು ಎಂಥ ಜೀವಂತ ಜ್ವಾಲಾಮುಖಿಯ ಅಗ್ರದ ಮೇಲೆ ಕುಳಿತಿದ್ದೇವೆಂಬುದನ್ನು ಎಳೆ ಎಳೆಯಾಗಿ ವಿವರಿಸುತ್ತದೆ.

ವಿಕಿರಣಶೀಲ ಧಾತುಗಳ ಪರಮಾಣುಗಳು ಯಾವ ಬಾಹ್ಯ ಪ್ರಚೋದನೆಯೂ ಇಲ್ಲದೆ ಉಪಪರಮಾಣು ಕಣಗಳನ್ನು ಹೊರಕ್ಕೆಸೆದು ಕ್ಷಯಿಸಿ, ಕಡಮೆ ಪರಮಾಣು ತೂಕದ ಬೇರೊಂದು ಧಾತುವಿನ ಪರಮಾಣುಗಳಾಗುತ್ತವೆ. ಜೊತೆಗೆ ಅಪಾಯಕರವಾದ ಗ್ಯಾಮಾ ಕಿರಣಗಳ ರೂಪದಲ್ಲಿ ಶಕ್ತಿಯನ್ನೂ ಹೊರಸೂಸುತ್ತವೆ. ಅವು ಕ್ಷಯಿಸುವ ದರದ ಬಗ್ಗೆ ಒಂದು ಸ್ವಾರಸ್ಯವಿದೆ. ೧೦೦ ಗ್ರ್ಯಾಮ್ ವಿಕಿರಣಶೀಲ ಧಾತು ಕ್ಷಯಿಸಿ ೫೦ ಗ್ರ್ಯಾಮ್ ಆಗಲು ಎಷ್ಟು ಕಾಲ ತೆಗೆದುಕೊಳ್ಳುವುದೋ ಮುಂದೆ ಅಷ್ಟು ಕಾಲದಲ್ಲಿ, ನಾವು ನಿರೀಕ್ಷಿಸುವಂತೆ, ಉಳಿದ ೫೦ ಗ್ರ್ಯಾಮ್ ಕ್ಷಯಿಸಿಬಿಡುವುದಿಲ್ಲ; ಅದು ೨೫ ಗ್ರ್ಯಾಮ್ ಆಗುತ್ತದೆ. ಅಲ್ಲಿಂದ ಮುಂದೆ ಅಷ್ಟು ಕಾಲದಲ್ಲಿ ೧೨.೫ ಗ್ರ್ಯಾಮ್ ಆಗುತ್ತದೆ. ವಿಕಿರಣಶೀಲ ಪರಮಾಣುಗಳು ಹೀಗೆ ಮೊದಲಿದ್ದುದರ ಅರ್ಧವಷ್ಟಾಗಲು ತೆಗೆದುಕೊಳ್ಳುವ ಕಾಲವನ್ನು ಅರ್ಧಾಯುಷ್ಯ ಎಂದು ಕರೆಯುತ್ತಾರೆ.

ಭೂಮಿಯಲ್ಲಿ ಸಿಕ್ಕುವ ಯುರೇನಿಯಮ್, ಥೋರಿಯಮ್, ಪೊಟ್ಯಾಸಿಯಮ್ ರುಬಿಡಿಯಮ್ ಮುಂತಾದ ಧಾತುಗಳ ಎಲ್ಲ ವಿಕಿರಣಶೀಲ ಪರಮಾಣುಗಳ ಅರ್ಧಾಯುಷ್ಯವೂ ಹಲವು ನೂರು ಕೋಟಿ ವರ್ಷಗಳಷ್ಟಿರುವುದು ಗಮನಿಸಬೇಕಾದ

ಅಂಶ. ಏಕೆಂದರೆ, ಆ ಪರಮಾಣುಗಳು ತುಂಬ ನಿಧಾನವಾಗಿ ಕ್ಷಯಿಸುತ್ತವೆ;ನಮ್ಮ ಸುತ್ತಲ ಪ್ರದೇಶಕ್ಕೆ ಅವು ಹರಿಯಬಿಡುತ್ತಿರುವ ವಿಕಿರಣ ಗಣನೆಗೆ ಬಾರದಷ್ಟು ಅಲ್ಪ ಎಂಬುದು ಅದರಿಂದ ಗೊತ್ತಾಗುತ್ತದೆ. ಆದುದರಿಂದಲೇ ಗಿಡಮರಗಳೂ ಪ್ರಾಣಿ ಪಕ್ಷಿಗಳೂ ಭೂಮಿಯಮೇಲೆ ಸುರಕ್ಷಿತವಾಗಿರುವುದು. ಈ ಭೂಮಿಯ ಮೇಲೆ ಜೀವ ಮೊದಲು ಕಾಣಿಸಿಕೊಂಡುದು ಸುಮಾರು ೫೫-೬೦ ಕೋಟಿ ವರ್ಷಗಳಷ್ಟು ಹಿಂದೆ ಎಂಬುದು ವಿಜ್ಞಾನಿಗಳ ಅಂದಾಜು. ಅದಕ್ಕೆ ಮುಂಚೆ ಅಲ್ಪಾಯು ವಿಕಿರಣಶೀಲ ಪರಮಾಣುಗಳು, ಅಂದರೆ ಹತ್ತಿಪ್ಪತ್ತು ಸಾವಿರ ವರ್ಷಗಳು ಅಥವಾ ಇನ್ನೂ ಕಡಮೆ ಅರ್ಧಾಯುಷ್ಯ ಉಳ್ಳವು, ಬಹುಶಃ ಭೂಮಿಯ ಮೇಲೆ ಇದ್ದವು, ಅವು ಹೊರ ಹಾಕುತ್ತಿದ್ದ ತೀಕ್ಷ್ಣ ವಿಕಿರಣದ ಕಾರಣ ಭೂಮಿಯ ಮೇಲೆ ಜೀವ ಉದ್ಭವಿಸುವುದು ಸಾಧ್ಯವಿರಲಿಲ್ಲ, ಅವೆಲ್ಲ ಸಂಪೂರ್ಣವಾಗಿ ಕ್ಷಯಿಸಿ ಕಣ್ಮರೆಯಾಗಿಹೋಗಿ, ಅತಿ ದೀರ್ಘಾಯು ಪರಮಾಣುಗಳು ಮಾತ್ರ ಭೂಮಿಯ ಮೇಲೆ ಉಳಿದನಂತರ ಜೀವದ ಉಗಮ ಸಾಧ್ಯವಾಯಿತು ಎಂದು ತೀರ್ಮಾನಿಸಲು ಅವಕಾಶವಿದೆ.

೬೦ ಕೋಟಿ ವರ್ಷಗಳಷ್ಟು ಹಿಂದೆ ಉದ್ಭವಿಸಿದ ಆದಿಮ ಜೀವಿ, ವಿಕಾಸ ಪ್ರಕ್ರಿಯೆಗೆ ಒಳಗಾದ್ದರಿಂದ ಇಂದು ಕಂಡು ಬರುವ ಅಪಾರ ಜೀವವೈವಿಧ್ಯ ನಿರ್ಮಾಣವಾಯಿತು. ಇಷ್ಟು ದೀರ್ಘಕಾಲ ಜೀವಿಗಳು ನೆಮ್ಮದಿಯಿಂದ ಜೀವಿಸುತ್ತಿದ್ದ ವಿಕಿರಣ ಮುಕ್ತ ಪರಿಸರಕ್ಕೆ ಇಂದು ನಾವು ತೀಕ್ಷ್ಣ ವಿಕಿರಣವನ್ನು ಕಾರಬಲ್ಲ ಅಲ್ಪಾಯು ವಿಕಿರಣಶೀಲ ಪರಮಾಣುಗಳನ್ನು ಸೇರಿಸಿ ಆ ಪರಿಸರವನ್ನು ಕಲುಷಿತಗೊಳಿಸುತ್ತಿದ್ದೇವೆ. ಸುಮಾರು ಐವತ್ತು ವರ್ಷಗಳಷ್ಟು ಹಿಂದೆ ಪ್ರಾರಂಭವಾದ ಪರಮಾಣು ಯುಗದ ಕೊಡುಗೆ ಇದು. ಪರಮಾಣು ಯುಗಕ್ಕೆ ನಾಂದಿಯಾದದ್ದು, ಯುರೇನಿಯಮ್ ವಿದಲನದ ಆವಿಷ್ಕಾರ. ಯುರೇನಿಯಮ್ ಪರಮಾಣು ಬೀಜದೊಳಕ್ಕೆ ಒಂದು ನ್ಯೂಟ್ರಾನ್ ಹೋಗುವಂತೆ ಮಾಡಿದರೆ, ಆ ಬೀಜ ಇಬ್ಭಾಗವಾಗಿ ಒಡೆದು ಅತ್ಯಧಿಕ ಶಕ್ತಿಯನ್ನು ಹೊರಹಾಕುವುದಲ್ಲದೆ ಎರಡು ಮೂರು ಬಿಡಿ ನ್ಯೂಟ್ರಾನ್‌ಗಳನ್ನು ಹೊರಗೆಡಹುತ್ತದೆ. ವಿದಲನ ಕ್ರಿಯೆಯಲ್ಲಿ ಹೊರಬೀಳುವ ನ್ಯೂಟ್ರಾನುಗಳು ಹತ್ತಿರದಲ್ಲಿರುವ ಬೇರೆ ಯುರೇನಿಯಮ್ ಬೀಜಗಳನ್ನು ವಿದಲಿಸುವಂತೆ ಅಣಿಗೊಳಿಸಬಹುದು. ಅಂಥ ಏರ್ಪಾಟನ್ನು ಮುಂದುವರಿಸಿ ವಿದಲನಗಳ ಸರಣಿಯನ್ನುಂಟುಮಾಡಬಹುದು. ಅದರಿಂದ ಅಪಾರ ಶಕ್ತಿಯನ್ನು ಬಿಡುಗಡೆ ಮಾಡಬಹುದು. ಯುರೇನಿಯಮ್ ಗಟ್ಟಿಯೊಂದರಲ್ಲಿ ಹಾಗೆ ಸರಪಳಿ ಕ್ರಿಯೆಯನ್ನು ಬೆಳೆಸಿದರೆ ಹತ್ತಿಪ್ಪತ್ತು ಕಿಲೊಗ್ರ್ಯಾಮ್ ತೂಕದ ಯುರೇನಿಯಮ್ ಗಟ್ಟಿಯಲ್ಲಿಯ ಎಲ್ಲ ಯುರೇನಿಯಮ್ ಪರಮಾಣು ಬೀಜಗಳೂ ಕ್ಷಣಾರ್ಧದಲ್ಲಿ ವಿದಲನಗೊಂಡು ಪ್ರಲಯಕರ ಆಸ್ಫೋಟನೆ ಉಂಟಾಗುತ್ತದೆ. ಅದನ್ನೇ ಪರಮಾಣು ಬಾಂಬ್ ಎಂದು ಕರೆಯುವುದು. ಯುರೇನಿಯಮ್ ವಿದಲನವನ್ನು ಶೋಧಿಸಿದುದು ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾದ ಸಮಯದಲ್ಲಿ (೧೯೩೯). ಸಹಜವಾಗಿಯೇ ಅದು ವಿಧ್ವಂಸಕ

ಪರಮಾಣು ಬಾಂಬಿನ ನಿರ್ಮಾಣದಲ್ಲಿ ಪರ್ಯವಸಾನಗೊಂಡಿತು. ಇಂದಿನ ಪರಮಾಣು ವಿದ್ಯುತ್‌ಸ್ಥಾವರಗಳಲ್ಲಾದರೋ ಅದೇ ವಿದಲನ ಸರಪಳಿ ಕ್ರಿಯೆಯನ್ನು ನಿಯಂತ್ರಿತ ರೀತಿಯಲ್ಲಿ ನಡೆಸಿ, ಅದರಿಂದ ಒದಗುವ ಶಕ್ತಿಯನ್ನು ವಿದ್ಯುತ್ತಾಗಿ ಮಾರ್ಪಡಿಸುತ್ತಾರೆ.

ಯುರೇನಿಯಮ್ ಪರಮಾಣುಬೀಜ ವಿದಲನಗೊಂಡಾಗ ಉತ್ಪತ್ತಿಯಾಗುವ ಅದರ ತುಣುಕುಗಳು ಅಲ್ಪಾಯುಷಿ ವಿಕಿರಣಶೀಲ ಪರಮಾಣುಗಳು. ಅವುಗಳ ಅರ್ಧಾಯುಷ್ಯ ನೂರಿನ್ನೂರು ವರ್ಷಗಳು, ಹತ್ತಿಪ್ಪತ್ತು ವರ್ಷಗಳು, ಇನ್ನು ಕೆಲವು ವೇಳೆ ಕೇವಲ ಕೆಲವು ದಿನಗಳು ಅಥವಾ ಗಂಟೆಗಳು. ಸಹಜವಾಗಿಯೇ ಅವು ತೀಕ್ಷ್ಣವಾದ ಮಾರಕ ವಿಕಿರಣವನ್ನು ಹೊರಚೆಲ್ಲುತ್ತವೆ. ಇಂದು ಪರಿಸರವನ್ನು ಹದಗೆಡಿಸುತ್ತಿರುವುದು ಈ ಕೃತಕ (ಅಂದರೆ ಮನುಷ್ಯಕೃತ) ವಿಕಿರಣಶೀಲ ಪರಮಾಣುಗಳು.

ಪರಿಸರವನ್ನು ಹದಗೆಡಿಸುವುದು ಎಂದರೇನು? ಪರಿಸರದಲ್ಲಿ ಸೇರಿಕೊಂಡು ಮನುಷ್ಯನಿಗೂ ಇತರ ಜೀವಿಗಳಿಗೂ ಹಾನಿಯುಂಟು ಮಾಡುವುದು ತಾನೆ. ವಿಕಿರಣಶೀಲ ಪದಾರ್ಥಗಳಿಂದ ಹೊಮ್ಮುವ ಬೈಜಿಕ ವಿಕಿರಣ ಅಡೆತಡೆ ಇಲ್ಲದೆ ಮನುಷ್ಯನ ದೇಹವನ್ನು ಹೊಕ್ಕು ಹಲವಾರು ರೀತಿಯಲ್ಲಿ ಕೆಡಕುಂಟು ಮಾಡುತ್ತದೆ. ಇಂಥ ವಿಕಿರಣ ದೇಹದಲ್ಲಿಯ ಜೀವಕೋಶಗಳನ್ನು ತಾಡಿದಾಗ ಕೆಲವೊಮ್ಮೆ ಆ ಜೀವಕೋಶವನ್ನು ಕ್ಯಾನ್ಸರ್ ಜೀವಕೋಶವಾಗಿ ಮಾರ್ಪಡಿಸುವುದುಂಟು. ಆದುದರಿಂದ ವ್ಯಕ್ತಿಯು ವಿಕಿರಣಕ್ಕೆ ಹೆಚ್ಚು ಹೆಚ್ಚು ಕಾಲ ಮೈಒಡ್ಡಿದಷ್ಟೂ ಆತನಿಗೆ ಕ್ಯಾನ್ಸರ್ ಬರುವ ಸಂಭವ ಹೆಚ್ಚಾಗುತ್ತಹೋಗುತ್ತದೆ. ಇನ್ನು ಕೆಲವು ವೇಳೆ ಜೀವಕೋಶದ ನ್ಯೂಕ್ಲಿಯಸನ್ನು ತಾಡಿಸಿ ಅದರಲ್ಲಿರುವ ಜೀನ್‌ಗಳನ್ನು ಬದಲಾಯಿಸಿಬಿಡುತ್ತದೆ. ಆದರಿಂದಾಗಿ ವ್ಯಕ್ತಿಯ ಆನುವಂಶಿಕತೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಅದರ ಪರಿಣಾಮ ಆ ವ್ಯಕ್ತಿಯಲ್ಲಿ ಪ್ರಕಟವಾಗುವುದಿಲ್ಲ; ವ್ಯಕ್ತಿಯ ಮುಂದಿನ ಪೀಳಿಗೆಯಲ್ಲಿ ಕಾಣಿಸಿಕೊಳ್ಳುತ್ತದೆ. ಹಾಗೆ ಉಂಟಾಗುವ ಬದಲಾವಣೆಗಳು ಸಾಮಾನ್ಯವಾಗಿ ಅನಪೇಕ್ಷಣೀಯವಾದವು. ಆದ್ದರಿಂದ ಮುಂದಿನ ಪೀಳಿಗೆಯಲ್ಲಿ ಅಂಗವಿಕಲತೆ ಮುಂತಾದ ಅಜನ್ಮ ದೋಷಗಳು ಕಂಡು ಬರುತ್ತವೆ. ದೇಹದ ಕೆಲವು ಭಾಗಗಳು ಇನ್ನಿತರ ಭಾಗಗಳಿಗಿಂತ ಸುಲಭವಾಗಿ ಬೈಜಿಕ ವಿಕಿರಣದಿಂದ ಪ್ರಭಾವಿತವಾಗುತ್ತವೆ. ಉದಾಹರಣೆಗೆ, ಜನನಗ್ರಂಥಿಗಳು ಹಾಗೆ ಸುಲಭವಾಗಿ ಪ್ರಭಾವಿತವಾಗುವುದರಿಂದ ವ್ಯಕ್ತಿಯ ಸಂತಾನ ಶಕ್ತಿ ನಾಶವಾಗಬಹುದು. ಅಂತೆಯೇ ಮೂಳೆಯ ನೆಣ ಸುಲಭವಾಗಿ ಪ್ರಭಾವಿತವಾಗುವುದರಿಂದ ಬಿಳಿಯ ರಕ್ತಕಣಗಳ ಉತ್ಪಾದನೆ ಕುಂಠಿತಗೊಂಡು ವ್ಯಕ್ತಿಯು ಸೋಂಕುನಿರೋಧಕ ಶಕ್ತಿಯನ್ನು ಕಳೆದುಕೊಳ್ಳಬಹುದು.

ಸ್ಥಾವರಗಳ ಸಮೀಪದ ಪರಿಸರ

ಯುರೇನಿಯಮ್ ವಿದಲನದಿಂದ ಉತ್ಪತ್ತಿಯಾಗುವ ಅಲ್ಪಾಯುಷಿ ವಿಕಿರಣಶೀಲ ಪರಮಾಣುಗಳಿಂದ ಪರಿಸರ ಮಲಿನಗೊಳ್ಳುವುದು ಬೈಜಿಕ ಸ್ಫೋಟನೆಗಳಿಂದಲೇ ಹೊರತು ಪರಮಾಣು ಸ್ಥಾವರಗಳಿಂದಲ್ಲ

ಎಂದು ವಾದಿಸಬಹುದು. ಏಕೆಂದರೆ ಬೈಜಿಕ ಸ್ಫೋಟನೆಗಳು ವಿಕಿರಣಶೀಲ ಪರಮಾಣುಗಳನ್ನು ವಾಯುಮಂಡಲದಲ್ಲಿ ಹರಡುತ್ತವೆ, ನಿಜ. ಪರಮಾಣು ಸ್ಥಾವರಗಳಾದರೋ ಸೀಸ, ಬೆರೈಟಿಸ್ ಮತ್ತು ಕಾಂಕ್ರೀಟ್‌ಗಳಿಂದ ರಚಿಸಿದ ದಪ್ಪನಾದ ಗೋಡೆಗಳ ರಕ್ಷಣೆ ಪಡೆದಿರುತ್ತವೆ. ಅವುಗಳ ಮೂಲಕ ಸೋರಿ ಹೊರಕ್ಕೆ ಬರುವ ವಿಕಿರಣ ಪ್ರಮಾಣ ಅತ್ಯಲ್ಪ. ಪರಮಾಣು ವಿದ್ಯುತ್ತಿನ ಪರವಾಗಿ ವಾದಿಸುವವರ ಪ್ರಕಾರ ನಿಸರ್ಗದಲ್ಲಿ ನಮ್ಮ ಸುತ್ತಮುತ್ತ ಇರುವ ಹಿನ್ನೆಲೆ ವಿಕಿರಣಕ್ಕೆ ರಿಯಾಕ್ಟರ್‌ಗಳಿಂದ ಬಂದು ಸೇರುವ ಹೆಚ್ಚಿಗೆ ವಿಕಿರಣ ಶೇಕಡಾ ಒಂದರಷ್ಟು ಸಹ ಇಲ್ಲ. ಆದರೆ ಪರಮಾಣು ಸ್ಥಾವರಗಳ ಸಮೀಪದಲ್ಲಿ ವಾಸಿಸುವವರ ಮತ್ತು ರಿಯಾಕ್ಟರ್ ಕೆಲಸಗಾರರ ಆರೋಗ್ಯವನ್ನು ಕುರಿತು ನಡೆಸಿರುವ ಅಧ್ಯಯನಗಳು ಈ ಅಭಿಪ್ರಾಯವನ್ನು ಬೆಂಬಲಿಸುವುದಿಲ್ಲ.

ಬ್ರಿಟನ್ನಿನ ಸ್ಟೆಲ್ಲಾಫೀಲ್ಡ್ ಬೈಜಿಕ ಸ್ಥಾವರದ ಕೆಲಸಗಾರರ ಮಕ್ಕಳ ಪೈಕಿ ಶೇ. ಎಷ್ಟು ಮಂದಿಗೆ ಲ್ಯೂಕೀಮಿಯ (ರಕ್ತದ ಕ್ಯಾನ್ಸರ್) ರೋಗ ಬಂದಿತೆಂಬುದನ್ನು ಐದುವರ್ಷ ಕಾಲ ಲೆಕ್ಕ ಇಟ್ಟು ನೋಡಿದಾಗ ಆ ಸಂಖ್ಯೆ ದೂರದ ಸ್ಥಳಗಳಿಂದ ಪಡೆದ ಅದೇ ಸಂಖ್ಯೆಯ ಆರರಷ್ಟು, ಏಳರಷ್ಟು, ಎಂಟರಷ್ಟು ಇದ್ದುದು ಕಂಡುಬಂದಿದೆ. ಅದೇ ರೀತಿ ಅಮೆರಿಕದ ಮೆಸಾಚುಸೆಟ್ಸ್ ಸಂಸ್ಥಾನದಲ್ಲಿರುವ ಪಿಲ್‌ಗ್ರಿಮ್ ಬೈಜಿಕ ಸ್ಥಾವರದ ಆಸುಪಾಸಿನಲ್ಲಿ ವಾಸಿಸುವ ವಯಸ್ಕರ ಪೈಕಿ ಎಷ್ಟು ಮಂದಿಗೆ ಲ್ಯೂಕೀಮಿಯ ಬಂದಿತೆಂಬುದನ್ನು ಐದು ವರ್ಷ ಕಾಲ ದಾಖಲಿಸಿಕೊಂಡು ನೋಡಿದಾಗ, ಆ ಸಂಖ್ಯೆ ಇತರ ಜನಸಮುದಾಯಗಳಲ್ಲಿ ಕಂಡುಬಂದ ಅದೇ ಸಂಖ್ಯೆಯ ನಾಲ್ಕರಷ್ಟಿದ್ದುದು ಕಂಡುಬಂದಿದೆ. ಈ ಅಧ್ಯಯನಗಳ ವಿವರಗಳು ಪ್ರತಿಷ್ಠಿತ ವಿಜ್ಞಾನ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪರಮಾಣು ಸ್ಥಾವರಗಳಿಂದ ಸುತ್ತಲ ಪರಿಸರಕ್ಕೆ ಅಪಾಯವಿಲ್ಲ ಎಂಬ ಮಾತನ್ನು ಒಪ್ಪಲು ಈ ಅಧ್ಯಯನಗಳು ಅಡ್ಡಿ ಬರುತ್ತವೆ.

ಬೈಜಿಕ ಕಸ

ಪರಮಾಣು ಸ್ಥಾವರಗಳಿಂದ ಪರಿಸರಕ್ಕೆ ಇನ್ನೊಂದು ಬಗೆಯ ಅಪಾಯವಿದೆ. ಇತರ ಔದ್ಯಮಿಕ ಸ್ಥಾವರಗಳಲ್ಲಿ ಹೇಗೋ ಹಾಗೆ ಪರಮಾಣು ಸ್ಥಾವರಗಳಲ್ಲಿಯೂ ತ್ಯಾಜ್ಯ ವಸ್ತುಗಳನ್ನೊಳಗೊಂಡ ಕಸ ಉತ್ಪತ್ತಿಯಾಗುತ್ತದೆ. ಇತರ ಸ್ಥಾವರಗಳ ಕಸದಂತೆ ಬೈಜಿಕ ಕಸ ಸೀಮಿತ ಅಪಾಯದ್ದಲ್ಲ. ಅದು ಅನೇಕ ಶತಮಾನಗಳ ಕಾಲ ಸತತವಾಗಿ ಅಪಾಯಕರ ವಿಕಿರಣವನ್ನು ಹೊರಹಾಕುವುದರಿಂದ ಅಷ್ಟು ದೀರ್ಘಕಾಲ ಅದು ಮನುಷ್ಯರ ಸಂಪರ್ಕಕ್ಕೆ ಬರದಂತೆ ನೋಡಿಕೊಳ್ಳುವುದು ಹೇಗೆ? ಪರಮಾಣು ಉದ್ಯಮಿಗಳಿಗೆ ಹಾಗೂ ಪರಮಾಣು ವಿಜ್ಞಾನಿಗಳಿಗೆ ಈ ಪ್ರಶ್ನೆಯನ್ನು ಹಾಕಿದರೆ ಅವರ ಬಳಿ ಸಿದ್ಧವಾಗಿರುವ ಒಂದು ಉತ್ತರ ಇದೆ. ಸಾಮಾನ್ಯವಾಗಿ ದ್ರವರೂಪದಲ್ಲಿ ದೊರೆಯುವ ಬೈಜಿಕ ಕಸವನ್ನು ಚೆನ್ನಾಗಿ ಕಾಸಿ ಸಾರೀಕರಿಸುವುದು. ಅನಂತರ ಅದನ್ನು ಇಂಗಿಸಿ, ಉಳಿಯುವ ಘನ ಪದಾರ್ಥವನ್ನು ಗಾಜಿನ ಪುಡಿಯೊಂದಿಗೆ ಕಾಸುವುದು. ದ್ರವ ಗಾಜಿನಲ್ಲಿ ಆ ಪದಾರ್ಥ ಲೀನವಾಗುತ್ತದೆ.

ಅನಂತರ ತಣಿಸಿದರೆ ಗಾಜಿನ ಒಂದು ಗಟ್ಟಿ ದೊರೆಯುತ್ತದೆ. ಅದರ ಮೇಲೆ ನೀರು ಹರಿದರೂ ವಿಕಿರಣಶೀಲ ಪದಾರ್ಥ ನೀರಿನಲ್ಲಿ ಕೊಚ್ಚಿಹೋಗದಂತೆ ಅದನ್ನು ಬಂಧಿಸುವುದು ಈ ಕಾಚೀಕರಣದ (Vitrification) ಉದ್ದೇಶ. ಹೀಗೆ ಕಾಚೀಕರಿಸಿದ ಬೈಜಿಕ ಕಸವನ್ನು ಉಕ್ಕಿನ ಸಂಪುಟದಲ್ಲಿಟ್ಟು ಒಂದು ಕಿಲೊಮೀಟರ್ ಆಳದಲ್ಲಿ ನಿರ್ಮಿಸಿದ ಕಾಂಕ್ರೀಟ್ ಬಾವಿಯೊಳಕ್ಕೆ ಇಳಿಸಿ ಅದನ್ನು ಹೂತುಬಿಡುವುದು.

ಸಮಸ್ಯೆಗೆ ಅತ್ಯಂತ ಸಮರ್ಪಕ ಪರಿಹಾರ ಎಂದು ಪರಮಾಣು ವಿಜ್ಞಾನಿಗಳು ಇದನ್ನು ವರ್ಣಿಸುತ್ತಿರುವರಾದರೂ ಎಲ್ಲಿಯೂ ಇದನ್ನು ಕಾರ್ಯಗತ ಮಾಡಿಲ್ಲ. ಸುಮಾರು ನಾಲ್ಕು ದಶಕಗಳಿಂದ ಪ್ರಪಂಚಾದ್ಯಂತ ಹಲವು ನೂರು ಪರಮಾಣು ಸ್ಥಾವರಗಳು ಕೆಲಸ ಮಾಡುತ್ತಿವೆಯಾದರೂ ಎಲ್ಲಿಯೂ ಇದನ್ನು ಕಾರ್ಯರೂಪಕ್ಕೆ ತಂದಿಲ್ಲವೇಕೆ? ಕಸವನ್ನು ಹೂಳಲು ಯಾವ ನಿವೇಶನವನ್ನು ಆಯ್ಕೆಮಾಡಿದರೂ ನೆರೆಹೊರೆಯ ಜನ ಅದಕ್ಕೆ ಅಡ್ಡಿ ಬರುತ್ತಿದ್ದಾರೆ. ಜಗತ್ತಿನ ಎಲ್ಲೆಡೆಯಲ್ಲಿಯೂ ಪರಮಾಣು ವಿಜ್ಞಾನಿಗಳು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವುದು ಇದಕ್ಕೆ ಕಾರಣ. ಪರಿಣಾಮವಾಗಿ ಸಾರೀಕರಿಸಿದ ಕಸವನ್ನು ಉಕ್ಕಿನ ತೊಟ್ಟಿಗಳಲ್ಲಿ ತುಂಬಿ ಪರಮಾಣು ಸ್ಥಾವರಗಳ ನಿವೇಶನದಲ್ಲಿಯೇ ಕೊಠಡಿಗಳಲ್ಲಿರಿಸಿದ್ದಾರೆ. ತಮ್ಮ ಅನಿಶ್ಚಿತ ಭವಿಷ್ಯವನ್ನು ಇದಿರು ನೋಡುತ್ತಿರುವ ಆ ತೊಟ್ಟಿಗಳಲ್ಲಿ ಅನೇಕ ವೇಳೆ ವಿಕಿರಣಶೀಲ ಪದಾರ್ಥಗಳು ಗಸಿಯ ರೂಪದಲ್ಲಿ ತೊಟ್ಟಿಯ ತಳಭಾಗದಲ್ಲಿ ಸಂಗ್ರಹಗೊಂಡಿವೆ. ಅದರಿಂದ ಆಶಿಯಾದ ಶಾಖ ಬಿಡುಗಡೆಯಾಗಿ, ತೊಟ್ಟಿಗಳು ಸೀಳಿ, ವಿಕಿರಣಶೀಲ ಪದಾರ್ಥಗಳು ಸೋರಿ ಹೊರಕ್ಕೆ ಹರಿದುಬಂದು, ಪರಿಸರವನ್ನು ಕಲುಷಿತಗೊಳಿಸುತ್ತಿವೆ.

ಆಕಸ್ಮಿಕಗಳು

If a thing can go wrong, it will–ಕೆಟ್ಟುಹೋಗಬಲ್ಲದು ಯಾವುದೇ ಆಗಲಿ, ಅದು ಕೆಟ್ಟುಹೋಗುವುದು ಖಂಡಿತ ಎಂಬ ಅನುಭವಸಿದ್ಧ ಮಾತು ಎಂಜನಿಯರುಗಳ ಮತ್ತು ತಂತ್ರವಿದರ ವಲಯದಲ್ಲಿ ಪ್ರಚಲಿತವಾಗಿದೆ. ಮರ್ಫಿನಿಯಮ ಎಂದು ಪ್ರಸಿದ್ಧವಾಗಿರುವ ಈ ಮಾತು ಪರಮಾಣು ಸ್ಥಾವರಗಳಿಗೂ ಅನ್ವಯಿಸುತ್ತದೆ. ಒಂದು ಕುತೂಹಲಕರ ವಿಷಯವೆಂದರೆ, ಬೇರಾವ ಉದ್ಯಮದ ಸಂಬಂಧದಲ್ಲಿಯೂ ಸ್ಥಾವರದಲ್ಲಾಗಬಹುದಾದ ಅಪಘಾತದ ಬಗ್ಗೆ ಸಾರ್ವಜನಿಕರು ಆತಂಕ ವ್ಯಕ್ತಪಡಿಸುವುದಿಲ್ಲ, ಅದರ ಬಗ್ಗೆ ಉದ್ಯಮಪತಿಗಳು ಅಳುಕಿನಿಂದ ಮಾತನಾಡುವುದಿಲ್ಲ. ಪರಮಾಣು ಸ್ಥಾವರಗಳಲ್ಲಿ ಆಗಬಹುದಾದ ಅಪಘಾತಗಳ ಬಗ್ಗೆ ಸಾರ್ವಜನಿಕರು ಆತಂಕಪಡುವುದೂ ವಿರಳವಲ್ಲ. ಸ್ಥಾವರಗಳ ಸುರಕ್ಷಿತತೆಯನ್ನು ಉದ್ಯಮನಿರತರು ಉತ್ಪ್ರೇಕ್ಷೆ ಮಾಡುವುದೂ ವಿರಳವಲ್ಲ. ನಾಲ್ಕು ದಶಕಗಳ ಹಿಂದೆ ಈ ಉದ್ಯಮ ಜನಿಸಿದ ದಿನದಿಂದ ಇದು ನಡೆಯುತ್ತಿದೆ. ಈ ವಿವಾದದಿಂದಾಗಿ ಪರಮಾಣು ಸ್ಥಾವರಗಳಲ್ಲಿ ತೀವ್ರ ಸ್ವರೂಪದ ಅಪಘಾತ ಉಂಟಾಗುವ ಸಂಭವ ಎಷ್ಟು ಎಂದು ಅಧ್ಯಯನ ನಡೆಸಲು ಮೆಸಾಚುಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರೊ. ರಾಸ್ಮುಸೆನ್ ಅವರ ಅಧ್ಯಕ್ಷತೆಯಲ್ಲಿ

ಒಂದು ಸಮಿತಿಯನ್ನು ರಚಿಸಲಾಯಿತು. ಸಮಿತಿಯು ವ್ಯಾಪಕವಾದ ಅಧ್ಯಯನವನ್ನು ನಡೆಸಿ, ತೀವ್ರ ಅಪಘಾತ ಉಂಟಾಗುವ ಸಂಭವ ನೂರಾರು ವರ್ಷಗಳಿಗೊಮ್ಮೆ ಎಂಬ ತೀರ್ಮಾನಕ್ಕೆ ಬಂದಿತು. ರಾಸ್ಮುಸೆನ್ ವರದಿ ಪ್ರಕಟವಾದುದು ೧೯೭೫ರಲ್ಲಿ. ಅದು ಪ್ರಕಟವಾದ ನಾಲ್ಕೇ ವರ್ಷಗಳಲ್ಲಿ, ಅಂದರೆ ೧೯೭೯ರಲ್ಲಿ ಅಮೆರಿಕದ ಪೆನ್ಸಿಲ್ವೇನಿಯಾ ಸಂಸ್ಥಾನದಲ್ಲಿ ಹ್ಯಾರಿಸ್‌ಬರ್ಗ್ ಬಳಿ ಇರುವ ತ್ರೀಮೈಲ್ ಐಲೆಂಡ್ ಬೈಜಿಕ ವಿದ್ಯುತ್ ಸ್ಥಾವರ ಭಾರಿ ಅಪಘಾತಕ್ಕೀಡಾಯಿತು. ಅದಾದ ಏಳು ವರ್ಷಗಳ ತರುವಾಯ ೧೯೮೬ರಲ್ಲಿ ಸೋವಿಯತ್ ಒಕ್ಕೂಟದ ಯುಕ್ರೇನ್‌ನಲ್ಲಿರುವ ಚೆರ್ನೊಬಿಲ್ ವಿದ್ಯುತ್‌ಸ್ಥಾವರ ಇನ್ನೂ ಭಾರೀ ಅಪಘಾತಕ್ಕೀಡಾಯಿತು. ೧೯೫೭ರಷ್ಟು ಹಿಂದೆಯೇ ಬ್ರಿಟನ್ನಿನ ವಿಂಡ್‌ಸ್ಕೇಲ್ ಪರಮಾಣು ಸ್ಥಾವರ ಅಷ್ಟೇ ಭಾರೀ ಪ್ರಮಾಣದ ಅಘಘಾತಕ್ಕೀಡಾಗಿದ್ದ ವಿಷಯವನ್ನು ಅಂದಿನ ಬ್ರಿಟಿಷ್ ಸರ್ಕಾರ ಮುಚ್ಚಿಟ್ಟಿದ್ದುದು ೧೯೮೮ರಲ್ಲಿ ಬಯಲಾಯಿತು. ಹೀಗಾಗಿ ರಾಸ್ಮುಸೆನ್ ವರದಿ ನಗೆಗೀಡಾಗಿದೆ.

ಚೆರ್ನೊಬಿಲ್ ದುರಂತದ ವಿವರಗಳನ್ನು ಮನನ ಮಾಡಿದರೆ, ಪರಮಾಣು ಸ್ಥಾವರಗಳು ಅಪಘಾತಕ್ಕೀಡಾದಾಗ ಪರಿಣಾಮಗಳು ಎಷ್ಟು ಘೋರವಾಗಬಹುದು ಎಂಬುದು ವೇದ್ಯವಾಗುತ್ತದೆ; ಪರಮಾಣು ಉದ್ಯಮಿಗಳು ಅಪಘಾತದ ಸಂಭವವನ್ನು ಏಕೆ ಅಲ್ಲಗಳೆಯುತ್ತಾರೆ, ಅಪಘಾತವಾದಾಗ ಏಕೆ ಅದನ್ನು ಮುಚ್ಚಿಡಲು ಪ್ರಯತ್ನಿಸುತ್ತಾರೆ ಎಂಬುದು ಗೊತ್ತಾಗುತ್ತದೆ.

ಚೆರ್ನೊಬಿಲ್ ದುರಂತ ಸಂಭವಿಸಿದ್ದು ೧೯೮೬ರ ಏಪ್ರಿಲ್ ೨೬ರಂದು. ಅಂದು ನಡುರಾತ್ರಿ ೧.೩೦ರ ಸುಮಾರಿಗೆ ವಿದ್ಯುತ್ ಸ್ಥಾವರದ ೪ ನೇ ರಿಯಾಕ್ಟರ್‌ನಲ್ಲಿ ಭಾರೀ ಸ್ಫೋಟ ಉಂಟಾಯಿತು. ಸಾವಿರ ಟನ್ ತೂಕದ ಕಾಂಕ್ರೀಟ್ ಮುಚ್ಚಳ ನುಚ್ಚುನೂರಾಯಿತು. ಕಟ್ಟಡದ ಚಾವಣಿಯೂ ಒಂದು ಗೋಡೆಯೂ ಸೀಳಿಹೋಗಿ ಒಳಗೆ ಉರಿಯುತ್ತಿದ್ದ ಗ್ರಾಫೈಟ್ ಮತ್ತು ಹಲವಾರು ವಿಕಿರಣಶೀಲ ಪದಾರ್ಥಗಳು ಗಗನಕ್ಕೆ ಚಿಮ್ಮಿದುವು. ವಿಕಿರಣಶೀಲ ದೂಳಿನ ಮೋಡಗಳು ರೂಪುಗೊಂಡು ಎಲ್ಲ ದಿಕ್ಕುಗಳಲ್ಲೂ ಚಲಿಸತೊಡಗಿದವು. ಉತ್ತರದಲ್ಲಿ ಡೆನ್ಮಾರ್ಕ್, ನಾರ್ವೆ, ಸ್ವೀಡನ್‌ಗಳಿಂದ ದಕ್ಷಿಣದಲ್ಲಿ ಗ್ರೀಸ್‌ವರೆಗೆ ಹಲವಾರು ದೇಶಗಳ ಮೇಲೆ ವಿಕಿರಣಶೀಲ ದೂಳು ಉದುರಿತು. ಸೋವಿಯತ್ ಸರ್ಕಾರವು ಹತ್ತು ಕಿಲೋಮೀಟರ್ ತ್ರಿಜ್ಯದೊಳಗಿರುವ ಪ್ರದೇಶವನ್ನೆಲ್ಲ ಅಪಾಯಕರ ವಲಯವೆಂದು ಘೋಷಿಸಿ ಪ್ರತಿಯೊಬ್ಬ ವ್ಯಕ್ತಿಯನ್ನೂ ದೂರದ ಸ್ಥಳಗಳಿಗೆ ಸಾಗಿಸಿತು. ಆ ವಲಯದೊಳಗೆ ಇದ್ದ ೪೯೦೦೦ ಜನಸಂಖ್ಯೆಯ ಪ್ರಿಪ್ಯಾಟ್ ನಗರ ೩೬ ಗಂಟೆಗಳಲ್ಲಿ ನಿರ್ಜನಗೊಂಡು ಹಾಳೂರಾಯಿತು. ಒಂದೆರಡು ದಿನಗಳಲ್ಲಿ ಅಪಾಯಕರ ವಲಯದ ತ್ರಿಜ್ಯವನ್ನು ೩೦ ಕಿಲೋಮೀಟರ್‌ಗೆ ಏರಿಸಿದ್ದರಿಂದ ನಿರ್ವಸತಿಗೊಂಡವರ ಸಂಖ್ಯೆ ೧೩೫೦೦೦ಕ್ಕೆ ಏರಿತು. ಅಪಘಾತದ ನೇರ ಪರಿಣಾಮವಾಗಿ ಸತ್ತವರು ೩೧ ಮಂದಿ. ಆದರೆ ಯುಕ್ರೇನ್ ಮತ್ತು ನೆರೆ ರಾಷ್ಟ್ರಗಳಲ್ಲಿ ಹರಡಿದ ವಿಕಿರಣಕ್ಕೆ ಗುರಿಯಾದ ಸುಮಾರು ೧೦ ಲಕ್ಷ ಜನರಲ್ಲಿ ಎಷ್ಟು ಮಂದಿ ಮುಂದಿನ ನಾಲ್ಕೈದು ದಶಕಗಳಲ್ಲಿ

ಕ್ಯಾನ್ಸರ್‌ನಿಂದ ಸಾಯುವರೆಂಬ ಬಗ್ಗೆ ಸದ್ಯದಲ್ಲಿ ಏನೂ ಹೇಳುವಂತಿಲ್ಲ. ಕ್ಯಾನ್ಸರ್ ರೋಗಿಗಳ ಸಂಖ್ಯೆ ಶೇಕಡಾ ೨೦ ರಿಂದ ೪೦ ರಷ್ಟು ಹೆಚ್ಚಾಗಬಹುದೆಂಬುದು ವಿಜ್ಞಾನಿಗಳ ಅಂದಾಜು.

ವಿಕಿರಣ ಮಾಲಿನ್ಯವನ್ನು ತೊಡೆದುಹಾಕುವ ಸಲುವಾಗಿ ೩೦ ಕಿಲೋಮೀಟರ್ ತ್ರಿಜ್ಯದೊಳಗಿರುವ ಭೂಮಿಯಲ್ಲಿ ರಸ್ತೆಗಳನ್ನೂ ಹೊರತುಪಡಿಸದಂತೆ, ಪ್ರತಿ ಚದರ ಸೆಂಟಿಮೀಟರ್ ನೆಲದಲ್ಲಿಯೂ ಐದು ಸೆಂಟಿಮೀಟರ್ ದಪ್ಪ ಮೇಲ್ಮಣ್ಣನ್ನು ಎಬ್ಬಿ ಸೈಬೀರಿಯದ ನಿರ್ಜನ ಪ್ರದೇಶಗಳಿಗೆ ಸಾಗಿಸಿದರು. ಸುಮಾರು ಒಂದು ಕೋಟಿ ಎಪ್ಪತ್ತೈದು ಲಕ್ಷ ಎಕರೆ ಜಮೀನು ಕೃಷಿಯೋಗ್ಯವಲ್ಲವೆಂದು ಘೋಷಿಸಿ ಅದಕ್ಕೆಲ್ಲ ತಂತಿಬೇಲಿ ಹಾಕಿ ಕಾವಲುಪಡೆಯನ್ನು ನೇಮಿಸಿದರು. ಸುಮಾರು ಏಳೆಂಟು ವರ್ಷ ಅಲ್ಲಿ ವ್ಯವಸಾಯ ಕೂಡದೆಂದು ವಿಧಿಸಿದರು. ಈಗ ಅಲ್ಲಿ ಬೇಸಾಯ ಪ್ರಾರಂಭಿಸಿರುವರೇ ಎಂಬುದು ಗೊತ್ತಿಲ್ಲ.

ಮಾಲಿನ್ಯ ನಿರ್ಮೂಲನ ಕ್ರಮಗಳಿಗೆ ತಗಲಿದ ವೆಚ್ಚದ ಬಗ್ಗೆ ಪ್ರಾಸಂಗಿಕವಾಗಿ ಎರಡು ಮಾತು. ಅಪಘಾತ ನಡೆದ ಮೂರು ವರ್ಷಗಳವರೆಗೆ, ಅಂದರೆ ೧೯೮೯ ರವರೆಗೆ ಆಗಿದ್ದ ವೆಚ್ಚ, ಅಧಿಕೃತ ದಾಖಲೆಗಳ ಪ್ರಕಾರ, ೧೫.೪ ಬಿಲಿಯನ್ ಡಾಲರ್. ಅಂದಿನ ವಿನಿಮಯ ದರದ ಪ್ರಕಾರ ಅದು ಸುಮಾರು ೩೦,೦೦೦ ಕೋಟಿ ರೂಪಾಯಿಯಷ್ಟಾಗುತ್ತದೆ. ಅಲ್ಲಿಂದ ಮುಂದಿನ ಕೆಲವು ವರ್ಷಗಳಲ್ಲಿ ಮತ್ತೆ ೨೫ ಬಿಲಿಯನ್ ಡಾಲರ್ ಅಂದರೆ ಸುಮಾರು ೫೦,೦೦೦ ಕೋಟಿ ರೂಪಾಯಿ ವೆಚ್ಚ ಮಾಡಬೇಕಾಗುವುದೆಂದು ಆಗ ಹೇಳಲಾಗಿತ್ತು. ಅಲ್ಲಿಂದೀಚೆಗೆ ಸೋವಿಯತ್ ಒಕ್ಕೂಟ ಒಡೆದು ಯುಕ್ರೇನ್ ಪ್ರತ್ಯೇಕ ರಾಷ್ಟ್ರವಾಗಿರುವುದರಿಂದ, ವಾಸ್ತವವಾಗಿ ಏನಾಗಿದೆ ಎಂಬುದು ಗೊತ್ತಿಲ್ಲ. ಆದರೆ, ಮೇಲೆ ಹೆಸರಿಸಿದ ಮೊತ್ತಗಳನ್ನು ಕುರಿತು ಯೋಚಿಸಿದಾಗ, ನಮ್ಮ ದೇಶದಲ್ಲಿ ನಾವು ಒಂದು ಪಂಚವಾರ್ಷಿಕ ಯೋಜನೆಗೆ ಮಾಡುವ ವೆಚ್ಚ ಸರಿಸುಮಾರು ಅಷ್ಟು ಎಂಬುದು ಗಮನಿಸಬೇಕಾದ ಅಂಶ.

ಪ್ಲುಟೋನಿಯಮ್

ಪರಮಾಣು ಸ್ಥಾವರಗಳಿಂದ ಪರಿಸರಕ್ಕಾಗಬಹುದಾದ ಕೆಡಕುಗಳಲ್ಲಿ ಬಹುಶಃ ಎಲ್ಲದಕ್ಕಿಂತ ಆತಂಕಕಾರಿ ಎಂದರೆ, ಪರಮಾಣು ರಿಯಾಕ್ಟರುಗಳಲ್ಲಿ ಉತ್ಪತ್ತಿಯಾಗುವ ಪ್ಲುಟೋನಿಯಮ್‌ದಿಂದ ಆಗಬಹುದಾದ ಕೆಡಕು.

ಬೊಂಬಾಯಿಯ ಭಾಭಾ ಪರಮಾಣು ಸಂಶೋಧನ ಕೇಂದ್ರದಲ್ಲಿರುವ ರಿಯಾಕ್ಟರುಗಳು ಸಂಶೋಧನೆಗಾಗಿ ನಿರ್ಮಿಸಿದಂಥವು. ವಿದ್ಯುತ್ ಸ್ಥಾವರಗಳಲ್ಲಿ ಕೆಲಸ ಮಾಡುತ್ತಿರುವ ರಿಯಾಕ್ಟರುಗಳು ವಿದ್ಯುದುತ್ಪಾದನೆಗೆಂದೇ ನಿರ್ಮಿಸಿದಂಥವು. ಬೇರೆ ಬೇರೆ ಉದ್ದೇಶಗಳಿಗೆ ಬೇರೆ ಬೇರೆ ರೀತಿಯ ರಿಯಾಕ್ಟರುಗಳನ್ನು ನಿರ್ಮಿಸಿರುವುದುಂಟು. ಆದರೆ ಇದುವರೆಗೆ ನಿರ್ಮಿಸಲಾಗಿರುವ ಎಲ್ಲ ಬಗೆಯ ರಿಯಾಕ್ಟರುಗಳಿಗೂ ಸಾಮಾನ್ಯವಾಗಿರುವ ಎರಡು ಅಂಶಗಳಿವೆ: ಎಲ್ಲದರಲ್ಲಿಯೂ ಬಳಸುತ್ತಿರುವ ಇಂಧನ, ಯುರೇನಿಯಮ್; ಎಲ್ಲದರಲ್ಲಿಯೂ ಉತ್ಪತ್ತಿಯಾಗುತ್ತಿರುವ ಒಂದು ಉಪೋತ್ಪನ್ನ ಪ್ಲುಟೋನಿಯಮ್. ಈ ಪ್ಲುಟೋನಿಯಮ್ ಸಂಪೂರ್ಣವಾಗಿ

ಮಾನವನಿರ್ಮಿತ ರಾಸಾಯನಿಕ ಧಾತು. ನಿಸರ್ಗದಲ್ಲಿ ಎಲ್ಲಿಯೂ ಅದು ದೊರೆಯುವುದಿಲ್ಲ. ಅಷ್ಟೇ ಅಲ್ಲ; ಐವತ್ತು ವರ್ಷಗಳ ಕೆಳಗೆ, ಪರಮಾಣುಯುಗ ಕಾಲಿಡುವುದಕ್ಕೆ ಮುಂಚೆ, ಭೂಮಿಯ ಮೇಲೆ ಸಾಸಿವೆಕಾಳಿನಷ್ಟು ಪ್ಲುಟೋನಿಯಮ್ ಸಹ ಇರಲಿಲ್ಲ. ಇಂದು ಪ್ರಪಂಚಾದ್ಯಂತ ಹಲವು ನೂರು ರಿಯಾಕ್ಟರ್‌ಗಳು ಕೆಲಸ ಮಾಡುತ್ತಿರುವುದರಿಂದ, ಕಳೆದ ನಾಲ್ಕೈದು ದಶಕಗಳಲ್ಲಿ ಸಾವಿರಾರು ಟನ್ ಪ್ಲುಟೋನಿಯಮ್ ಸಂಗ್ರಹವಾಗಿದೆ. ಅದರ ದಾಸ್ತಾನು ಸತತವಾಗಿ ವೃದ್ಧಿಯಾಗುತ್ತಿದೆ.

ಪರಿಸರಕ್ಕೆ ಪ್ಲುಟೋನಿಯಮ್‌ನಿಂದ ಆಗಬಹುದಾದ ಕೇಡಕಿನ ವಿಷಯದಲ್ಲಿ ಹೆಚ್ಚಿನ ಆತಂಕವಿರುವುದಕ್ಕೆ ಕಾರಣ, ಈ ಕೃತಕ ಧಾತುವಿನ ಕೆಲವು ವಿಶಿಷ್ಟ ಗುಣಗಳು. ಮೊದಲನೆಯದಾಗಿ, ಪ್ಲುಟೋನಿಯಮ್ ಪರಮಾಣು ಬೀಜ, ಯುರೇನಿಯಮ್ ಬೀಜದಂತೆಯೇ ನ್ಯೂಟ್ರಾನಿನ ತಾಡನೆಯಿಂದ ವಿದಲನವಾಗಬಲ್ಲುದು. ಆದುದರಿಂದ ಅದನ್ನು ಪಯೋಗಿಸಿಕೊಂಡು ಪರಮಾಣು ಬಾಂಬ್ ತಯಾರಿಸಬಹುದು. ವಾಸ್ತವವಾಗಿ ೧೯೪೫ರ ಆಗಸ್ಟ್ ೯ರಂದು ನಾಗಸಾಕಿ ನಗರದ ಮೇಲೆ ಹಾಕಿದ ಅಮೆರಿಕದ ಎರಡನೆಯ ಪರಮಾಣುಬಾಂಬು ಪ್ಲುಟೋನಿಯಮ್ ಬಾಂಬು. ಆ ಪ್ರಮಾಣದ ಬಾಂಬ್ ತಯಾರಿಸಲು ಸುಮಾರು ೧೦ ಕಿಲೊಗ್ರಾಂ ಪ್ಲುಟೋನಿಯಮ್ ಸಾಕು. ಬಾಂಬ್ ತಯಾರಿಕೆಯ ತಂತ್ರ ವಿದ್ಯೆಯೂ ಹಿಂದಿನಂತೆ ಸಂಕೀರ್ಣವಾಗಿ ಉಳಿದಿಲ್ಲ. ಅಂದ ಮೇಲೆ ಒಂದೋ ಎರಡೋ ಲಕ್ಷ ಪರಮಾಣು ಬಾಂಬ್ ತಯಾರಿಸಲು ಸಾಕಾಗುವಷ್ಟು ಸಿದ್ಧವಸ್ತು ಈಗ ಲಭ್ಯವಿದೆ ಎಂಬುದು ಶೀಮಾರ್ನಸ. ತಲೆ ಕೆಟ್ಟರುವವರು, ತಲೆ ಕೆಡಿಸಿಕೊಂಡ ಭಯೋತ್ಪಾದಕರು, ಸಮಾಜ ಘಾತುಕರು ಮುಂತಾದ ಯಾರ ಕೈಗೂ ಅದು ಬೀಳದಂತೆ ಅದನ್ನು ಭದ್ರಪಡಿಸಿ ಇಟ್ಟುಕೊಳ್ಳುವ ಜವಾಬ್ದಾರಿಯನ್ನು ಮಾನವಕುಲದ ಮೇಲೆ ಈಗ ಹೇರಲಾಗಿದೆಯಷ್ಟೆ. ಇದು ಅಪರಿಮಿತ ಆತಂಕಕ್ಕೆ ಕಾರಣವಾಗಿದೆ.

ಎರಡನೆಯವಾಗಿ ಪ್ಲುಟೋನಿಯಮ್ ಅಲ್ಪಾಯು ವಿಕಿರಣಶೀಲ ಧಾತುವಾದರೂ ಯುರೇನಿಯಮ್ ವಿದಲನದಿಂದ ದೊರಕುವ ಕೆಲವು ಧಾತುಗಳಂತೆ ಅದರ ಅರ್ಧಾಯುಷ್ಯ ಹತ್ತಿಪ್ಪತ್ತು ವರ್ಷಗಳಲ್ಲ. ಹಾಗೇನಾದರೂ ಆಗಿದ್ದಿದ್ದರೆ ಈಗ ಸಂಗ್ರಹವಾಗಿರುವ ಪ್ಲುಟೋನಿಯಮ್ ದಾಸ್ತಾನು ಮುಂದಿನ ನೂರಿನ್ನೂರು ವರ್ಷಗಳಲ್ಲಿ ಕ್ಷಯಿಸಿಬಿಡುವುದೆಂಬ ಭರವಸೆಯಿಂದ ನೆಮ್ಮದಿಯಿಂದ ಇರಬಹುದಾಗಿತ್ತು. ಪ್ಲುಟೋನಿಯಮ್ ಅರ್ಧಾಯುಷ್ಯ ೨೪೪೧೧ ವರ್ಷಗಳು. ಒಂದು ವೇಳೆ ಎಲ್ಲ ರಾಷ್ಟ್ರಗಳೂ ಒಮ್ಮತದಿಂದ ರಿಯಾಕ್ಟರುಗಳನ್ನು ನಿಷ್ಕ್ರಿಯೆಗೊಳಿಸಿ ಈಗ ಇರುವ ಪ್ಲುಟೋನಿಯಮ್ ದಾಸ್ತಾನು ಸಂಪೂರ್ಣವಾಗಿ ಕ್ಷಯಿಸಲಿ ಎಂದು ಕೈಕಟ್ಟಿ ಕುಳಿತರೂ ಲಕ್ಷಾಂತರ ವರ್ಷಗಳವರೆಗೆ ಕುಳಿತಿರಬೇಕಾಗುತ್ತದೆ. ಅಲ್ಲಿಯತನಕ ಪರಮಾಣು ಸ್ಫೋಟನೆಯ ಭೀತಿ ತಪ್ಪಿದ್ದಲ್ಲ.

ಮೂರನೆಯದಾಗಿ ಆಕಸ್ಮಾತ್ ಗಾಳಿ, ನೀರು, ಆಹಾರಗಳ ಮೂಲಕ ಪ್ಲುಟೋನಿಯಮ್ ಮನುಷ್ಯ ದೇಹವನ್ನು ಹೊಕ್ಕರೆ, ಮೂಳೆಗಳ ಸ್ನೇಹವನ್ನು ಹುಡುಕಿಕೊಂಡು

ಹೋಗಿ ಅಲ್ಲಿ ನೆಲೆಸುವುದು ಅದರ ಪ್ರವೃತ್ತಿ. ಅದು ಸೂಸುವ ವಿಕಿರಣದ ಕಾರಣ, ಕ್ಯಾನ್ಸರ್‌ಗೆ ಈಡಾಗುವ ಸಂಭವ ಹಾಗೂ ಸೋಂಕುನಿರೋಧಕ ಶಕ್ತಿಯು ನಾಶ ಕಟ್ಟಿಟ್ಟದ್ದು. ಈ ಕಾರಣದಿಂದಲೂ, ಅದರ ಇನ್ನಿತರ ಗುಣಗಳಿಂದಲೂ ಅದೊಂದು ಉಗ್ರ ವಿಷ. ಮಾನವ ಸೃಷ್ಟಿಸಿರುವ ವಿಷಗಳಲ್ಲೆಲ್ಲ ಅತ್ಯಂತ ಉಗ್ರವಾದುದು ಎನ್ನಿಸಿಕೊಂಡಿದೆ. ಸಾಮಾನ್ಯವಾಗಿ ವಿಷಯುಗಳ ಉಗ್ರತೆಯ ಬಗ್ಗೆ ಮಾತನಾಡುವಾಗ "ಮಿಲಿಯನ್‌ನಲ್ಲಿ ಇಷ್ಟು ಭಾಗವಿದ್ದರೆ ತಾಳಿಕೊಳ್ಳಬಹುದು" ಎಂದು ತಾಳಿಕೆಯ ಮಿತಿಯನ್ನು ಹೇಳುವುದು ರೂಢಿ. ಪ್ಲುಟೋನಿಯಮ್ ವಿಷಯದಲ್ಲಿ ಮಿಲಿಯನ್‌ಗಳು ಉಪಯೋಗಕ್ಕೆ ಬರುವುದಿಲ್ಲ, ಅದರ ತಾಳಿಕೆಯ ಮಿತಿ ಟ್ರಿಲಿಯನ್‌ನಲ್ಲಿ ಒಂದು ಭಾಗ! ಹೀಗಿರುವುದರಿಂದ ಅತ್ಯಲ್ಪ ಪ್ರಮಾಣದಲ್ಲಿಯೂ ಅದರ ಸಂಪರ್ಕ ಮನುಷ್ಯನಿಗೆ ಉಂಟಾಗದಂತೆ ಲಕ್ಷಾಂತರ ವರ್ಷಕಾಲ ಅದರ ಸಂಗ್ರಹವನ್ನು ಕಾಯಬೇಕು; ಅದರ ಮಾರಕ ಪರಿಣಾಮಗಳ ಭೀತಿಯ ನೆರಳಲ್ಲಿ ಮಾನವಕುಲ ಈ ಭೂಮಿಯ ಮೇಲೆ ಜೀವಿಸಿರಬೇಕು.

ವಿವಿಧ ರಾಷ್ಟ್ರಗಳು ಈಗ ಶೇಖರಿಸಿಟ್ಟುಕೊಂಡಿರುವ ಸಂಗ್ರಹದಿಂದ ಪ್ಲುಟೋನಿಯಮ್ ಹೊರಕ್ಕೆ ಸೋರಿ ಬಂದು ನಮ್ಮ ಪರಿಸರವನ್ನು ಹಾಳುಗೆಡಹದಂತೆ ಲಕ್ಷಾಂತರ ವರ್ಷಗಳ ಕಾಲ ಅದರ ಮೇಲೆ ಪರ್ಹಾರಾವಲು ಹಾಕುವುದು ದುಸ್ಸಾಧ್ಯ. ಈ ಮಾತಿನತಥ್ಯ ಈಚಿನ ಕೆಲವು ಘಟನೆಗಳಿಂದ ಎಲ್ಲರಿಗೂ ಮನದಟ್ಟಾಗುತ್ತಿದೆ. ಸೋವಿಯತ್ ಒಕ್ಕೂಟ ಕುಸಿದು ಅದರ ಸ್ಥಾನದಲ್ಲಿ ಹಲವಾರು ಬಿಡಿ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದ ಮೇಲೆ ಆ ರಾಷ್ಟ್ರಗಳಲ್ಲಿ ಆಡಳಿತ ಸಡಿಲಗೊಂಡ ಕಾರಣ, ಹೊರ ದೇಶಗಳಲ್ಲಿನ ದುಷ್ಟ ಶಕ್ತಿಗಳ ಕಣ್ಣು ಅಲ್ಲಿಯ ಪ್ಲುಟೋನಿಯಮ್ ಸಂಗ್ರಹದ ಮೇಲೆ ಬೀಳತೊಡಗಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಅತೃಪ್ತಿ ಹೊಗೆಯಾಡುತ್ತಿರುವ ಆ ರಾಷ್ಟ್ರಗಳಲ್ಲಿ ಸ್ವಂತ ಲಾಭಕ್ಕಾಗಿ ದೇಶದ ಹಿತವನ್ನು ಕಡೆಗಣಿಸಲು ಹಿಂಜರಿಯದ ರಾಷ್ಟ್ರದ್ರೋಹಿಗಳು ಕಾರ್ಯನಿರತರಾಗುತ್ತಿದ್ದಾರೆ. ಪರಿಣಾಮವಾಗಿ ಆ ದೇಶಗಳಿಂದ ಪ್ಲುಟೋನಿಯಮ್ ಕಳ್ಳ ಸಾಗಣೆ ಪ್ರಾರಂಭವಾಗಿದೆ. ಅದು ನಡೆಯುತ್ತಿರುವ ಸುಳಿವು ಸಿಕ್ಕಿದೆ. ಕಳೆದ ಆಗಸ್ಟ್ ೧೦ ರಂದು ನಾಗರಿಕ ಉಡುಪಿನಲ್ಲಿದ್ದ ಜರ್ಮನ್ ಪೊಲೀಸರು ಮ್ಯೂನಿಕ್ ವಿಮಾನ ನಿಲ್ದಾಣದಲ್ಲಿ ಹೊಂಚುಹಾಕುತ್ತಿದ್ದು, ಮಾಸ್ಕೊದಿಂದ ಮ್ಯೂನಿಕ್‌ಗೆ ಬಂದ ವಿಮಾನದಲ್ಲಿದ್ದ ಟಾರೆಸ್ ಎಂಬೊಬ್ಬ ಕೊಲಂಬಿಯನ್ ಪ್ರಜೆಯನ್ನು ಅವನ ಸೂಟ್‌ಕೇಸ್ ಸಮೇತ ಬಂಧಿಸಿದರು. ಆ ಸೂಟ್‌ಕೇಸ್‌ನಲ್ಲಿ ಹತ್ತು ಔನ್ಸ್ (ಅಂದರೆ ೩೦೦ ಗ್ರ್ಯಾಮ್‌ಗಿಂತ ಸ್ವಲ್ಪ ಕಡಮೆ) ಪ್ಲುಟೋನಿಯಮ್ ಇದ್ದ ಬಗ್ಗೆ ಜರ್ಮನ್ ಪೊಲೀಸರಿಗೆ ಸುಳಿವು ಸಿಕ್ಕಿತ್ತು. ಈ ಘಟನೆಯನ್ನು ನ್ಯೂಸ್‌ವೀಕ್ ಪತ್ರಿಕೆಗೆ ವರದಿ ಮಾಡಿದ ಪತ್ರಕರ್ತ, ಸ್ಕಾಟ್ ಸಲಿವಾನ್, ಬರೆದ ಮಾತುಗಳು ಮನನ ಮಾಡುವಂಥವು. "ಪರಮಾಣುಬಾಂಬ್ ತಯಾರಿಸಲು ಅಷ್ಟು ಪ್ಲುಟೋನಿಯಮ್ ಸಾಕಾಗುವುದಿಲ್ಲ; ಕೊನೆಯ ಪಕ್ಷ ಅದರ ಮೂವತ್ತು ನಲವತ್ತರಷ್ಟು ಬೇಕಾಗುತ್ತದೆ, ನಿಜ. ಆದರೆ ಭಯೋತ್ಪಾದಕನ ಕೈಯಲ್ಲಿ ಆ ಹತ್ತು ಔನ್ಸ್ ಪ್ಲುಟೋನಿ

ಯುಮ್ ಭಾರೀ ವಿಧ್ವಂಸಕ ಅಸ್ತ್ರವಾಗಬಲ್ಲದು. ನಾಗರಿಕ ನೀರು ಸರಬರಾಜು ವ್ಯವಸ್ಥೆಗೆ ಅದನ್ನು ಸುರಿಯುವ ಮೂಲಕ ಅಥವಾ ಅದನ್ನು ಉರಿಸಿ, ಬಂದ ಉತ್ಪನ್ನಗಳನ್ನು ಗಾಳಿಗೆ ಬಿಡುವ ಮೂಲಕ ಹತ್ತಿಪ್ಪತ್ತು ಲಕ್ಷ ಜನರನ್ನು ಆಹುತಿ ತೆಗೆದುಕೊಳ್ಳಬಹುದು" ಎಂದಿದ್ದಾರೆ. ಕೆಲವು ವಾರಗಳ ತರುವಾಯ ಸೋಫಿಯ ನಗರದ ಮುಖಾಂತರ ಕಳ್ಳಸಾಗಣೆಯಾಗುತ್ತಿದ್ದ ಪ್ಲುಟೋನಿಯಮ್ಮನ್ನು ಬಲ್ಗೇರಿಯಸ್ ಪೊಲೀಸರು ಹಿಡಿದರು. ಪರಿಸರಕ್ಕೆ ಪ್ಲುಟೋನಿಯಮ್‌ನಿಂದ ಯಾವ ಪ್ರಮಾಣದ ಆಘಾತ ಸಾಧ್ಯ ಎಂಬುದು ಈ ಘಟನೆಗಳಿಂದ ಗೊತ್ತಾಗುತ್ತಿದೆ.



ಮಾನವನು ನೀರಿನಲ್ಲಿ ಮೀನಿನಂತೆ ಈಜಬಲ್ಲ. ಆಗಸದಲ್ಲಿ ಹಕ್ಕಿಯಂತೆ ಹಾರಬಲ್ಲ. ಆದರೆ ಏನು ಮಾಡಿದರೇನು, ಭೂಮಿಯಲ್ಲಿ ಮಾತ್ರ ಮನುಷ್ಯನಂತೆ ಜೀವಿಸುವುದು ಅವನಿಗೆ ಕಷ್ಟ.

—ಮ್ಯಾಕ್ಸಿಂಗಾರ್ಕಿ

ಪಥ್ಯದಂತೆ ಆಹಾರ ಸೇವಿಸುವವನು, ವ್ಯಾಯಾಮ ಮಾಡುವವನು, ಬ್ರಹ್ಮಚರ್ಯ ಪಾಲಿಸುವವನು ಯಾವಾಗಲೂ ನಿರೋಗಿಯಾಗಿರುವನು.

—ಚರಕ

ನಿಮಗೆ ನೀವೇ ವೈದ್ಯರಾಗದಿರಿ

ಪಿ. ಶಿವಕುಮಾರಿ

ರೀನಾಳಿಗೆ ಕೆಲವು ದಿನಗಳಿಂದ ತನ್ನ ಶರೀರದ ತೂಕ ಜಾಸ್ತಿಯಾಗುತ್ತಿರುವುದೆಂದೆನಿಸುತ್ತಿತ್ತು. ರವಿಕೆಗಳು ಬಿಗಿಯಾಗುತ್ತಿದ್ದುವು; ಲಂಗ ಸಣ್ಣದಾಗುತ್ತಿತ್ತು. ಊಟ, ತಿಂಡಿಯಲ್ಲಿ ಬಹಳಷ್ಟು ಆಸೆ ಇರುವ ರೀನಾಳಿಗೆ 'ಡಯಟ್' ಮಾಡಬೇಕೆನಿಸುತ್ತಿತ್ತು. ದಿನಾ ಪಾರ್ಟಿ ಎಂದೋ, ಗೆಳತಿಯರ ಮನೆಗೆಂದೋ ಹೋಗುವ ಪರಿಪಾಠ ಜಾಸ್ತಿ ಇದ್ದು ಅಲ್ಲಿ ವಿವಿಧ ತಿಂಡಿಗಳನ್ನು ಕಂಡೊಡನೆ ಬಾಯಿ ಚಪಲವನ್ನು ತಡೆಹಿಡಿಯಲಾಗುತ್ತಿರಲಿಲ್ಲ. ಆದರೆ ಶರೀರದ ತೂಕವಿಳಿಸಲು ಏನಾದರೂ ಮಾಡಬೇಕೆಂದು ಪತಿಯೊಡನೆ ಸಲಹೆ ಕೇಳಿದಳು. ಬೆಳಗಾಗೆದ್ದು 'ಜಾಗಿಂಗ್' ಮಾಡುವುದೆಂದು ನಿಶ್ಚಯಿಸಲಾಯಿತು. ಪತಿಯ ಒಪ್ಪಿಗೆ ಪಡೆದರೂ ರೀನಾಳಿಗೆ ತನ್ನ ಬೆಳಗಿನ ಸಿಹಿನಿದ್ದೆಯ ಮೋಹವನ್ನು ತ್ಯಜಿಸಲಾಗಲಿಲ್ಲ. ಇದೇ ಸಮಯದಲ್ಲಿ ಅವಳೊಂದು ಆರೋಗ್ಯ ಪತ್ರಿಕೆಯಲ್ಲಿ, 'ನಿಮ್ಮ ಹೆಚ್ಚಿನ ತೂಕವನ್ನು ಇಳಿಸಲು ಬೆಳಿಗ್ಗೆ ಎದ್ದು ಒಂದು ಲೋಟ ನೀರಿನಲ್ಲಿ ಒಂದು ನಿಂಬೆರಸ ಮತ್ತು ಒಂದು ಚಮಚ ಜೇನು ಸೇರಿಸಿ ಸೇವಿಸಬೇಕು' ಎಂದು ಓದಿದಳು. ರೀನಾಳು ಈ ಉಪಾಯವನ್ನು ಸ್ವೀಕರಿಸಿ ಕೂಡಲೇ ಈ ಕಾರ್ಯಕ್ರಮವನ್ನು ಜಾರಿಗೊಳಿಸಿದಳು. ಮರುದಿನದಿಂದಲೇ ಅವಳು ನಿಂಬೆರಸ, ನೀರು ಮತ್ತು ಜೇನು ಮಿಶ್ರ ಮಾಡಿ ಸೇವಿಸಲು ಆರಂಭಿಸಿದಳು. ೩-೪ ದಿನ ಸರಿಯಾಗಿ ನಡೆಯಿತು. ಆಮೇಲೆ ಅವಳಿಗೆ ತೀವ್ರವಾದ ನೆಗಡಿ ಪ್ರಾರಂಭವಾಯ್ತು. ರೀನಾಳು ಇದು ಕಾಲ ಋತುವಿನ ಬದಲಾವಣೆಯಿಂದಾಗಿರಬಹುದೆಂದು ಶೀತಕ್ಕೆ ಔಷಧಿ ತೆಗೆದುಕೊಂಡಳು. ಒಂದು-ಒಂದೂವರೆ ತಿಂಗಳ ಅನಂತರ ರೀನಾಳಿಗೆ ಕುಳಿತುಕೊಳ್ಳುವಾಗ, ನಿಂತುಕೊಳ್ಳುವಾಗ, ಮೆಟ್ಟಿಲೇರುವಾಗ ಮೊಣಕಾಲುಗಳು ನೋಯಲು ಪ್ರಾರಂಭವಾಯ್ತು. ಸಾಕಷ್ಟು ತೈಲ ಹಚ್ಚಿದರೂ, ಫಲಿತಾಂಶ ಶೂನ್ಯವಾಯಿತು. ಕೊನೆಗೆ ಸೋತು ಕುಟುಂಬ ವೈದ್ಯರನ್ನು ಭೇಟಿಯಾದಳು. ಡಾಕ್ಟರರು ಅವಳ ಪೂರ್ತಿ ದಿನಚರಿಯನ್ನು ಕೇಳಿ, ಇತ್ತೀಚಿನ ದಿನಗಳಲ್ಲಿ ಏನಾದರೂ ಹೊಸ ಕೆಲಸವನ್ನು ಪ್ರಾರಂಭ ಮಾಡಿರುವಿರಾ ಎಂದು ಕೇಳಿದರು. ರೀನಾಳು ತನ್ನ ನಿಂಬೆ-ನೀರಿನ ವಿಷಯ ತಿಳಿಸಿದಳು. ಆಗ ಡಾಕ್ಟರು ಹೇಳಿದರು–ಇದು ಸೇವಿಸುವುದು ಸರಿ. ಆದರೆ ನೀರನ್ನು ಕಾಯಿಸಬೇಕು. ತಣ್ಣೀರಿನಲ್ಲಿ ಸೇವಿಸಿದುದರಿಂದ ಯೂರಿಕ್ ಆಸಿಡ್‌ನ ಅಂಶ ಶರೀರದಲ್ಲಿ ಜಾಸ್ತಿ

ಯಾಯಿತು. ನೆಗಡಿ ಮತ್ತು ಕೀಲು ನೋಯಲು ಪ್ರಾರಂಭವಾಯಿತು. ಹೀಗಾಗಿ ವೈದ್ಯರು ಕಿನಾಳ ನಿಂಬೆ- ನೀರಿನ ಅನುಪಾನವನ್ನು ನಿಲ್ಲಿಸಿದರು ಮತ್ತು ಕೀಲು ಚಿಕಿತ್ಸೆ ನೋವಿಗೆ ಪ್ರಾರಂಭಿಸಿದರು. ಚಿಕಿತ್ಸೆ ಕೆಲವು ತಿಂಗಳು ಗಳ ವರೆಗೆ ಮುಂದುವರೆಯಿತು. ಶರೀರದ ತೂಕ ಇಳಿಯುವುದರಲ್ಲಿ ಕೀಲು ಮತ್ತು ಎಲುಬುಗಳ ನೋವೂ ಸೇರಿಕೊಂಡಿತು. ಹಣ ಮತ್ತು ಸಮಯದ ನಷ್ಟವೂ ಉಂಟಾಯಿತು.

ಬಹುಶಃ ನಾವೆಲ್ಲರೂ ಇತರರ ಬಾಯಿಂದ ಕೇಳಿದ (ಬಹುಶಃ ಅವರೂ ಬೇರೆಯವರಿಂದ ಕೇಳಿದ್ದಿರಬಹುದು) ಇಂತಹ ವಿಚಾರಗಳನ್ನು ಹಿಂದೆ ಮುಂದೆ ಯೋಚಿಸದೆ, ಪರಿಣಾಮಗಳ ಬಗ್ಗೆ ತಿಳಿಯದೆ ನಮ್ಮ ಮೇಲೆ ನಾವೇ ಪ್ರಯೋಗಿಸಿಕೊಳ್ಳುತ್ತೇವೆ. ಸಾಮಾನ್ಯ ವಾಗಿ ಪ್ರತಿ ರವಿವಾರದ ಪತ್ರಿಕೆಯ ವಿಶೇಷ ಅಂಕಣದಲ್ಲಿ, ಮನೆ ಮದ್ದು, ಮುಂತಾದ ವಿಚಾರಗಳಿರುತ್ತವೆ. ಇಂತಹ ಕೆಲವು ಔಷಧಿ ಗಳು ಕೆಲವು ಬಾರಿ ಹಲಕೆಲವು ವ್ಯಾಧಿ ಗಳನ್ನು ತಾತ್ಕಾಲಿಕವಾಗಿ ದೂರ ಮಾಡ ಬಲ್ಲವು. ಆದರೆ ಹಿಂದಿನ ಬಹಳ ವರ್ಷಗಳಿಂದಿ ರುವ ಕಾಹಿಲೆಯನ್ನು ಎಷ್ಟರ ಮಟ್ಟಿಗೆ ಇದು ಗುಣ ಪಡಿಸಬಲ್ಲುದು ಎಂದು ಹೇಳಲು ಸಾಧ್ಯವಿಲ್ಲ ಅಥವಾ ಒಂದು ಹೊಸ ಕಾಹಿಲೆ ಯನ್ನೇ ಸೃಷ್ಟಿಸಲೂಬಹುದು. ಆದರೆ ಯಾವುದೇ ವಿಚಾರ ಮಾಡದೆ, ಪಥ್ಯವಿಲ್ಲದೆ, ತಮ್ಮ ಶರೀರ ಪ್ರಕೃತಿಯನ್ನು ಗಮನಿಸದೆ ಇಂತಹ ಔಷಧಿಗಳನ್ನು ಸೇವಿಸಿದರೆ ಅವರು ಅವುಗಳ ಜಾಲದಲ್ಲಿ ಸಿಕ್ಕಿಹಾಕಿಕೊಳ್ಳು ತ್ತಾರೆ ಮತ್ತು ಮುಂದೆ ಪಶ್ಚಾತ್ತಾಪ ಪಡುತ್ತಾರೆ. ಹಿಂದಿನ ಕಾಹಿಲೆಗಳು ವಾಸಿ ಯಾಗದೆ, ಖಂಡಿತವಾಗಿಯೂ ಅದರೊಂದಿಗೆ ಸೇರಿಕೊಳ್ಳುತ್ತವೆ.

ಒಬ್ಬ ವ್ಯಕ್ತಿಯ ಹಿರಿಯ ಮಗ ದಷ್ಟ ಪುಷ್ಟವಾಗಿದ್ದ. ಯಾರೋ ಒಬ್ಬರು ಅವ ರೊಂದಿಗೆ ಹೇಳಿದರು–"ಈ ದಿನಗಳಲ್ಲಿ ಟೊಮೆಟೋ ಸಾಕಷ್ಟು ಸಿಗುತ್ತದೆ. ಇವ ನಿಗೆ ಟೊಮೆಟೋ ಸೂಪ್ ಮತ್ತು ಜ್ಯೂಸ್ ಕೊಡಿ. ತಿಂಗಳೊಳಗೆ ತೂಕ ಇಳಿಯದಿದ್ದರೆ ನೋಡಿ." ಅದರಿಂದ ಅವನ ಶಕ್ತಿ ಏನೂ ಕಮ್ಮಿಯಾಗುವುದಿಲ್ಲ. ಹುಡುಗನ ತಾಯಿ ತಂದೆಯರು ಮರುದಿನವೇ ೫ ಕಿಲೋ ಟೊಮೆಟೋ ತರಿಸಿದರು. ತಮ್ಮೆಲ್ಲಾ ಮಕ್ಕಳಿಗೆ ಪ್ರತಿಯೊಂದು ಆಹಾರ ದೊಂದಿಗೂ ಟೊಮೆಟೋ ಜ್ಯೂಸ್ ಮತ್ತು ಸೂಪ್ ಕೊಡತೊಡಗಿದರು. ತಿಂಗಳೊಳಗೆ ಮಕ್ಕಳು ಕ್ಷೀಣವಾದರು. ಆದರೆ ಕಾಲು, ಮೊಣಕಾಲುಗಳಲ್ಲಿ ನೋವಿನ ತೊಂದರೆ. ಇಷ್ಟೊಂದು ಸಣ್ಣ ಮಕ್ಕಳಿಗೆ ಕೀಲು ನೋವು. ಕೊನೆಗೆ ತಂದೆ ತಾಯಿ ತಮ್ಮ ಮಕ್ಕಳನ್ನು ಡಾಕ್ಟರರ ಹತ್ತಿರ ಕರೆ ದೊಯ್ದರು. ಡಾಕ್ಟರರು ಇದು ಹೆಚ್ಚಿನ ಟೊಮೆಟೋ ಸೇವನೆಯಿಂದ ಎಂದರು. ತೈಲ ಹಚ್ಚಿ, ನೀವಿ, ಮಾಲೀಸು ಮಾಡಲು ಹೇಳಿದರು. ಅಂತೂ ಎಲ್ಲೆಲ್ಲೋ ಹೋಗಿ ಏನೇನೋ ಮಾಡಿ ಕಡಿಮೆಯಾಯಿತೆನ್ನಿ.

ಒಂದು ಸಲ ಮೆಟ್ಟಿಲನ್ನೇರುವಾಗ ಕಾಲಿನ ಹೆಬ್ಬೆರಳಿಗೆ ಮಾಮೂಲೀ ಪೆಟ್ಟಾ ಯಿತು. ಸಂಜೆಯಾಗುತ್ತಿದ್ದಂತೆ ಹೆಬ್ಬೆರಳು ನೋಯ ತೊಡಗಿತು. ಅಯೊಡೆಕ್ಸ್ ಹಚ್ಚಿ ಮಾಲೀಸು ಮಾಡಿದರೂ ನೋವು ಕಡಿಮೆ ಯಾಗಲಿಲ್ಲ. ಹೆಬ್ಬೆರಳು ಸೂಜಿಯಂತೆ

ಚುಚ್ಚುತ್ತಿತ್ತು ಮತ್ತು ನೀಲಿಗಟ್ಟಿತ್ತು. ಅಂತೂ ಇಡೀ ರಾತ್ರಿ ನರಳುತ್ತಲೇ ಕಳೆದು ಹೋಯಿತು. ಬೆಳಗ್ಗೆ ವೈದ್ಯರಿಗೆ ತೋರಿಸಿದಾಗ ಬೆರಳಿನ ಎಲುವು ಮುರಿದಿರುವುದಾಗಿ ತಿಳಿಯಿತು. ಬಿಸಿ ನೀರಿನಲ್ಲಿ ಬೆರಳಿರಿಸಿದ್ದರಿಂದ ಮತ್ತು ಮಾಲೀಸು ಮಾಡಿದ್ದರಿಂದ ಈ ರೀತಿಯಾಯಿತೆಂದು ಇದಕ್ಕೆ ಬದಲಾಗಿ ಮಂಜುಗಡ್ಡೆಯನ್ನು ಹೆಬ್ಬೆರಳಿನ ಮೇಲೆ ಇಟ್ಟಿದ್ದರೆ ಇಂಥಾ ತೊಂದರೆ ಬರುತ್ತಿರಲಿಲ್ಲವೆಂದೂ ವೈದ್ಯರು ತಿಳಿಸಿದರು.

ಮಲಬದ್ಧತೆಗೆ ಈಸಬಗೋಲದ ತವುಡು ದಿವ್ಯೌಷಧವೆಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಆ ತವುಡನ್ನು ಬಿಸಿನೀರಿನಲ್ಲಿ ತೆಗೆದುಕೊಂಡರೆ ಮಾತ್ರವೇ ಮಲಬದ್ಧತೆಯ ನಿವಾರಣೆಯಾಗುತ್ತದೆಂಬುದು ಹೆಚ್ಚಿನವರಿಗೆ ತಿಳಿದಿರಲಾರದು. ಮೊಸರಿನೊಂದಿಗೆ ಈ ಔಷಧಿಯನ್ನು ಸೇವಿಸಿದರೆ ಮಲವೇ 'ಬಂದ್' ಆಗುವುದು. ಇದೇ ರೀತಿ ಹಗ್ಗ ಜಿಗಿತದಿಂದ ಶರೀರಕ್ಕೆ ವ್ಯಾಯಾಮವಾಗುವುದು ಮತ್ತು ಸಕ್ರಿಯತೆಯುಂಟಾಗುವುದೆಂದು ಬರೀ ನೆಲದಲ್ಲಿ ಹಗ್ಗ ಜಿಗಿಯಬಾರದು. ಬದಲಾಗಿ ಜಿಗಿಯುವಾಗ ನೆಲದಲ್ಲಿ ಕಂಬಳಿಯನ್ನು ಹಾಸಿ ಜಿಗಿಯಬೇಕು. ಇಲ್ಲವಾದರೆ ನೆಲದೊಂದಿಗೆ ಘರ್ಷಿಸಿ ಕಾಲುಗಳಲ್ಲಿ ನೋವುಂಟಾಗಬಹುದು. ಅದರೊಂದಿಗೆ ಇನ್ನೊಂದು ನೆನಪಿನಲ್ಲಿಡಬೇಕಾದ ವಿಷಯವೆಂದರೆ, ಒಂದೇ ಸಮನೆ ಜಿಗಿಯಬಾರದು. ನಡುನಡುವೆ ವಿಶ್ರಾಂತಿ ತೆಗೆದುಕೊಳ್ಳಬೇಕು.

ಅಲ್ಲದೆ ಯಾವುದೇ ವಸ್ತುವಿನಲ್ಲಿರುವ ಪೌಷ್ಟಿಕಾಂಶಗಳು ಏನು, ಅದರಿಂದ ಶರೀರಕ್ಕೆ ಬೇಕಾಗುವ ಅಂಶ ಯಾವುದು, ತೊಂದರೆಯಾಗುವ ಅಂಶ ಯಾವುದು ಎಂಬುದನ್ನೆಲ್ಲ ವೈದ್ಯರೊಂದಿಗೆ ವಿಚಾರಿಸಿ ತಿಳಿದುಕೊಳ್ಳಬೇಕು. ಎಂದಿಗೂ ನಮ್ಮಂತಹವರೇ ಆದ (ತಿಳಿಯದ)ವರ ಸಲಹೆ ಕೇಳಬಾರದು.

ನಮ್ಮ ಶರೀರದ ರಚನೆ ಬಹಳ ನಾಜೂಕಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಶರೀರ ಪ್ರಕೃತಿಯೂ ಭಿನ್ನವಾಗಿರುತ್ತದೆ. ಪ್ರಾಯಶಃ ಇತರರನ್ನು ನೋಡಿ ಅಥವಾ ಇತರರಿಂದ ಕೇಳಿ ನಾವು ಸ್ವತಃ ನಮ್ಮ ವೈದ್ಯರಾಗುತ್ತೇವೆ. ಇದರಿಂದಾಗಿ ಹಿಂದಿನ ಕಾಯಿಲೆಗೆ ಬಡ್ಡಿಯಾಗಿ ಹೊಸ ಕಾಯಿಲೆಗಳನ್ನು ಪಡೆದುಕೊಳ್ಳುತ್ತೇವೆ. ಕೊನೆಗೆ ಎರಡೂ ಕಾಯಿಲೆಗಳ ಚಿಕಿತ್ಸೆಗಾಗಿ ಪರದಾಡುತ್ತೇವೆ.

[ಮಂಜು ನಾಗೌರಿ ಅವರ: ಹಿಂದಿ ಮೂಲದಿಂದ]

ಕುರೂಪಿಯು ಎಂದಿನವರೆಗೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುವದಿಲ್ಲವೋ ಅಲ್ಲಿಯವರೆಗೂ ತಾನು ಇತರರಿಗಿಂತ ಸೌಂದರ್ಯಶೀಲನೆಂದುಕೊಂಡಿರುತ್ತಾನೆ.

—ಭರ್ತೃಹರಿ

ಬೇಕು - ಕೃಷಿರಂಗಕ್ಕೆ ಕಾಯಕಲ್ಪ

ಎ. ಪಿ. ಚಂದ್ರಶೇಖರ

ಎಂಜಿನಿಯರಿಂಗ್ ಪದವೀಧರ ಈ ಲೇಖಕ ಸ್ವಂತ ಇಚ್ಛೆಯಿಂದ ಕೃಷಿಕ ಆಗಿದ್ದಾರೆ. ಪ್ರತ್ಯಕ್ಷ ಪ್ರಯೋಗದಿಂದ ಅನುಭವ ಸಂಪಾದನೆ, ಇದನ್ನು ತಾರ್ಕಿಕ ವಾಗಿ ನಿರೂಪಿಸುವ ಕೌಶಲ ಮತ್ತು ಆಸಕ್ತರಿಗೆ ವಿವರಿಸುವ ಉತ್ಸಾಹ ಇವರದು. "ಬೇಸಾಯದವ ತಾ ಬೇಗ ಸಾಯ" ಎನ್ನುವ ಕವಿ ವಾಣಿಗೆ ನಿದರ್ಶನ ಇವರ ಸಸ್ಯ ಕೃಷಿ, ಅಂತೆಯೇ ಸಾಹಿತ್ಯ ಕೃಷಿ ಕೂಡ.

ಮಹಾತ್ಮಾ ಗಾಂಧೀಜಿಯವರ ಈ ಸೂಕ್ತಿಯನ್ನು ದಯವಿಟ್ಟು ಗಮನಿಸಿ:

"ಬಳಕೆದಾರ ನಮ್ಮ ಆವರಣಕ್ಕೆ ಭೇಟಿಕೊಡುವ ಪ್ರಾಮುಖ್ಯ ಸಂದರ್ಶಕ ಆತ ನಮ್ಮ ಮೇಲೆ ಅವಲಂಬಿತನಾಗಿಲ್ಲ. ನಾವು ಆತನನ್ನು ಅವಲಂಬಿಸಿದ್ದೇವೆ. ಆತನು ನಮ್ಮ ಕೆಲಸಕ್ಕೆ ಅಡ್ಡಿ ಅಲ್ಲ. ಆತನ ಭೇಟಿಯು ಉದ್ದೇಶ ಪೂರ್ವಕ. ನಮ್ಮ ವ್ಯವಹಾರದಲ್ಲಿ ಆತನು ಹೊರಗಿನವನಲ್ಲ, ಅದರ ಒಂದು ಭಾಗವೇ ಆಗಿದ್ದಾನೆ. ಆತನ ಸೇವೆ ಮಾಡುವ ಮೂಲಕ ನಾವು ಆತನಿಗೆ ಉಪಕಾರ ಮಾಡುತ್ತಿಲ್ಲ. ಹಾಗೆ ಸೇವೆ ಮಾಡಲು ಅವಕಾಶ ನೀಡುವುದರ ಮೂಲಕ ಆತನೇ ನಮಗೆ ಕೃಪೆ ತೋರುತ್ತಿದ್ದಾನೆ."

ಮೇಲಿನ ಸಂದರ್ಭದಲ್ಲಿ "ಬಳಕೆದಾರ" ಇರುವಲ್ಲಿ "ರೈತ" ಎಂದಿಟ್ಟುಕೊಳ್ಳಿ. ಆಗಲೂ ವಾಕ್ಯಗಳೂ ಸಮರ್ಪಕವಾಗಿಯೇ ಇರುತ್ತವೆ. ರೈತ ದೇಶದ ಅನ್ನದಾತನೂ ಹೌದು ಬಳಕೆದಾರನೂ ಹೌದು. ರೈತ ತನ್ನ ಬೆಳೆಯೊಂದಿಗೆ ಅನ್ನದಾತನಾಗಿ ಹೋಗಲಿ, ಯಾವುದೇ ಕಾರ್ಯನಿಮಿತ್ತ, ವಸ್ತು ನಿಮಿತ್ತ ಬಳಕೆದಾರನಾಗಿ ಹೋಗಲಿ, ಎಲ್ಲೇ ಹೋಗಲಿ ಶೋಷಣೆಗೆ ಒಳಗಾಗುತ್ತಾನೆ. ರೈತನಷ್ಟು ಶೋಷಣೆಗೊಳಗಾಗುವ ವ್ಯಕ್ತಿ ಈ ದೇಶದಲ್ಲಿ ಬೇರೆ ಇಲ್ಲ. ಅನ್ನ ಕೊಟ್ಟು ಸಾಕುವ ಅಮ್ಮನಿಗೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪೂಜ್ಯ ಸ್ಥಾನ. ಆದರೆ ಆ ಅನ್ನವನ್ನು ಬೆಳೆಯುವ ರೈತನಿಗೆ ನಮ್ಮಲ್ಲಿ ಕನಿಷ್ಠ ಮಾನ. ಮನುಷ್ಯನ ಪ್ರಥಮ ಅವಶ್ಯಕತೆಗಳು ಮೂರು ಎಂದು ಹೇಳುವ ಕಾಲ ಇತ್ತು. ಆದರೆ ಈಗ ಅವು ನಾಲ್ಕು ಎನ್ನುವ

ಕಾಲ ಬಂದಿದೆ. ೧. ಅಶನ ೨. ವಸನ ೩. ವಸತಿ ೪. ಐಷಾರಾಮು (ಭೋಗ ವಸ್ತುಗಳು.)

"ರೈತ ದೇಶದ ಬೆನ್ನೆಲುಬು" ಎಂದು ಎಲುಬಿಲ್ಲದ ನಾಲಿಗೆಯಿಂದ ನಾವೆಲ್ಲಾ ಭಾಷಣ ಮಾಡುತ್ತೇವಲ್ಲಾ ಅಂಥ ರೈತರ ಸಂಖ್ಯೆ ಶೇಕಡಾ ೭೦. ಉಳಿದವರು ಶೇಕಡಾ ೩೦ ಎಂಬುದು ನಮಗೆಲ್ಲಾ ಗೊತ್ತು. ಆವಶ್ಯಕತೆಗಳಲ್ಲಿ ಮೊದಲನೆಯದಾದ ಅಶನ ವನ್ನು ಶೇಕಡಾ ೭೦ ರಷ್ಟಿರುವ ರೈತರು ಉತ್ಪಾದಿಸುತ್ತಾರೆ. ಉಳಿದ ಶೇಕಡಾ ೩೦ ಜನರ ಹೊಟ್ಟೆ ತುಂಬಿಸುವ ಜವಾಬ್ದಾರಿ ಅವರ ಮೇಲೆ. ಈ ಉಳಿದ ಶೇಕಡಾ ೩೦ ಮಂದಿ ಏನು ಮಾಡುತ್ತಾರೆ? ಇವರುಗಳು ಉಳಿದ ಆವಶ್ಯಕತೆಗಳಾದ ವಸನ, ವಸತಿ ಹಾಗೂ ಭೋಗವಸ್ತುಗಳನ್ನು ಉತ್ಪಾದಿಸು ತ್ತಾರೆ. ಕೊನೆಯ ಮೂರು ಆವಶ್ಯಕತೆ ಗಳನ್ನು ಸೃಷ್ಟಿಸುವ ಇತರರಿಗೆ ಅನ್ನವೂ ಸೇರಿದಂತೆ ಎಲ್ಲವೂ ಚೆನ್ನಾಗಿ, ಅತಿಯಾಗಿ ಸಿಕ್ಕುತ್ತದೆ. ಆದರೆ ಎಲ್ಲರ ಹೊಟ್ಟೆ ತುಂಬಿ ಸುವ ರೈತನದು ಹೆಚ್ಚಿನ ಸಂದರ್ಭಗಳ ಲ್ಲೆಲ್ಲಾ ಅರೆ ಹೊಟ್ಟೆ, ಅರೆ ಬಟ್ಟೆ ಮುರುಕಲು ಮನೆ, ಅಜ್ಞಾನ, ಅಂಧಕಾರ. ಈ ಕಂದರ ಯಾಕೆ? ಯಾಕೆ? ದೇವರಿಗೇ ಆದರೂ ಬಲಿಪಶುವಾಗುವುದು ಸಾಧು ಪ್ರಾಣಿಗಳೆ. ಎಂದೂ ಕ್ರೂರ ಪ್ರಾಣಿಗಳಲ್ಲ. ಆದ್ದರಿಂದ ಈ ಕಂದರ ಮುಚ್ಚಬೇಕಾದರೆ ಬಲಿಪಶು ಗಳಾಗುವ ಆಡು ಕುರಿಗಳೆಲ್ಲಾ ಹುಲಿ, ಸಿಂಹಗಳಾಗಬೇಕು. ಎಲ್ಲರೂ ಯಂತ್ರೋ ದ್ಯಮಿಗಳಾಗಬೇಕು ಎಂಬ ವಾದ ಉಂಟು. ಹೀಗಾದಾಗ ಹುಲಿ ಸಿಂಹಗಳಿಗೆ ಆಹಾರ ಎಲ್ಲಿಂದ ಎಂಬ ಚಿಂತೆಯೂ ನಮಗಿಲ್ಲದೆ ಹಳ್ಳಿಗಳಲ್ಲಿ ಅಜ್ಞಾನವನ್ನೂ ಆ ಬಗ್ಗೆ ಅವಜ್ಞೆಯನ್ನೂ ನಾವು ಬೆಳೆಸಿದ್ದೇವೆ. ಪೇಟೆಯನ್ನು ಇನ್ನೂ ಭೀಕರವಾಗಿ ಬೆಳೆಸು ತ್ತಿದ್ದೇವೆ.

ರೈತರ ಉತ್ಪನ್ನಗಳು = ಕೃಷಿ ಉತ್ಪನ್ನ ಗಳು (ಅಶನ) ೭೦%

ರೈತೇತರ ಉತ್ಪನ್ನಗಳು = ಕೃಷೇತರ ಉತ್ಪನ್ನಗಳು (ವಸನ, ವಸತಿ, ಭೋಗವಸ್ತುಗಳು)

= ಕೈಗಾರಿಕೋತ್ಪನ್ನಗಳು ೩೦%

ರೈತೇತರರ ಉತ್ಪನ್ನಗಳಾದ ಕಾರ್ಖಾನೆ ವಸ್ತುಗಳಿಗೆಲ್ಲಾ ವೈಜ್ಞಾನಿಕ ಬೆಲೆ ಇದೆ. ಆದರೆ ರೈತರ ಉತ್ಪನ್ನಗಳಿಗೆ ಅನ್ವಯವಾಗು ವುದು ಪ್ರೂರೈಕೆ ಮತ್ತು ಆವಶ್ಯಕತೆ ತತ್ತ್ವ ಅಥವಾ ಅದಕ್ಕಿಂತಲೂ ಕೀಳಾದ ಇನ್ನಾವುದೋ ಒಂದು ಶೋಷಕ ತತ್ತ್ವ. ಈಗ "ವೈಜ್ಞಾನಿಕವಾಗಿ ಬೆಲೆ" ಎಂದರೇ ನೆಂದು ನೋಡೋಣ. ಒಂದು ವಸ್ತುವನ್ನು ಉತ್ಪಾದಿಸಲು ಹಲವು ಖರ್ಚುಗಳಿರುತ್ತವೆ. ಭೂಮಿಯ ಬೆಲೆ, ಕಚ್ಚಾವಸ್ತುಗಳ ಬೆಲೆ, ಪರಿಕರಗಳ ಬೆಲೆ, ಕೂಲಿಯ ಹಣ, ಹಾಳಾ ಗುವ ಪ್ರಮಾಣ, ನಷ್ಟದ ಸಂಭಾವ್ಯತೆ (Risk) ಇತ್ಯಾದಿಗಳು ಒಟ್ಟು ಸೇರಿದಂತೆ ಉತ್ಪಾದನಾ ಖರ್ಚು ಬರುತ್ತದೆ. ಅದಕ್ಕೆ ಲಾಭಾಂಶ ಸೇರಿಸಿದರೆ ಮಾರಾಟದ ಬೆಲೆ.

ಖರ್ಚು + ಲಾಭಾಂಶ = ಮಾರಾಟ ಬೆಲೆ.

ಹೀಗೆ ಒಂದು ವಸ್ತುವಿನ ಬೆಲೆ ನಿರ್ಧಾರ ವಾದರೆ ಇದಕ್ಕೆ ವೈಜ್ಞಾನಿಕ ಬೆಲೆ ಎನ್ನು ವರು. ಇದು ಎಲ್ಲಾ ಕೈಗಾರಿಕೋತ್ಪನ್ನ ಗಳಿಗೆ ಸಾಧ್ಯವಾಗಿದೆ. ಆದರೆ ಕೃಷಿ ಉತ್ಪನ್ನ

ಗಳಿಗೆ ಸಾಧ್ಯವಾಗಿಲ್ಲ. ಕೃಷಿಯೇತರ ಉತ್ಪನ್ನಗಳಲ್ಲಿ ಎಂದರೆ ಬಟ್ಟೆ, ಮನೆ, ವಾಹನಗಳು, ಟಿವಿ, ಕಪಾಟು, ಪಾತ್ರೆ, ಸಾಬೂನು ಹೀಗೆ ಯಾವುದೇ ಭೋಗವಸ್ತುಗಳ ಬೆಲೆಯನ್ನು ಅವುಗಳ ಉತ್ಪಾದಕ ನಿರ್ಧರಿಸುತ್ತಾನೆ. ಆದರೆ ಅಕ್ಕಿ, ರಾಗಿ, ತೆಂಗು, ಅರಸಿನ, ಧಾನ್ಯಗಳು, ಹೀಗೆ ಯಾವುವೇ ಆಹಾರೋತ್ಪನ್ನಗಳ ಬೆಲೆಯನ್ನು ಅವುಗಳ ಉತ್ಪಾದಕನಾದ ರೈತ ನಿರ್ಧರಿಸುವುದಿಲ್ಲ. ಖರೀದಿದಾರರು ಅಥವಾ ವ್ಯಾಪಾರಿಗಳು ನಿರ್ಧರಿಸುವುದು. ಅವರ ಮುಂದೆ ದೀನವಾಗಿ, ಮೂಢನಾಗಿ ಕುಳಿತುಕೊಳ್ಳುವುದೊಂದೇ ಅವನಿಗಿರುವ ದಾರಿ. ಇಂಥ ದೈನ್ಯ, ಮೌಢ್ಯಗಳಿಗೆ ಅಜ್ಞಾನ, ಆಲಸ್ಯ, ಅನನುಭವ ಮೊದಲಾಗಿ ಹತ್ತಾರು ಕಾರಣಗಳಿವೆ. ಅವುಗಳಲ್ಲಿ ಒಂದಾದ ಕೃಷಿ ವ್ಯಾಪಾರದ ಬಗ್ಗೆ ಮಾತ್ರ ಈಗ ಚಿಂತಿಸುತ್ತೇನೆ.

ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ಮುಖ್ಯವಾಗಿ ನಾಲ್ಕು ಕ್ಷೇತ್ರಗಳನ್ನು ಗುರುತಿಸಬಹುದು ೧. ಖಾಸಗೀ ವ್ಯಾಪಾರಿಗಳು ೨. ನಿಯಂತ್ರಿತ ಮಾರುಕಟ್ಟೆಗಳು ೩. ತೋಟದ ಬೆಳೆಗಾರರ ಸಹಕಾರಿ ಸಂಘ, ೪. ಸಂತೆಗಳು. ವ್ಯಾಪಾರದ ಕ್ಷೇತ್ರ ಯಾವುದೇ ಇರಲಿ ಕೃಷಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಎರಡು ಸೂತ್ರಗಳಿವೆ.

೧. ಮಸಣದ ಹೆಣ, ವ್ಯಾಪಾರಕ್ಕೆ ಬಂದ ಕೃಷಿವಸ್ತು ಒಂದೇ ಸುಟ್ಟುಹಾಕಿಬಿಡಿ.

೨. ಅಳಿಯ ಅಲ್ಲ ಮಗಳ ಗಂಡ (ಇದು ದಲ್ಲಾಳಿ ಕಮಿಷನ್ನಿಗೆ ಸಂಬಂಧಿಸಿದಂತೆ–ರೈತರಿಂದ ದಲ್ಲಾಳಿ ಸ್ವೀಕರಿಸಬಾರದೆಂಬ ಕಾನೂನು ಇದೆ. ಆದರೆ ಇದು ಎಲ್ಲೂ ಜಾರಿಯಲ್ಲಿಲ್ಲ. ಅಲ್ಲೆಲ್ಲಾ ಕೇಳಿದರೆ ವ್ಯಾಪಾರಿಗಳು ಹೇಳುವ ಮಾತು "ಅಳಿಯ ಅಲ್ಲ. ಮಗಳ ಗಂಡ" ಎಂದರೆ ದಳ್ಳಾಳಿ ಹಣ ರೈತರಿಂದಾದರೂ ಬರಲಿ, ವ್ಯಾಪಾರಿಗಳಿಂದಾದರೂ ಬರಲಿ ಕೊನೆಗೆ ರೈತನಿಗೆ ಸಿಗುವ ಎಂಜಲು ಕಾಸು ಅಷ್ಟೇ ಒಂದೇ.) (ಎಲ್ಲರೂ ನೆಕ್ಕಿ ಉಳಿದದ್ದು.)

ಈ ವಾಕ್ಯಗಳ ವಾಚ್ಯಾರ್ಥ. ವ್ಯಂಗ್ಯಾರ್ಥಗಳು ಎಷ್ಟು ಉಗ್ರವಾಗಿವೆ ನೋಡಿ. ವ್ಯಾಪಾರಿಗಳಿಗೆ, ಒಟ್ಟಿಗೆ ನಮ್ಮ ವ್ಯವಸ್ಥೆಗೆ ಕೃಷಿ ಉತ್ಪನ್ನಗಳ ಬಗ್ಗೆ ಕೃಷೀಕರ ಬಗ್ಗೆ ಎಂಥ ತುಚ್ಛ ಧೋರಣೆ ಇದೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಸಾಕ್ಷಿ ಬೇಕೇ?

ಮೇಲೆ ಹೇಳಿದ ಅರ್ಬುದ ರೂಪಿ ಧೋರಣೆ ಬದಲಾಗಬೇಕಾದರೆ ಮೊದಲನೆಯದಾಗಿ ಕೃಷಿಕ ತನ್ನ ಅಜ್ಞಾನ, ಆಲಸ್ಯ, ಅನನುಭವಗಳನ್ನು ಕುಡುಗಿ ಗುಡುಗುವಂತಾಗಬೇಕು. ಎರಡನೆಯದಾಗಿ ಇದಕ್ಕೆ ಪ್ರಭುಗಳ (ಸರ್ಕಾರದ) ಸಹಕಾರ ಬೇಕು. ನಮ್ಮ ಕೃಷಿಗೆ–ಕೃಷಿ ವ್ಯಾಪಾರಕ್ಕೆ ಈಗ ಕಾಯಕಲ್ಪ ಬೇಕು. ಕಾಯಕಲ್ಪವೆಂದರೆ ಮುಪ್ಪಡರಿದ ದೇಹಕ್ಕೆ ಮರುಯವ್ವನವನ್ನು ಕೊಡುವ ಆಯುರ್ವೇದೀಯ ಪದ್ಧತಿ. ಕೃಷಿ–ವ್ಯಾಪಾರಕ್ಕೆ ಸಂಬಂಧಿಸಿದಂತೆ ಮೇಲೆ ಹೇಳಿದ ನಾಲ್ಕು ಕ್ಷೇತ್ರಗಳಿಗೆ ಕಾಯಕಲ್ಪವನ್ನೊದಗಿಸಿಕೊಡುವ ಚ್ಯವನರು ನೀವಾಗಬೇಕೆಂದು ಎಲ್ಲಾ ಮಂತ್ರಿ ಮಹಾಶಯರುಗಳಲ್ಲಿ, ಅಧಿಕಾರಿಗಳಲ್ಲಿ ವಿನಂತಿ ಮಾಡುತ್ತೇನೆ.

ಈಗ ವ್ಯಾಪಾರದ ನಾಲ್ಕು ಕ್ಷೇತ್ರಗಳ ಬಗ್ಗೆ ಸ್ಥೂಲವಾಗಿ ನೋಡೋಣ.

೧. ಖಾಸಗೀ ವ್ಯಾಪಾರಿಗಳು–ನಾವು ಬೆಳೆ

ಯುತ್ತಿರುವ ಅನೇಕ ಬೆಳೆಗಳಲ್ಲೊಂದು ತೆಂಗಿನ ಕಾಯಿ. ಕೊಯ್ದ ಕಾಯಿಗಳನ್ನು ಶೇಖರಿಸಿಡಲು ಉಗ್ರಾಣಗಳಿರಲಿಲ್ಲ. ಹಣದ ಅಗತ್ಯತೆ ಬೇರೆ. ಹಾಗಾಗಿ ಕೊಯ್ದ ಒಡನೆ ನಾನು ಮಾರಬೇಕಾಗುತ್ತಿತ್ತು. ಆಗ ನಾನು ವ್ಯಾಪಾರಿಗಳ ಮುಂದೆ ಯಾವುದೇ ಬೆಲೆ ಹೇಳಲು ಶಕ್ತನಾಗಿರಲಿಲ್ಲ, ಮಾರುವುದು ನನಗೆ ಜರೂರ್ ಅವಶ್ಯ. ಇಂಥ ಸಂದರ್ಭಗಳ ಲಾಭವನ್ನು ವ್ಯಾಪಾರಿಗಳು ಬಹಳ ಯಶಸ್ವಿಯಾಗಿ ಪಡೆಯುತ್ತಾರೆ. ಹೆಚ್ಚಾಗಿ ರೈತರಲ್ಲಿ ಇಂಥ ಸಂದರ್ಭಗಳೇ ಇರುವುದು. ಹಣ್ಣು ತರಕಾರಿಗಳಂತೂ ದಾಸ್ತಾನು ಇಡಲಾಗದ ವಸ್ತುಗಳು. ರೈತ ಇವುಗಳನ್ನೆಲ್ಲಾ ತಾನೂ ತಿನ್ನದೆ ದಲ್ಲಾಳಿಗಳು ಹೇಳಿದ ದರಕ್ಕೆ ಮಾರುವ ದುಃಸ್ಥಿತಿ. ತಾನು ತಿಂದರೆ ನಷ್ಟ ಅಷ್ಟು ಹೆಚ್ಚುತ್ತದಲ್ಲಾ ! ಈ ಹಣ್ಣು ತರಕಾರಿಗಳೆಲ್ಲಾ ವ್ಯಾಪಾರಿಯ ಕೈಗೆ ಬರುವವರೆಗೆ ಕಳಪೆ ಮಾಲುಗಳೆನಿಸುತ್ತವೆ. ಆಮೇಲೆ ಅವೇ ಮಾಲುಗಳು ಒಳ್ಳೆಯವಾಗುತ್ತವೆ. ಕೃಷಿಕನ ವಸ್ತುಗಳನ್ನು ಹೀನಾಯವಾಗಿ ಕಾಣುವ ಕಲೆಯಲ್ಲೇ ವ್ಯಾಪಾರಿಯ ಹಿರಿಮೆ ಇರುವುದು. ಕೃಷಿಕ ತನ್ನ ವಸ್ತುಗಳನ್ನು ಮಾರುವ ಸಂದರ್ಭ ಉಂಟಾಗುವ ಅಪರಾಧಿ ಭಾವವನ್ನು ಮಾತುಗಳಿಂದ ಹೇಳಲು ಸಾಧ್ಯವಿಲ್ಲ. ಅನುಭವಿಸಿಯೇ ತೀರಬೇಕು. ಹಿಂದಿನ ದಿನವೆಲ್ಲಾ ಬಿಸಿಲಲ್ಲಿ ಕೊಯ್ದು ಗೂಡೆಗಳಿಗೆ ಜೋಡಿಸಿ ಬೆಳ್ಳಂಬೆಳಗ್ಗೆ ಎದ್ದು ಸೈಕಲು ತಳ್ಳುತ್ತಾ ಹತ್ತಾರು ಮೈಲು ಹೋದಾಗ ಹದಿನೈದು ಕಿಲೋ ಟೊಮೆಟೋ ಗೂಡೆಗೆ ಐದು ರೂಪಾಯಿ ಸಿಗುವ ಸಂದರ್ಭಗಳೇ ಹೆಚ್ಚು. ಇಷ್ಟಾದರೆ ಮಾತ್ರ ಕೊಡುತ್ತೇನೆ, ಬೆಳೆಯುತ್ತೇನೆ, ಇಲ್ಲದಿದ್ದಲ್ಲಿ ಗೊಬ್ಬರ ಮಾಡುತ್ತೇನೆ ಎನ್ನುವ ಪ್ರಜ್ಞೆ, ಹೆಚ್ಚು ಮತ್ತು ಆರ್ಥಿಕ ಧಾರಣ ಸಾಮರ್ಥ್ಯ ಎಷ್ಟು ಜನರಿಗಿದೆ? ನಮ್ಮ ರೈತರದು ತೂತು ಬಾಲ್ದಿಯಲ್ಲಿ (ಬಕೇಟು) ನೀರು ಸೇದುವ ವ್ಯರ್ಥ ಪ್ರಯತ್ನ. ಇಂಥ ಅನರ್ಥ ನನ್ನಿಂದಲೂ ಆಗಬಾರದೆಂದು, ನಾನು ನಿಂತ ನೆಲವು ಭದ್ರವಾಗಿರುವುದರಿಂದ, ಕೇವಲ ಪೇಟೆಯ ಮಂದಿಯ ಹೊಟ್ಟೆ ತುಂಬಿಸಲು ಮಾತ್ರ ಇರುವ ಹಣ್ಣು, ತರಕಾರಿ ಬೆಳೆಯುವುದನ್ನು ಬಿಟ್ಟು ತೆಂಗು ಬೆಳೆಯುತ್ತಿದ್ದ ಕಥೆಯನ್ನು ಈತನಕ ಹೇಳುತ್ತಿದ್ದೆ. ಮುಂದುವರಿಸುತ್ತೇನೆ, ಕಾಯಿ ತುಂಬಲು ಕೋಣೆ ಕಟ್ಟಿದೆ. ಇದರಿಂದ ಒಂದಷ್ಟು ದಿನ ಬಿಟ್ಟು ನಾಲ್ಕು ವ್ಯಾಪಾರಿಗಳ ಜೊತೆ ಚರ್ಚೆ ಮಾಡಿ ಸ್ವಲ್ಪ ದರ ಹೆಚ್ಚು ಪಡೆಯುವುದು ಸಾಧ್ಯವಾಯಿತು. ಆದರೆ ಜನರಲ್ಲಿ ವ್ಯವಸ್ಥಿತವಾಗಿ ತುಂಬಲ್ಪಟ್ಟ ಕೊಲೆಸ್ಟರಾಲ್ ಭ್ರಮೆ, ರಿಫೈನ್ಡ್ ಎಣ್ಣೆಯ ಭ್ರಾಂತಿ, ಡಿಟರ್ಜೆಂಟಿನ ಪಿಡುಗು ಸರಕಾರದ ಪಾಮೆಣ್ಣೆ, ಆಯಾತ ಧೋರಣೆಗಳ ಕಾರಣವಾಗಿ ಕಳೆದ ವರ್ಷ ತೆಂಗಿನ ದರ ಕುಸಿಯಿತು. ಯಾಕಾದರೂ ಬೆಳೆಯುತ್ತೇವೋ ಎಂಬ ಭಾವ ಬಂತು. ಈ ವರ್ಷ ಬೆಲೆ ಇಲ್ಲದಿದ್ದರೂ, ಮುಂದಿನ ವರ್ಷಕ್ಕೆ ಏರೀತು ಎಂಬ ದೂರದ ಆಸೆಯಿಂದ (ದುರಾಸೆ ಅಲ್ಲ) ಒಂದಷ್ಟು ಕಾಯಿಗಳನ್ನು ಕೊಬ್ಬರಿಗೆ ಹಾಕಿದೆ. ನನಗೆ ತಿಪಟೂರು ಕಡೆಯ ಕೆಲವು ಮಿತ್ರರಿದ್ದಾರೆ. ಅವರ ಪ್ರಕಾರ ಅಂತಿಮ ಉತ್ಪನ್ನವಾದ ಕೊಬ್ಬರಿ ಮಾಡುವುದರಿಂದ ಗರಿಷ್ಠ ಲಾಭ. ಹೀಗೆ ಲೆಕ್ಕಾಚಾರ ಮಾಡಿ ನಾನು ಕಳೆದ ವರ್ಷ ಇಟ್ಟ ಕಾಯಿಗಳು ಈ

ವರ್ಷ ಕೊಬ್ಬರಿಗಳಾದುವು. ನನಗೆ ಅನುಭವ ಸಾಲದೆ ಕಾಯಿ ಆರಿಸಿದ ಕ್ರಮ, ಇಟ್ಟ ಕ್ರಮ ಸರಿಯಾಗದೆ ಬಹಳಷ್ಟು ಕೆಟ್ಟು ಹೋದದ್ದು ಒತ್ತಟ್ಟಿಗಿರಲಿ. ಅದು ನನ್ನ ಅಜ್ಞಾನ. ಕಾಯಿ ಹಾಗೂ ಕೊಬ್ಬರಿಯ ಬೆಲೆ ಈ ವರ್ಷವೂ ಹೇಳುವಷ್ಟು ಏರಲಿಲ್ಲ. ಲಾಭದಾಯಕವಾಗಿಲ್ಲ. ನನ್ನ ಉಳಿದ ಕೊಬ್ಬರಿ ಮಾದರಿಯನ್ನು ಹಿಡಕೊಂಡು ಸಂತೆ ಪೇಟೆಯ ತುಂಬೆಲ್ಲಾ ಅಲೆದೆ. ಎಲ್ಲರಿಗೂ "ಶಂಖದಿಂದ ಬಂದರೇ ತೀರ್ಥ." ಅದರಲ್ಲಿ ಕಸವಿರಲಿ, ಕಲ್ಮಷವಿರಲಿ, ಕ್ರಿಮಿಗಳೇ ಇರಲಿ, ಸ್ಥಳದ್ದು ಬೇಡ–ಕೊಬ್ಬರಿ ತಿಪಟೂರಿನಿಂದ ಬರುತ್ತದೆ, ಅರಸಿನ ಈರೋಡಿನಿಂದ ಬರುತ್ತದೆ. ತೊಗರಿ ಹೈದರಾಬಾದಿನಿಂದ ಬರುತ್ತದೆ. ಕಾಫಿ ಕೊಡಗಿನಿಂದ ಬರುತ್ತದೆ, ಮುಸುಂಬಿ ನಾಗಪುರದಿಂದ ಬರುತ್ತದೆ. ಹೀಗೆ ಇಲ್ಲಿ ನಾನು ಬೆಳೆದ ಮೇಲೆ ಹೇಳಿದ ಒಂದೊಂದು ವಸ್ತುಗಳನ್ನು ಮಾರಬೇಕಾದರೆ ನಾನು ಒಮ್ಮೊಮ್ಮೆಯೂ ನೀರಿನಲ್ಲಿ ಮುಳುಗಿ ನೀರು ಕುಡಿದು ಈಜಾಡಬೇಕಾಗಿದೆ. ಇನ್ನೂ ಈಜು ಕಲಿತಾಗಲಿಲ್ಲ. ದಡ ಸೇರಿಲ್ಲ. "ಬದುಕು ಕತ್ತಲೆಯ ಗವಿ ಬಲು ದೂರದ ಬೆಳಕಿನೆಡೆಗೆ ಕನಿಕರಿಸಿ ನಡೆಸೆನ್ನನೂ" ಎಂದು ಸಾಧ್ಯವಾದಲ್ಲೆಲ್ಲಾ, ಸಾಧ್ಯವಿರುವವರಲ್ಲೆಲ್ಲಾ ಬೇಡಿಕೊಳ್ಳುವುದೊಂದೇ ಉಳಿದಿರುವ ಮಾರ್ಗ. ಹೇಳಿದರೆ ಇನ್ನೂ ಹೇಳಬೇಕೆನ್ನಿಸುವ, ಹೇಳಿದಷ್ಟೂ ರೋಸಿ ಹೋಗುವ, ಕೇಳಿದವರಿಗೆ ರಂಜನೆಯ ವಸ್ತು ಮಾತ್ರವಾಗುವ ಇಂಥ ಕಥೆಗಳು ಸಾವಿರಾರು.

೨. ನಿಯಂತ್ರಿತ ಮಾರುಕಟ್ಟೆಗಳು: ಖಾಸಗಿಯವರ ಹೊಡೆತದಿಂದ ತಪ್ಪಿಸಲೆಂದು ಸರ್ಕಾರ ನಿರ್ಮಿಸಿದ ಸಂಸ್ಥೆ ಇದು. ಕಡತಗಳಲ್ಲಿ ಬಹಳವಾಗಿ ಆದರ್ಶಗಳು ಪ್ರತಿಪಾದಿಸಲ್ಪಡುತ್ತವೆ. ಆದರೆ ವಾಸ್ತವದಲ್ಲಿ ಖಾಸಗಿ ವ್ಯಾಪಾರಕ್ಕಿಂತ ಹೆಚ್ಚಿನ ಯೋಗ್ಯತೆ ಇಲ್ಲಿಯೂ ಇಲ್ಲ. ತೂಕದಲ್ಲಿ ಮೋಸ, ಬೆಲೆಯಲ್ಲಿ ದಲ್ಲಾಳಿಗಳಿಗೂ, ವ್ಯಾಪಾರಿಗಳಿಗೂ ಒಪ್ಪಂದ, ಕೂಲಿಗಳ ತಕರಾರು, ಹೋಗಿ ಬರುವ ಕೂಲಿಗಳೆಲ್ಲಾ ಒಂದಷ್ಟಷ್ಟು ದವಸಗಳನ್ನು ತಮ್ಮ ಚೀಲಕ್ಕೆ ತುಂಬಿಸುವುದು ....ಇತ್ಯಾದಿ ಗಂಭೀರ ಅಪಾದನೆಗಳ ಬಗ್ಗೆ ಹಲವರಿಂದ ಕೇಳಿ ತಿಳಿದ ಪರಿಣಾಮವಾಗಿ ನಾನು ಇನ್ನೂ ಆ ಮಾರುಕಟ್ಟೆಯ ಮೆಟ್ಟಲೇರುವ ಸಾಹಸ ಮಾಡಲೇ ಇಲ್ಲ. ಅಲ್ಲಿ ಮಾರುವಂಥಾ ವಸ್ತುಗಳನ್ನೂ ಮಾರುವಷ್ಟು ಬೆಳೆಸಲೂ ಇಲ್ಲ. ಹಾಗಾಗಿ ಹೆಚ್ಚಿಗೆ ಹೇಳಲು ನನ್ನಲ್ಲಿ ಸರಕಿಲ್ಲ. ಆದರೂ ತೂಕದ ಬಗ್ಗೆ ಒಂದು ಮಾತು. "ಈಗ ತೂಕ ಸರಿಯಾಗಿದೆ–ಎಲೆಕ್ಟ್ರಾನಿಕ್ ತೂಕ ಯಂತ್ರಗಳಿವೆ ಹಾಗೆ, ಹೀಗೆ" ಎಂಬಿತ್ಯಾದಿ ಪ್ರಚಾರಗಳು, ಪ್ರಯೋಗಗಳು ನಡೆದಿವೆ. ಆದರೆ ಸರಕಾರ ಚಾಪೇ ಕೆಳಗೆ ತೂರುವಾಗ ಸಂಬಂಧಿತರು ರಂಗೋಲಿ ಕೆಳಗೆ ತೂರುತ್ತಾರೆ. ರಂಗೋಲಿಯನ್ನು ಕೆದಕುವ ಸಾಮರ್ಥ್ಯ ಅಸಂಘಟಿತರಾದ ರೈತರಿಗೆ ಇನ್ನೂ ಬಂದಿಲ್ಲ.

೩. ತೋಟದ ಬೆಳೆಗಾರರ ಸಹಕಾರಿ ಸಂಘ: ಇಲ್ಲಿಗೆ ಧಾರಾಳವಾಗಿ ಬಹಳಷ್ಟು ವಿಧದ ಸರಕುಗಳನ್ನು ಕೊಟ್ಟಿದ್ದೇನೆ. ಹಾಗಾಗಿ ಉತ್ಸಾಹದಿಂದ ಕೇಳುವವರಿದ್ದರೆ ಹೇಳಲು ಅಷ್ಟೇ ಧಾರಾಳವಾಗಿ ಸರಕೂ ಇದೆ. ಆದರೆ ಹೇಳುವುದರಿಂದೇನು? "ಸಂತೆ

ಯೊಳಗಿದ್ದು ಶಬ್ದಕ್ಕೆ ಸಾಚಿದೊಡೆಂತಯ್ಯಾ" ಎಂಬ ವೈರಾಗ್ಯವೂ ಬರುತ್ತದೆ. ತೋಟಗಾರಿಗಾ ಇಲಾಖೆಯ ಬಗ್ಗೆ ಹಿಂದೊಮ್ಮೆ ನಿಮ್ಮೆದುರು ಬಾರಿಸುತ್ತೇನೆ. ಅದು ನಿಮಗೆ ಸಂಘದ ಬಗ್ಗೆ ಚಿತ್ರಣ ಕೊಡಬಹುದೆಂದು ಭಾವಿಸುತ್ತೇನೆ.

ಮಾನ್ಯರೇ,

"ಮಸಣದ ಹೆಣ, ಮಾರ್ಕೆಟಿಗೆ ತಂದ ತರಕಾರಿ ಒಂದೇ" ಎಂಬುದು ತರಕಾರಿ ದಲ್ಲಾಳಿಗಳು ಅಂದೂ, ಇಂದೂ ಆಡುವ ಅಣಕ. ಈ ಸ್ಥಿತಿಯಿಂದ ರೈತನನ್ನು ಮೇಲೆತ್ತುವ, ಕೊನೇ ಪಕ್ಷ ಬಡ ಶವವನ್ನು ಶ್ರೀಮಂತ ಶವವನ್ನಾಗಿಯಾದರೂ ಕಾಣುವ ಉದ್ದೇಶದಿಂದ ಹುಟ್ಟಿದ ಸಂಸ್ಥೆ—ತೋಟದ ಬೆಳೆಗಾರರ ಸಹಕಾರಿ ಸಂಘ.

ಆದರೆ ಇಂದು ಈ ಸಹಕಾರಿ ಸಂಘ ರೈತನನ್ನು ನಡೆಸಿಕೊಳ್ಳುವ ರೀತಿ ಹೇಗೆ? ಈ ಸಂಘದಲ್ಲಿ ಕೆಜಿ ಬಟ್ಟುಗಳಿಗಿಂತ ತೂಕ ಹಾಕುವ ಜನರ ಸಂಖ್ಯೆ ಜಾಸ್ತಿ. ಪೆನ್ನುಗಳಿಗಿಂತ ಜಾಸ್ತಿ ಲೆಕ್ಕಗರಿದ್ದಾರೆ. ಬರುವ ರೈತರಿಗಿಂತ ಜಾಸ್ತಿ ಸಂಘ ಪರಿವಾರವಿದೆ. ಆದರೆ "ಮಾರುವ ತಮಗಿಂತ ಬೆಳೆವ ರೈತ ಹೆಚ್ಚು" ಎಂಬ ಪ್ರಜ್ಞೆ ಉಳ್ಳವರು ಮಾತ್ರ ಇಲ್ಲ.

ವಾಹನಗಳಲ್ಲಿ, ತಲೆಹೊರೆಯಲ್ಲಿ ತಂದ ತರಕಾರಿಗಳನ್ನು ಇಳಿಸಿ, ತೂಕದ ಕಟ್ಟೆಗೆ ಅಣಿಗೊಳಿಸಲು ಇಲ್ಲಿ ಸಂಬಳದ ಆಳುಗಳಿದ್ದಾರೆ. ಆದರೆ ಬಂದ ತಂದ ರೈತರು ಈ ಆಳುಗಳಿಗೆ ಆಳುಗಳು, ಆಮೇಲೆ ತೂಕ ಹಾಕಲೂ ಪ್ರತಿಷ್ಠೆ. ವೃಥಾ ಕಾಲ ಹರಣ. ಸಾವು ತೂಗುವುದೇ ವರವೆಂಬ ವಾದ.

ಎಲ್ಲೂ ಇಲ್ಲದ ಪ್ರಮಾಣಿಕತೆ ಇಲ್ಲಿ ಬರಲುಂಟೇ? ತೂಕದಲ್ಲಿ ಅವರ ಖುಷಿ ಬಂದಷ್ಟು ಮೋಸ. ಅದಕ್ಕೊಪ್ಪದಿದ್ದರೆ ಮರುದಿನ ಆ ರೈತನೇ ತ್ಯಾಜ್ಯ. ನನ್ನ ಎಲ್ಲ ತರ್ಕಗಳೂ, ತವಕಗಳೂ ಅಲ್ಲಿ ಸೋಲುತ್ತವೆ.

ಯಾವುದೇ ವೈಜ್ಞಾನಿಕ ಆಧಾರಗಳಿಲ್ಲದೆ ಕಳಪೆ ಮತ್ತು ಸಾಜಾ ಮೌಲ್ಯಗಳ ವರ್ಗೀಕರಣ. ಅಲ್ಲಿ ಪಾತ್ರ ವಹಿಸುವುದು ವೈಯಕ್ತಿಕ ಸಮೀಕರಣ. ತೂಕ ಪ್ರಕಾರ ಖರೀದಿ ಎಂದಾದ ಮೇಲೆ ಕಾಯಿ ಸಣ್ಣದಾದರೂ, ದೊಡ್ಡದಾದರೂ ದರ ಒಂದೇ ಆಗಬೇಡವೇ? ಬೂದುಕುಂಬಳ ಸಣ್ಣದಾದರೂ ಬೇಡ, ದೊಡ್ಡದಾದರೂ ಬೇಡ. ಬೇಡಿಕೆ ಇರುವ ತರಕಾರಿಯಾದರೆ, ಬಿಕರಿ ಅಂಗಡಿ ಹುಡುಗರ ಎಳೆದಾಟ. ಅವರ ಖುಷಿವಾಸಿ ಪಾಲು ಹಾಗೂ ತೂಕ, ಇಲ್ಲದಿದ್ದರೆ Store keeper ನ್ನು ಗೋಗರೆಯ ಬೇಕು. ಗಂಟೆಗಟ್ಟಲೆ ಕಾಯಬೇಕು.

ಸಂಘದ ಕೆಲಸದ ಅವಧಿ ಬೆಳಗ್ಗೆ ೭ ರಿಂದ ಸಂಜೆ ೭. ರೈತರ ಅನುಕೂಲಕ್ಕಾಗಿ ಇಷ್ಟೊಂದು ವಿಶಾಲ ಸಮಯ. ಆದರೆ ಮತ್ತೆ ಸಂಘ ಪರಿವಾರದ ಅನುಕೂಲ ಪ್ರಶ್ನೆ. ಬೆಳಗ್ಗೆ ೭ರ ಹೊತ್ತಿಗೆ ಬನ್ನಿ ಇಲ್ಲಾ ಸಂಜೆ ೫ರ ನಂತರ ಬನ್ನಿ. ಮಧ್ಯಂತರ ಬೇಡ, ತಿಂಗಳಾನುಗಟ್ಟಲೆ ಇಟ್ಟು ಮಾರಬಹುದಾದ ಬೂದುಕುಂಬಳಕ್ಕೂ ಇಂದು ಬೇಡ, ನಾಳೆ ತನ್ನಿ, ಈಗ ಬೇಡ ಸಂಜೆ ತನ್ನಿ, ಹಾಗಾದರೆ ಇವರಿಗೆ ಉಗ್ರಾಣಗಳು ಯಾಕೆ? ಜನಶಕ್ತಿ ಯಾಕೆ? ಇವರಿಗೆ ಸಂಬಳ ಯಾಕೆ?

ರೈತ ಬೆಳೆದ ಹೆಚ್ಚಿನ ವಸ್ತುಗಳಿಗೆ ವೈಜ್ಞಾನಿಕ ಬೆಲೆಇಲ್ಲ. ಅನಿವಾರ್ಯವಾಗಿ ಬೆಳೆದದ್ದನ್ನು ಮಾರದೆ ಗತಿ ಇಲ್ಲ. ಹಾಗೆಂದು ಮಾರಾಟ ಮಾಡುವುದು ಅವನ ವೃತ್ತಿಯಲ್ಲ. ಭೂಮಿಯನ್ನು ಪೋಷಿಸುವ ರೈತನ ತಪೋ ಸದೃಶ ಕಾಯಕಕ್ಕೆ ಸಹಕರಿಸಬೇಕಾದ ಸಹಕಾರಿ ಸಂಘಗಳಲ್ಲೇ ಹೀಗಾದರೆ? ಒಮ್ಮೊಮ್ಮೆ ಇವರಿಗಿಂತ ಆ ದಲ್ಲಾಳಿಗಳೇ ಲೇಸು ಎಂದೆನಿಸುತ್ತದೆ. ಸಂಘವಲ್ಲಿ ಸಂಬಳ ತಿನ್ನುವ ಮಂದಿಗಳಷ್ಟೇ ರೈತನೂ ಸೋಮಾರಿಯಾಗಿದ್ದರೆ!-ಚೆನ್ನಾಗಿ ಇರುತ್ತಿತ್ತೇನೋ? ತರಕಾರಿ ತಿನ್ನುವ ಓದುವರೆಲ್ಲರೂ ತರಕಾರಿ ಬೆಳೆವ ರೈತರ ಪರವಾಗಿ ಈ ಬಗ್ಗೆ ಒಂದು ಸಾರ್ವಜನಿಕ ಅಭಿಪ್ರಾಯ ರೂಪಿಸಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

೪. ಸಂತೆಗಳು: ಇಂಥಾ ಗೊಂದಲಗಳ ಮಧ್ಯೆ ಆಶಾಕಿರಣವಾಗುವ ಸಾಧ್ಯತೆ ಇರುವ ವ್ಯವಸ್ಥೆ ಸಂತೆ. ಇಲ್ಲಿ ಕೃಷಿಕ ತನ್ನ ಉತ್ಪನ್ನಗಳನ್ನು ತಾನೇ ಮಾರಬಹುದು. ಈಗಿನ ಸ್ಥಿತಿಯಲ್ಲಿ ವೈಜ್ಞಾನಿಕ ಬೆಲೆ ಸಿಕ್ಕೀತೆಂದು ಹೇಳಲಾಗದಿದ್ದರೂ ಸಾಧ್ಯತಮ ಗರಿಷ್ಠ ಬೆಲೆಯಾದರೂ ಸಿಗುವ ಸಂಭಾವ್ಯತೆ ಇದೆ. ಅದಕ್ಕಿಂತಲೂ ಹೆಚ್ಚಾಗಿ ರೈತ ತನ್ನ ವಸ್ತುಗಳನ್ನು ಪೇಟೆಯವರೆಗೆ ಹೊತ್ತುಕೊಂಡು ಹೋಗುವ ಕಷ್ಟ, ಖರ್ಚು ತಪ್ಪುವುದೂ ಬಹಳಷ್ಟು ಲಾಭವೆ. ಪ್ರತಿಯೊಂದು ವಸ್ತುವೂ ಪೇಟೆಗೆ ಹೋಗಿ ಮತ್ತೆ ಅಲ್ಲಿಂದ ಇನ್ನೊಬ್ಬ ರೈತ ಅದೇ ಹಳ್ಳಿಗೆ ಹೊತ್ತು ತರುವ ವೈರುಧ್ಯ ತಪ್ಪುವುದರಿಂದ ಅದೆಷ್ಟು ಲಾಭವಿದೆ ಎಂಬುವುದನ್ನಾದರೂ ಊಹಿಸಿ. ಮೈಸೂರಿನ ಅರಿಸಿನ ಈರೋಡಿನಲ್ಲಿ ಮೆರುಗುಗೊಂಡು ಮತ್ತೆ ಮೈಸೂರಿಗೆ ಬರುವಂಥಾ ನಮ್ಮ ಮುಟ್ಠಾಳತನ ಸಂತೆಗಳಿಂದ ಅಷ್ಟರಮಟ್ಟಿಗೆ ಕಮ್ಮಿಯಾದೀತು. ಪೇಟೆಯ ಸಾಂದ್ರತೆ ಕಮ್ಮಿಯಾಗಿ ವಿಕೇಂದ್ರೀಕರಣ ತತ್ವ ಆಚರಣೆಗೆ ಬರಲು ಹಳ್ಳಿಗಳಲ್ಲಿ ಸಂತೆ ನಡೆಯುವುದು ಬಹಳಷ್ಟು ಸಹಕಾರಿ. ಗ್ರಾಮೀಣ ಸೊಗಡು- ಸೊಗಸು ಸಂಭ್ರಮಿಸಲು ಸಹಕಾರಿಯಾಗುವಂತೆ ಎಲ್ಲೆಲ್ಲೂ ಸಂತೆಗಳನ್ನು ಸಂಘಟಿಸಲು ಸರಕಾರ ಸನ್ನದ್ಧವಾಗಬೇಕೆಂದು ಸಂಪ್ರಾರ್ಥಿಸುತ್ತಾ ವಿರಮಿಸುತ್ತೇನೆ.

ಬಿಸಿಲಿನ ತಾಪದಿಂದ ವ್ಯಾಕುಲಗೊಂಡ ಮಾನವನಿಗೆ ವೃಕ್ಷದ ನೆರಳು ಹೇಗೆ ಸುಖಕಾರಿಯಾಗಿರುವುದೋ ಹಾಗೆಯೇ ದುಃಖದ ಅನಂತರ ಒದಗಿ ಬರುವ ಸುಖವು ಆನಂದನೀಯವಾಗಿರುವುದು.

—ಕಾಳಿದಾಸ

ಸ್ವಂತ ಅನುಭವ—

ಈಡಿಟ್ಟದ್ದು ಏಡಿಗೆ ಸಿಕ್ಕಿದ್ದು ಸೀಗಡಿ!

ವೈದೇಹಿ ರಾಮಾನುಜ ಅಯ್ಯಂಗಾರ್

ಸ್ವತಃ ವಿಜ್ಞಾನ ಅಧ್ಯಾಪಿಕೆ. ಪುಸ್ತಕ, ಲೇಖನ ಮುಂತಾದವನ್ನು ಓದಿದಾಗ, ಮುಂದೆ ತರಗತಿಗಳಲ್ಲಿ ಅದರ (ಕ್ಯಾನ್ಸರ್) ಬಗ್ಗೆ ವಿವರಿಸಿದಾಗ ನಿರ್ಲಿಪ್ತ ಆಸಕ್ತಿ ಇದ್ದುದು ಸಹಜ. ಆದರೆ ಖುದ್ದು ತನಗೆ ಅದು ಬಂದಾಗ—ಏಡಿಗಂತಿ ಹಿಡಿದಾಗ —ಆ ನಿರ್ಲಿಪ್ತತೆ ಇರುವುದು ಸಾಧ್ಯವೇ, ಆ ಆಸಕ್ತಿ ಉಳಿದಿರುವುದು ಶಕ್ಯವೇ! ಈ ಸ್ವಂತಾನುಭವ ಕಥನ ಉತ್ತರವೀಯುತ್ತದೆ.

ಅಂದು ೧೯೮೯ ಜೂನ್ ೧೨. ಎಂದಿನಂತೆಯೇ ಅಂದೂ ಹಗಲಾಯಿತು, ಕತ್ತಲಾಯಿತು. ಆದರೆ ಅದು ನನ್ನ ಜೀವನದ ಒಂದು ತಿರುವಿಗೆ ಕಾರಣವಾದ ದಿನ ಎಂದು ಹೇಗೆ ತಾನೇ ತಿಳಿಯಬೇಕು? ಊಟ ಮಾಡಿ ಟಿ. ವಿ. ಸ್ವಲ್ಪ ಹೊತ್ತು ನೋಡಿ ಮಲಗಿದ ಒಡನೆ ನಿದ್ರಾದೇವಿಯ ಮಡಿಲನ್ನು ಸೇರಿದೆ. ರಾತ್ರಿ ಯಾವುದೋ ಹೊತ್ತಿಗೆ ಎಚ್ಚರವಾಯಿತು. ಎಂದೂ ಇಲ್ಲದ್ದು ಆಗ ಮಾತ್ರ ನನ್ನ ಕೈ ನನ್ನ ಉದರವನ್ನು ಸವರಿತು. ಅದು ಆ ಮಹಾಮಹಿಮನ ಕೈ ಎಂದೇ ಹೇಳಬೇಕು. ಏಕೆಂದರೆ ಹುಟ್ಟಿದಂದಿನಿಂದ ಆವರೆಗೆ ನಾನು ಆ ರೀತಿ ನನ್ನ ಉದರದ ಮೇಲೆ ಕೈ ಸವರಿಕೊಂಡಿದ್ದೇ ಇಲ್ಲ. ಅದೂ ನಡುರಾತ್ರಿಯಲ್ಲಿ! ಗಂಟೊಂದನ್ನು ಸ್ಪರ್ಶಿಸಿದಂತಾಯಿತು. ಬೆಚ್ಚಿದೆ. ಮೈ ಚಿವುಟಿಕೊಂಡೆ. ಇದೇನು ನಿಜವೋ ಕನಸೋ ಎಂದು. ಹಾ! ನೋವಾಯಿತು. ಖಂಡಿತ ಕನಸಲ್ಲ. ಮತ್ತೊಮ್ಮೆ ಮುಟ್ಟಿನೋಡಿಕೊಂಡೆ. ಮತ್ತೆ ಅದೇ ಗಂಟು. ಗುಳ್ಳೆಯಂತೂ ಖಂಡಿತ ಅಲ್ಲ. ಏಕೆಂದರೆ ಚರ್ಮದ ಒಳಗೆ ಗೆಡ್ಡೆಯಂತಿರುವ ಅನುಭವ. ಮತ್ತೆ ಸವರಿಕೊಂಡೆ. ಮತ್ತೊಂದು ಗಂಟು. ಐದಾರು ಇಂಚಿನ ಅಂತರದಲ್ಲಿ. ಗಾಬರಿಯಾಗಿ ಎದ್ದು ಕುಳಿತೆ. ಮತ್ತೆ ಮುಟ್ಟಿ ನೋಡಿಕೊಂಡಾಗ ಅದು ಮಾಯ! ಮಲಗಿದ ಸ್ಥಿತಿಯಲ್ಲಿ ಮತ್ತೆ ನೋಡಿಕೊಂಡೆ. ಗಂಟುಗಳ ಪುನರಾಗಮನ! ನನ್ನವರನ್ನು ಎಬ್ಬಿಸಿ ಹೇಳಿದೆ. "ನಿನಗೆಲ್ಲೊ ಭ್ರಾಂತು. ಸುಮ್ಮನೆ ಮಲಗಿಕೊ" ನಾನು ಗಾಬರಿಪಟ್ಟುಕೊಂಡಾಗಲೆಲ್ಲಾ ಅವರು ಹೇಳುವ ಮಾಮೂಲಿ ಮಾತು. ನಿದ್ದೆ ಓಟ

ಕಿತ್ತಿತು. ಮತ್ತೆ ಮತ್ತೆ ಮುಟ್ಟಿನೋಡಿಕೊಂಡೆ. ಎದ್ದು ಕುಳಿತಾಗ ಇಲ್ಲದ ಆ ಗಂಟುಗಳು ಮಲಗಿದಾಗ ಕಾಣಿಸಿಕೊಳ್ಳುತ್ತಿದ್ದುವು. ನೋವು ಸ್ವಲ್ಪವೂ ಇಲ್ಲ. ನಾನು ಆಕಸ್ಮಾತ್ ನೋಡಿಕೊಂಡಿದ್ದಕ್ಕೆ ಮಾತ್ರ ತಿಳಿಯಿತು. ಇಲ್ಲದಿದ್ದರೆ ಅವು ಇರುವುದೇ ನನಗೆ ತಿಳಿಯುತ್ತಿರಲಿಲ್ಲ. ಕಾಲಪ್ರವೃತ್ತಿಯಾದರೆ ಸರಿಹೋಗಬಹುದೆಂದು ಬೆಳಗಾಗುವವರೆಗೂ ಕಾದಿದ್ದು ಕಾಲಪ್ರವೃತ್ತಿಯಾದ ನಂತರ ನೋಡಿಕೊಂಡೆ. ಸ್ವಲ್ಪ ಸ್ವಲ್ಪ ಚಲಿಸುವ ಗಂಟುಗಳು ಹಾಗೆಯೇ ಇವೆ. ಊಟಮಾಡಿದರೆ ಸರಿಹೋಗಬಹುದೇನೋ, ಓಡಾಡಿದರೆ ಸರಿಹೋಗಬಹುದೇನೋ ಎಂದೆಲ್ಲಾ ಅಂದುಕೊಳ್ಳುತ್ತಾ ಆ ದಿನವನ್ನೂ ಕಳೆದೆ.

ಜೂನ್ ೧೪ರ ಬೆಳಿಗ್ಗೆ ಶಾಲೆಗೆ ಹೋಗುವ ಮುನ್ನ ಹತ್ತಿರವೇ ಇರುವ ಕಾಮಾಕ್ಷಿ ಆಸ್ಪತ್ರೆಗೆ ಹೋದೆ. ನನ್ನ ಸಹೋದರ ಡಾ॥ ಸಿ. ಜಿ. ನರಸಿಂಹನ್ ಅಲ್ಲಿ ಸರ್ಜನ್. ಯಾವುದೋ ಶಸ್ತ್ರಕ್ರಿಯೆಯಲ್ಲಿ ತೊಡಗಿದ್ದ ಅವರು ಅದೇ ಸ್ಥಿತಿಯಲ್ಲಿ ನನ್ನನ್ನು ಪರೀಕ್ಷಿಸಿ ಗಂಟುಗಳಿರುವುದನ್ನು ಖಾತ್ರಿ ಪಡಿಸಿಕೊಂಡರು. ಅವರಿಗೂ ಆತಂಕ.

ಅದೇ ದಿನ ಕೂಲಂಕಷ ವೈದ್ಯಕೀಯ ತಪಾಸಣೆಗಳು ನಡೆದುವು. ಸ್ಕ್ಯಾನಿಂಗ್ ಕ್ರಮ ವೀಕ್ಷಣೆ ಮಾಡಲಾಯಿತು. ಒಂದೊಂದಾಗಿ ಉದರದಲ್ಲಿರುವ ಎಲ್ಲಾ ಅಂಗಗಳನ್ನೂ ಪರೀಕ್ಷಿಸಲಾಯಿತು. ಕೊನೆಗೆ ಎಲ್ಲಾ ತಪಾಸಣೆ ಮುಗಿಯಿತು. ಗರ್ಭಕೋಶದ ಮೇಲೆ ಒಂದು ಗೆಡ್ಡೆ ಬೆಳೆದಿದೆಯೆಂದು ನಿರ್ಧರಿಸಿದರು. ಮುಂದೆ ಪ್ರಸೂತಿ ತಜ್ಞೆ ಡಾ॥ ಸೌಭಾಗ್ಯಲಕ್ಷ್ಮಿ ಅವರಿಂದ ಮತ್ತೊಮ್ಮೆ ಪರೀಕ್ಷೆಯಾಗಿ ಸ್ಕ್ಯಾನಿಂಗ್‌ನ ನಿರ್ಧಾರವನ್ನು ದೃಢಪಡಿಸಿಕೊಳ್ಳಲಾಯಿತು. ಆದಷ್ಟು ಬೇಗ ಶಸ್ತ್ರಚಿಕಿತ್ಸೆಯನ್ನು ಮಾಡಿ ಗೆಡ್ಡೆಯನ್ನು ತೆಗೆಯಬೇಕೆಂದು ತೀರ್ಮಾನಿಸಿ ಅಂದೇ ರಕ್ತ ಪರೀಕ್ಷೆ ಮತ್ತು ಮೂತ್ರ ಪರೀಕ್ಷೆ ಮಾಡಿ ಇಸಿಜಿ ತೆಗೆಯಲಾಯಿತು. ಶಸ್ತ್ರಚಿಕಿತ್ಸೆಯನ್ನು ಜೂನ್ ೧೯ರಂದು ಮಾಡುವುದೆಂದು ನಿಶ್ಚಯಿಸಲಾಯಿತು.

ಮನೆಗೆ ಹಿಂತಿರುಗಿದ ನನಗೆ ಭಯ ಆತಂಕಗಳು ಒಟ್ಟಿಗೇ ಲಗ್ಗೆ ಹಾಕಿದುವು. ಕೆಲವಾರು ಕಡೆ ಕೇಳಿ ನೋಡಿದ್ದರ ಅನುಭವದ ಮೇಲೆ ಇದು ಕ್ಯಾನ್ಸರ್ ಗೆಡ್ಡೆಯೇ ಇರಬಹುದೆಂದು ಯೋಚಿಸಿ ನಡುಕ ಉಂಟಾಯಿತು. ದೇವರಿಗೆ ಮೊರೆ ಹೊಕ್ಕೆ. ಹುಟ್ಟಿದವರು ಸಾಯಲೇಬೇಕೆಂಬುದು ನೂರಕ್ಕೆ ನೂರು ಸತ್ಯವಾದರೂ ಆ ಗಳಿಗೆ ಬಂದಾಗ ಮಾತ್ರ ಮನಸ್ಸು ಅಧೀರವಾಗುತ್ತದೆ. ಅನುಭವಕ್ಕೆ ಬಂದ ಎಲ್ಲಾ ವೇದಾಂತಗಳೂ ಮರೆಯಾಗುತ್ತವೆ. ಹಾಗೂ ಧೈರ್ಯ ತಂದುಕೊಳ್ಳಲು ಮನೆಯಲ್ಲೇ ಇದ್ದ ಸ್ವಾಮಿ ವಿವೇಕಾನಂದರ ಪುಸ್ತಕವನ್ನು ಓದಲು ಪ್ರಾರಂಭಿಸಿದೆ. ಮನಸ್ಸಿನಲ್ಲಿ ತಳಮಳ. ಸ್ವಲ್ಪ ಹೊತ್ತು ಓದಿದ ಅನಂತರ ಮತ್ತೆ ಮಲಗಿಕೊಂಡು ಹೊಟ್ಟೆಯನ್ನು ಸವರಿಕೊಂಡಾಗ ಎರಡು ಗಂಟುಗಳು ಮತ್ತೆ ಸಿಕ್ಕವು. ಸ್ಕ್ಯಾನಿಂಗ್‌ನಲ್ಲಿ ಒಂದು ಚಲಿಸಬಲ್ಲ ಗೆಡ್ಡೆ ಮಾತ್ರ ಸಿಕ್ಕಿತ್ತು.

ನಾನು ವೃತ್ತಿಯಲ್ಲಿ ಒಬ್ಬ ಶಿಕ್ಷಕಿ. ಜೀವಶಾಸ್ತ್ರ ಬೋಧಿಸಿ ಇಪ್ಪತ್ತು ವರ್ಷದ ಅನುಭವ. ಒಂದು ಗಂಟು ಗರ್ಭಕೋಶದ ಹತ್ತಿರವಿದ್ದರೂ ಮತ್ತೊಂದು ಗಂಟು ಮಾತ್ರ ಹೊಟ್ಟೆಯ ಬಲಭಾಗದಲ್ಲಿತ್ತು.

ಸ್ಕ್ಯಾನಿಂಗ್‌ನಲ್ಲಿ ತಿಳಿಸಿರುವುದಕ್ಕಿಂತಲೂ ಇದು ಭಿನ್ನವಾಗಿಯೇ ಇರಬೇಕೆಂದು ನನ್ನ ಮನಸ್ಸು ಹೇಳುತ್ತಿತ್ತು. ಆ ಕ್ಷಣವೇ ನನ್ನ ಸರ್ಜನ್ ಸಹೋದರನನ್ನು ಫೋನಿನಲ್ಲಿ ಸಂಪರ್ಕಿಸಿದೆ. "ಇದು ಗರ್ಭಕೋಶಕ್ಕೆ ಸಂಬಂಧಿಸಿದೆಯೆಂದು ನನಗನಿಸುತ್ತಿಲ್ಲ. ಕರುಳಿಗೆ ಸಂಬಂಧಿಸಿದ್ದಾಗಿರಬಹುದು. ಏಕೆಂದರೆ ಒಂದು ಗಂಟು ಬಲಭಾಗದಲ್ಲಿದೆ. ಎಕ್ಸ್ ರೇ ತೆಗೆಯುವುದರಿಂದ ಇದು ತಿಳಿಯಬಹುದೇನೋ" ಎಂದು ನನ್ನ ಅಭಿಪ್ರಾಯವನ್ನು ಮುಂದಿಟ್ಟೆ.

"ಆತಂಕ ಬೇಡ. ಈ ಗೆಡ್ಡೆಗಳು ಒಂದೇ ದಿನದಲ್ಲಿ ಕಾಣಿಸಿಕೊಂಡಿದ್ದಲ್ಲ. ಎಷ್ಟು ದಿನಗಳಿಂದ ಇವೆಯೋ ಹೇಳುವಂತಿಲ್ಲ. ಆದ್ದರಿಂದ ತತ್‌ಕ್ಷಣವೇ ಅಂತಹ ಅನಾಹುತವೂ ಆಗಲು ಸಾಧ್ಯವಿಲ್ಲ. ನೋಡೋಣ. ಪ್ರಸೂತಿ ತಜ್ಞೆ ಶಸ್ತ್ರಚಿಕಿತ್ಸೆಯನ್ನು ಪ್ರಾರಂಭಿಸಲಿ. ಅಲ್ಲಿಯೇ ನಾನೂ ಸಜ್ಜಾಗಿ ನಿಂತಿರುವೆ. ಗರ್ಭಕೋಶಕ್ಕೆ ಸಂಬಂಧಿಸದೇ ಇದ್ದ ಪಕ್ಷದಲ್ಲಿ ನಾನು ಶಸ್ತ್ರಕ್ರಿಯೆಯನ್ನು ಮುಂದುವರಿಸುವೆ" ಎಂದು ನನ್ನ ಸಹೋದರ ಹೇಳಿದ್ದು ಮನಸ್ಸಿಗೆ ತಕ್ಕಮಟ್ಟಿಗೆ ಸಮಾಧಾನ ಕೊಟ್ಟಿತು.

ಜೂನ್ ೧೮ರ ರಾತ್ರಿಯೇ ಹೋಗಿ ಆಸ್ಪತ್ರೆಗೆ ದಾಖಲಾದೆ. ಶಸ್ತ್ರಚಿಕಿತ್ಸೆಗೆ ನನ್ನನ್ನು ಸಜ್ಜಾಗಿಸಿದರು. ನಿದ್ರೆಗೆ ಮಾತ್ರೆ ಕೊಟ್ಟಿದ್ದರಿಂದ ರಾತ್ರಿ ಶಾಂತವಾಗಿ ನಿದ್ರಿಸಿದೆ. ಮನಸ್ಸು ನೆಮ್ಮದಿಯಿಂದ ಇತ್ತು. ಗಾಬರಿ ಮಾಯವಾಗಿತ್ತು. ನದಿಯಲ್ಲಿ ಮುಳುಗಿದವನಿಗೆ ಚಳಿಯೇನು ಮಳೆಯೇನು ಎಂದು ಯೋಚಿಸಿಕೊಂಡು ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಂಡಿದ್ದೆ.

ಜೂನ್ ೧೯ರ ಬೆಳಿಗ್ಗೆ ಒಂಭತ್ತು ಗಂಟೆಗೆ ಶಸ್ತ್ರಕ್ರಿಯಾ ಕೊಠಡಿಗೆ ಕರೆದುಕೊಂಡು ಹೋದರು. ಮತ್ತೆ ಹೇಗೆ ಹಿಂದಿರುಗುವೆನೋ ಎಂದು ಮನಸ್ಸು ಒಂದು ಕ್ಷಣ ಮಿಡಿಯಿತು. ಅಲ್ಲಿ ಅರಿವಳಿಕೆ (ಅನೀಸ್ತೀಷಿಯ) ಕೊಡುವ ವೈದ್ಯರು ಸ್ನೇಹಶೀಲ ಹಾಗೂ ಸುಹಾಸಶೀಲ ವ್ಯಕ್ತಿ. ಹಿನ್ನೆಲೆ ಗಾಯಕ ಮುಖೇಶನ ಹಾಡುಗಳನ್ನು ಯಾವಾಗಲೂ ಗುನುಗುನಿಸುತ್ತಿರುವರು. "ಮೇಡಂ, ಪೂರ್ತಿ ಜ್ಞಾನ ತಪ್ಪಿಸಿಕೊಳ್ಳಬೇಡಿ. ಮೆದುಳು ಬಳ್ಳಿಗೆ ಅರಿವಳಿಕೆಯನ್ನು ತೆಗೆದುಕೊಂಡರೆ ಆ ಭಾಗ ಮಾತ್ರ ಮರಗಟ್ಟಿ ನೀವು ಎಚ್ಚರದಿಂದಲೇ ಇರುವಿರಿ. ನನ್ನ ಹಾಡುಗಳನ್ನು ಕೇಳಬಹುದು ಹಾಗೂ ಅದು ಇದು ಮಾತನಾಡುತ್ತಲೂ ಇರಬಹುದು" ಎಂದು ಅರಿವಳಿಕೆ ತಜ್ಞ ಡಾ|| ಚಂದ್ರಶೇಖರ್ ಹೇಳಿದರು- ನನಗೂ ಅದು ಸರಿಯೆನಿಸಿತು. ಮರುಕ್ಷಣವೇ ಈ ಗಂಟುಗಳ ನೆನಪಾಯಿತು. ಶಸ್ತ್ರಚಿಕಿತ್ಸೆಯಾಗುತ್ತಿರುವಾಗ ಈ ಗಂಟುಗಳು ಕ್ಯಾನ್ಸರ್ ಗೆಡ್ಡೆಗಳೆಂದು ವೈದ್ಯರು ಮಾತನಾಡಿಕೊಳ್ಳುವುದನ್ನು ನಾನು ಕೇಳಿಸಿಕೊಂಡು ಗಾಬರಿಯಾಗುವುದು ಬೇಡವೆಂದು ಯೋಚಿಸಿ ಪೂರ್ತಿ ಜ್ಞಾನ ತಪ್ಪಿಸುವಂತೆ ವೈದ್ಯರನ್ನು ಕೇಳಿಕೊಂಡೆ. ಅವರು ಅದೇ ಪ್ರಕಾರ ಸಾಮಾನ್ಯ ಅರಿವಳಿಕೆಯನ್ನು ಕೊಟ್ಟರು. ಕೈಬೆರಳು ಕಾಲ್ಬೆರಳುಗಳು ಮೊದಲು ಮರಗಟ್ಟಲು ಪ್ರಾರಂಭಿಸಿದುವು. ಕೈಯುದ್ದಕ್ಕೂ ಕಾಲುಗಳುದ್ದಕ್ಕೂ ಮರಗಟ್ಟುವುದು ಮುಂದುವರಿಯಿತು. ಕೈಯ್ಯನ್ನು ಎತ್ತಲು ಪ್ರಯತ್ನಿಸಿದೆ ಆಗಲಿಲ್ಲ. ಮುಂದಿನ ಕ್ಷಣಗಳಲ್ಲಿ ಎಚ್ಚರ ಕಳೆದುಕೊಂಡೆ. ಜ್ಞಾನವಿರುವವರೆಗೂ ಕುಲದೈವ

ನರಸಿಂಹ ನಾಮಸ್ಮರಣೆಯನ್ನು ಮಾಡಿಕೊಳ್ಳುತ್ತಲೇ ಇದ್ದೆ.

"ಆ ಲೌಟ್‌ಕೆ ಆ....ಆ ಲೌಟ್‌ಕೆ ಆ" ಎಂಬ ಮುಖೇಶರ ಹಾಡು ಗುನುಗುನಿಸುತ್ತಿರುವುದನ್ನು ಕೇಳುತ್ತಾ ಎಚ್ಚರಗೊಂಡೆ. "ಹುಲಿ ಹುಲಿ ಎಂದದ್ದು ಇಲಿಯಾಯಿತಲ್ಲ" ಎಂದು ನನ್ನ ಸಹೋದರ ಹೇಳುತ್ತಿದ್ದುದು ಕೇಳಿಸಿತು.

ಅದಾದದ್ದು ಹೀಗಂತೆ. ನಾನು ಎಚ್ಚರ ತಪ್ಪಿದ ಕೂಡಲೇ ಪ್ರಸೂತಿ ತಜ್ಞೆ ಬಂದು ಹೊಕ್ಕಳಿನಿಂದ ಕೆಳಗೆ ಸುಮಾರು ೧೫ ಸೆಂಟಿಮೀಟರ್‌ವರೆಗೆ ಕೊಯ್ದು ಒಳಗೆ ಇಣುಕಿದಾಗ ಕಂಡದ್ದು ಯಾವ ದೋಷವೂ ಇರದ ಯಾವ ಗಂಟುಗಳನ್ನೂ ಹೊಂದಿರದ ಗರ್ಭಕೋಶ ಮತ್ತು ಅವರ ಎರಡೂ ಕಡೆಗಳಲ್ಲಿ ಆರೋಗ್ಯ ಸ್ಥಿತಿಯಲ್ಲಿದ್ದ ಅಂಡಾಶಯಗಳು. "ಡಾಕ್ಟ್ರೇ ಇದು ನನ್ನ ಕೇಸ್ ಅಲ್ಲ. ಜನರಲ್ ಸರ್ಜನ್ ಆದ ನಿಮ್ಮ ಕೇಸು" ಎಂದು ಕೈಗೆ ಹಾಕಿಕೊಂಡಿದ್ದ ಗವಸುಗಳನ್ನು ಬಿಚ್ಚುತ್ತಾ ಪ್ರಸೂತಿ ತಜ್ಞೆ ಹೊರಗೆ ಬಂದರಂತೆ. ಮರುಕ್ಷಣವೇ ಅದಕ್ಕೆಂದೇ ಸಜ್ಜಾಗಿ ನಿಂತಿದ್ದ ನನ್ನ ಸಹೋದರ ಕೈಗೆ ಗವಸು ತೊಟ್ಟು ಶಸ್ತ್ರಕ್ರಿಯೆಯನ್ನು ಮುಂದುವರಿಸಿ ನೋಡಿದಾಗ ಕಂಡದ್ದು ದೈತ್ಯಾಕಾರದ ಅಪೆಂಡಿಕ್ಸ್!

ದೊಡ್ಡ ಕರುಳಿನ ಒಂದು ತುದಿಯಲ್ಲಿ ಗುದದ್ವಾರವಿದ್ದರೆ ಹೊಟ್ಟೆಯೊಳಗಿರುವ ಮತ್ತೊಂದು ತುದಿಯಲ್ಲಿ ಸಣ್ಣ ನಾಳದಂತೆ ಸುಮಾರು ೫ ಸೆಂಟಿಮೀಟರ್ ಉದ್ದದ ಅಪೆಂಡಿಕ್ಸ್ ಇದೆ. ಇದಕ್ಕೆ ಕೆಲವರಲ್ಲಿ ಸೋಂಕು ತಗುಲಿದಾಗ ಕಿರುಬೆರಳಿನ ಗಾತ್ರದಷ್ಟು ಊದಿಕೊಂಡು ಅತೀವ ಹೊಟ್ಟೆ ನೋವು ಉಂಟು ಮಾಡುತ್ತದೆ. ತತ್‌ಕ್ಷಣವೇ ಶಸ್ತ್ರಚಿಕಿತ್ಸೆ ಮಾಡಿ ಇದನ್ನು ಕತ್ತರಿಸಿ ತೆಗೆಯಲಾಗುತ್ತದೆ. ಇದೇ "ಅಪೆಂಡಿಸೈಟಿಸ್" ಶಸ್ತ್ರಕ್ರಿಯೆ. ಅಪೆಂಡಿಕ್ಸ್‌ಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ತಲೆದೋರುವ ಸಮಸ್ಯೆಯೆಂದರೆ ಇದೊಂದೇ. ಆದರೆ ನನಗಾಗಿದ್ದು ಲಕ್ಷಕ್ಕೊಂದು. ಬಹಳ ಅಪರೂಪವಾದದ್ದು. ನನ್ನ ಅಪೆಂಡಿಕ್ಸ್ ಸುಮಾರು ೯ ಇಂಚು ಅಥವಾ ೨೩ ಸೆಂಟಿಮೀಟರ್ ಉದ್ದವಾಗಿದ್ದು ಚಿಕ್ಕ ಸೌತೆಕಾಯಿ ಗಾತ್ರದಷ್ಟಿತ್ತು! ಇದು ಇದ್ದುದರ ಬಗ್ಗೆ ನನಗೆ ಯಾವ ಸುಳಿವೂ ಇರಲಿಲ್ಲ. ಯಾವ ನೋವೂ ಇರಲಿಲ್ಲ. "Mucocoel of the appendix" ಎಂದು ವೈದ್ಯರು ಹೇಳಿದರು. ಅಂದರೆ ಅಪೆಂಡಿಕ್ಸ್‌ನಲ್ಲಿ ದ್ರವವು ಸಂಗ್ರಹವಾಗುತ್ತಾ ಬೆಳೆಯುತ್ತಾ ಹೋಗುತ್ತದೆ. ಅದು ಬಲತೊಡೆಯ ಪ್ರಾರಂಭದಲ್ಲಿ ಸಂದು ಮಾಡಿಕೊಂಡು ಬೆಳೆಯುತ್ತಾ ಹೋಗಿರಬಹುದು. ಅನಂತರ ಯಾವಾಗಲೋ ಕರುಳಿನ ಚಲನೆಯಿಂದಾಗಿ ಅದು ಮೇಲಕ್ಕೆ ಬಂದಿರಬಹುದೆಂದು ವೈದ್ಯರು ಅಭಿಪ್ರಾಯ ಪಟ್ಟರು.

ಶಸ್ತ್ರಕ್ರಿಯೆಗೆ ಒಂದು ವಾರದ ಹಿಂದೆಯಷ್ಟೇ ಬಿಳಿಗಿರಿರಂಗನಬೆಟ್ಟ, ಮೇಲುಕೋಟೆ ಬೆಟ್ಟಗಳನ್ನು ಹತ್ತಿಳಿದು ಬಂದಿದ್ದೆ. ಗರಿಷ್ಠ ಗಾತ್ರಕ್ಕೆ ಬೆಳೆದಿದ್ದ ಅದು ಯಾವ ಕ್ಷಣದಲ್ಲಿಯಾದರೂ ಒಡೆದು ಪ್ರಾಣಕ್ಕೆ ಹಾನಿಯಾಗಬಹುದಿತ್ತು.

ಆದ್ದರಿಂದಲೇ ೧೯೯೮ರ ಜೂನ್ ೧೨ರ ರಾತ್ರಿ ೨-೩೦ರ ಸಮಯವನ್ನು ನಾನು ನನ್ನ ಜೀವನದ ತಿರುವಿನ ಕ್ಷಣವೆಂದು ಪರಿಗಣಿಸಿದ್ದೇನೆ.

"ಕೋತಿ ತಾ ತಿಂದು ಮೇಕೆ ಮೂತಿ

ಗೊರೆಸಿದಂತೆ" ಎಂಬ ಗಾದೆಯಂತೆ ಪಾಪದ ಗರ್ಭಕೋಶದ ಮೇಲೆ ವೃಥಾ ಆರೋಪ ಬಂದಿತ್ತು. ಅದಕ್ಕೆ ಆಪತ್ತು ಬಂದಿತ್ತು. ಬಾಳೆಕಾಯಿಯಂತೆ ಕಮಾನಾಗಿದ್ದ ಆ ಅಪೆಂಡಿಕ್ಸ್‌ನ ಎರಡು ಕೊನೆಗಳೇ ನನಗೆ ಎರಡು ಗಂಟುಗಳಂತೆ ಅನುಭವವಾಗಿದ್ದು. ಅತ್ಯಾಧುನಿಕ ಸಲಕರಣೆ "ಅಲ್ಟ್ರಾಸೌಂಡ್ (ಅತೀತಶಬ್ದ) ಸ್ಕ್ಯಾನಿಂಗಿಗೂ" ಎಟುಕದ ಸ್ಥಳದಲ್ಲಿ ಬೆಳೆಯುತ್ತಿತ್ತು ನನ್ನ ಅಪೆಂಡಿಕ್ಸ್. ಬಹುಶಃ ಅದರ ಮುಂದಿನ ಉಬ್ಬಿದ ಭಾಗವು ಗರ್ಭಕೋಶದ ಹತ್ತಿರ ಬಂದಿದ್ದರಿಂದ ಕೋಶದ ಮೇಲೆ ಗೆಡ್ಡೆ ಬೆಳೆದಿರಬಹುದೆಂಬ ತೀರ್ಮಾನವನ್ನು ಸ್ಕ್ಯಾನಿಂಗ್ ತೆಗೆದು ಕೊಂಡಿರಬಹುದು. ಆದರೆ ಅಪೆಂಡಿಕ್ಸ್ ಹಿಂದಿನ ಉಬ್ಬಿದ ಭಾಗದ ಅನುಭವವೂ ನನಗೆ ಬಂದಿದ್ದರಿಂದ ಈ ಎರಡೂ ಗಂಟು ಗಳು ಗರ್ಭಕೋಶಕ್ಕೆ ಸಂಬಂಧಿಸಿದ್ದಲ್ಲ ಎಂಬ ಅನಿಸಿಕೆ ಉಂಟಾಗಿತ್ತು.

ಶಾಲೆಯಲ್ಲಿ ಪ್ರತಿವರ್ಷವೂ ಜೀವಶಾಸ್ತ್ರ ದಲ್ಲಿ "ಜೀರ್ಣಾಂಗ ವ್ಯೂಹ"ದ ಪಾಠವನ್ನು ಮಾಡುತ್ತಿರುವಾಗ ಅನಗತ್ಯ ಅಪೆಂಡಿಕ್ಸ್ ಬಗ್ಗೆ ಒತ್ತಿ ಹೇಳುತ್ತಿದ್ದೆ. "ಶರೀರದಲ್ಲಿ ಇರುವ ಎಲ್ಲಾ ಅಂಗಗಳೂ ಒಂದಲ್ಲ ಒಂದು ಕೆಲಸವನ್ನು ನಿರ್ವಹಿಸುತ್ತವೆ. ಆದರೆ ಅಪೆಂಡಿಕ್ಸ್ ಪಾತ್ರ ಇಲ್ಲಿ ಏನೂ ಇಲ್ಲ ದಿದ್ದರೂ ಅದು ನಮ್ಮ ಶರೀರದಲ್ಲಿದೆ. ಉಪಯೋಗವಂತೂ ಒತ್ತಟ್ಟಿಗಿರಲಿ ಅದ ರಿಂದ ಇನ್ನೂ ಹಾನಿಯೇ ಆಗುತ್ತದೆ. ಬಹಳ ಬೇಗ ಸೋಂಕಿಗೆ ತಗುಲಿ ಬಾಧೆ ಕೊಟ್ಟು ಪ್ರಾಣಕ್ಕೇ ಅಪಾಯವಾಗುತ್ತದೆ"ಎಂದೆಲ್ಲಾ ಪಾಠವನ್ನು ಹೇಳುತ್ತಿದ್ದಾಗ ಬಹುಶಃ ನನ್ನ ಅಪೆಂಡಿಕ್ಸ್ ಅಭಿಮನ್ಯುವಿನಂತೆ ಕೇಳಿಸಿ ಕೊಂಡಿದ್ದಿರಬಹುದು. ಪ್ರಕೃತಿಯ ಒಂದು ಭಾಗವಾಗಿರುವ ನನ್ನನ್ನು ಅಲ್ಲಗಳೆಯುವ ಈಕೆಗೆ ತೋರಿಸುವೆನೊಂದು ಕೈ ಎಂದು ಈ ಪ್ರತೀಕಾರ ತೆಗೆದುಕೊಂಡಿರಬಹುದು ನನ್ನ ಅಪೆಂಡಿಕ್ಸ್.

ಒಟ್ಟಿನಲ್ಲಿ ಬೆಟ್ಟದ ಹಾಗೆ ಬಂದಿದ್ದು ಬೆಣ್ಣೆಯ ಹಾಗೆ ಕರಗಿತ್ತು. ಯಮನ ಪಾಶ ತಪ್ಪಿಸಿಕೊಂಡು ಬಹಳ ದೂರದಲ್ಲಿ ನೆಮ್ಮದಿಯಾಗಿ ನಿಂತ ಅನುಭವ ವಾಗಿತ್ತು.

ಈ ವಿಶಾಲ ಸೃಷ್ಟಿಯೆಲ್ಲವೂ ಭಗವಂತನು ನಮ್ಮ ಶಿಕ್ಷಣಕ್ಕಾಗಿ ನಮ್ಮೆದುರಿಗೆ ತೆರೆದಿಟ್ಟಿರುವ ಒಂದು ಶಾಶ್ವತವಾದ ದಿವ್ಯವಾದ ಪವಿತ್ರ ಗ್ರಂಥ.

—ವಿನೋಬಾ

ದ್ವೇಷದಿಂದ ನಾನು ಏನೂ ಸಾಧಿಸಲಾರೆ. ಪರಸ್ಪರ ಪ್ರೀತಿಯೇ ನನಗೆ ಶ್ರೇಯಸ್ಕರ ವಾದ ಮಾರ್ಗವಾಗಿದೆ.

—ವಿಲ್ಸನ್

ಹರಕೆ—ಮುಡಿಪು

ಎಸ್. ರೋಹಿಣಿ ಶರ್ಮಾ

"ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು" ಎಂಬುದಾಗಿ ಕಷ್ಟ ಬಂದಾಗ ದೇವರನ್ನು ಪರಿಪರಿಯಾಗಿ ಬೇಡಿಕೊಳ್ಳುತ್ತೇವೆ. ಸುಖ ಬಂದಾಗ ಸ್ಮರಿಸದೆ ಕಷ್ಟಬಂದಾಗ ತನ್ನ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಮೊರೆಹೋಗಲು ನಾನಾ ವಿಧದಲ್ಲಿ ಬೇಡಿಕೊಳ್ಳುವ ವಿಧಾನದಲ್ಲಿ ಹರಕೆಯೂ ಒಂದು. ಇದನ್ನು ಹರಕೆ ಹೇಳು, ಹರಕೆ ತೀರಿಸು, ಹರಕೆ ಹಾಕು, ಮುಡಿಪು ಕೊಡು ಎಂಬ ವಿಶೇಷಣ ಯುಕ್ತ ಕ್ರಿಯಾಪದದೊಂದಿಗೆ ಆಶೀರ್ವಾದ ಎಂಬ ಪರ್ಯಾಯ ಪದವಾಗಿಯೂ ಬಳಸುತ್ತೇವೆ. ಹರಕೆ ಎಂದರೆ ದೇವರಲ್ಲಿ ನಾವು ಹೇಳಿಕೊಳ್ಳುವ ಮಾನಸಿಕ ನಿವೇದನೆ ಎಂದರ್ಥ.

ಭಕ್ತನಿಗೆ ಆ ಭಗವಂತ ಜಗದ್ರಕ್ಷಕ, ಜಗನ್ನಿಯಾಮಕ, ಸರ್ವಶಕ್ತ, ಸರ್ವಜ್ಞನಾಗಿ ಗೋಚರಿಸುತ್ತಾನೆ. ಕಷ್ಟ ಬಂದಾಗ ಅನ್ಯಥಾ ಶರಣಂನಾಸ್ತಿ ಎಂಬ ಭಾವದಿಂದ ದೇವರ ಮುಂದೆ ನಿಂತು ನಾವು ನಮ್ಮ ಮನಸ್ಸಿನ ಭಾವನೆಗಳನ್ನು, ಕಷ್ಟಗಳನ್ನು, ದುಃಖದುಮ್ಮಾನಗಳನ್ನು ಹೇಳಿಕೊಳ್ಳುಕೊಳ್ಳುತ್ತೇವೆ. ಮನಸ್ಸಿನ ಅನಿಸಿಕೆಗಳನ್ನು ದೇವರಲ್ಲಿ ನಿವೇದಿಸಿಕೊಂಡಾಗಲೇ ಭಕ್ತನಿಗೆ ಸಮಾಧಾನ, ಏನೋ ನಿರಾಳ.

ಹರಕೆಯಲ್ಲಿ ಹಲವಾರು ವಿಧ. ಅವರಲ್ಲಿ ಮುಖ್ಯವಾಗಿ ವೈಯಕ್ತಿಕ ಹರಕೆ, ಕೌಟುಂಬಿಕ ಹರಕೆ, ಊರ ಹರಕೆ ಎಂಬುದು ಮುಖ್ಯ ಎಂಬುದು. ವ್ಯಕ್ತಿಗತವಾದ ಹರಕೆ ಎಂದರೆ ತನ್ನ ಕುಂದುಕೊರತೆ, ಸಂಕಷ್ಟಗಳನ್ನು ಹೋಗಲಾಡಿಸಲೆಂದು ಹೇಳಿಕೊಳ್ಳುವುದು. ಕೌಟುಂಬಿಕ ಹರಕೆ ಇಡೀ ಕುಟುಂಬಕ್ಕೆ ಸುಖ, ಶಾಂತಿ, ಆರೋಗ್ಯ ಐಶ್ವರ್ಯ ದೊರಕಿಸೆಂದು ಪ್ರಾರ್ಥಿಸಿಕೊಳ್ಳುವುದಾದರೆ ಊರ ಹರಕೆಯೇ ಬೇರೆ ವಿಧವಾದುದು. ಪ್ಲೇಗ್, ಕಾಲರಾ, ಸಿಡುಬು, ದನಕರು ಮುಂತಾದ ಸಾಕು ಪ್ರಾಣಿಗಳಿಗೆ ಕಾಯಿಲೆ ಬರುವುದು, ಮಳೆ ಬಾರದಿದ್ದಾಗ ಊರ ಮಾರಿಕಾಟವೆಂದು ನಂಬಿದ ಜನ ಇಡೀ ಊರಿನ ಪರವಾಗಿ ಹರಕೆ ಹೇಳಿಕೊಳ್ಳುತ್ತಾರೆ. ಈ ಹರಕೆಯನ್ನು ಊರ ಮುಖ್ಯಸ್ಥನಾದ ಗ್ರಾಮಾಧ್ಯಕ್ಷ, ಶಾನುಭೋಗ, ಊರಿನ ಗಣ್ಯ ವ್ಯಕ್ತಿಗಳು ಊರ ಜನರೆಲ್ಲರ ಸಹಕಾರದಿಂದ ಊರೊಟ್ಟಿನ ಹರಕೆ ತೀರಿಸುತ್ತಾರೆ.

(ಕೃಪೆ: ಆಕಾಶವಾಣಿ)

"ಓಂ ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಂ ಅಮೃತಂಗಮಯ
ಓಂ ಶಾಂತಿಃ, ಶಾಂತಿ, ಶಾಂತಿಃ"

ಎಂದು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯೆಂದು ಭಕ್ತ ಭಗವಂತನಲ್ಲಿ ಮೊರೆಯಿಡುತ್ತಾನೆ.

ಹರಕೆ ಎಂದಾಕ್ಷಣ ದೇವರಲ್ಲಿ ಅತ್ತು ಕರೆದು ಗೋಳಾಡುವುದಲ್ಲ. ಅದಕ್ಕೂ ಒಂದು ವಿಧಾನವಿದೆ. ತಮ್ಮ ಮಾತಿಗೆ ಪ್ರಮಾಣ ಎಂದು ತೋರಿಸಲು ಶುಭ್ರವಾದ ಒಂದು ತುಂಡು ಬಿಳಿಯ ಬಟ್ಟೆಯನ್ನು ತುಂಬಿದ ಕೊಡದಲ್ಲಿ ಅದ್ದಿ ಒದ್ದೆಬಟ್ಟೆ ಮಾಡಿ ಅದಕ್ಕೆ ಮಂಗಲವೆಂದು ಅರಿಶಿನ ಹಚ್ಚಿ ಅದಕ್ಕೆ ನಾಣ್ಯಕಟ್ಟಿ ದೇವರ ಮುಂದಿಟ್ಟು ಪೂಜಿಸುತ್ತಾರೆ. ಇನ್ನು ಕೆಲ ವರು ಮನೆ ಸೂರಿಗೆ ಕಟ್ಟುತ್ತಾರೆ. ಇದನ್ನು ಜನಪದದಲ್ಲಿ "ಹೊನ್ನೆಸ್ಲ" ಕಟ್ಟುವುದು, ಮುಡಿಪು ಕಟ್ಟುವುದು ಎನ್ನುತ್ತಾರೆ.

ಈ ಹರಕೆ ವಿಧಾನ ಎಲ್ಲಾ ಜನಾಂಗ ಗಳಲ್ಲೂ ಕಂಡುಬಂದರೂ ಹೆಚ್ಚಾಗಿ ಗಂಡಸರಿ ಗಿಂತ ಹೆಂಗಸರೇ ಹರಕೆ ಹೇಳಿಕೊಳ್ಳುವುದು ಹೆಚ್ಚು. ಕ್ರೈಸ್ತರು ದೇವರ ಮುಂದೆ ನಿಂತು ತಮ್ಮ ತಪ್ಪುಗಳನ್ನು ಹೇಳಿಕೊಂಡು ಪಶ್ಚಾತ್ತಾಪ ಪಡುವುದು, ಮೇಣದ ಬತ್ತಿ ಹಚ್ಚಿಡುವ ಹರಕೆ ಹೇಳಿಕೊಳ್ಳುತ್ತಾರೆ. ಈ ಹರಕೆ ವಿಧಾನ ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ಅಥರ್ವಕಾಂಡದ ಸೂಕ್ತ ೨೨-೨೩ರಲ್ಲಿ "ನನಗೆ ಕಲ್ಯಾಣಗಳು ಲಭಿ ಸಲಿ. ನಮ್ಮ ಜ್ಞಾನಿ ಜನಕ್ಕೆ ಸದ್ಗತಿ ಯಾಗಲಿ, ನಮ್ಮ ಪಾಪ ನಾಶವಾಗಲಿ ಎಂದು ಶುಭಾಕಾಂಕ್ಷೆಯಿಂದ ದೇವರಲ್ಲಿ ಮೊರೆಯಿಡುವ ಪರಿ ಇದಕ್ಕೆ ನಿದರ್ಶನ. ರಾಮಾಯಣ, ಮಹಾಭಾರತ, ಪುರಾಣ, ಸ್ಮೃತಿಗಳಲ್ಲಿಯೂ ಈ ಹರಕೆಯ ಹರವು ವಿಸ್ತಾರವಾಗಿದೆ. ಹರಕೆಮಾಡಿಕೊಳ್ಳಲು ಹತ್ತಾರು ದಾರಿಗಳಿವೆ. ಚರ್ಮರೋಗ ಬಂದಾಗ ಕೊಂಡಕ್ಕೆ ಹರಳು ಹಾಕುವುದು, ಹುರಳಿಮೂಟೆ ಉರುಳಿಸುವುದು, ನಾಗ ರಾದರೆ ಬೆಳ್ಳಿನಾಗರ ಮಾಡಿಸುವುದು, ಸಿಡುಬು ಕಾಲರಾ ಬಂದಾಗ ಬೇವಿನ ಎಲೆ ಉಡಿಸುವುದು, ಮಕ್ಕಳಾಗದಿದ್ದರೆ ತೊಟ್ಟಿಲು ಶಿಶು ಹರಕೆ, ಗಂಡುಸಂತಾನ ವಾದರೆತುಲಾಭಾರ-ಮುಡಿಕೊಡುವ ಹರಕೆ, ವಿದ್ಯಾರ್ಥಿಗಳು ಪರೀಕ್ಷೆ ಹತ್ತಿರ ಬಂದಾಗ ಪಾಸಾಗಲಿ ಎಂದು ಹೇಳಿಕೊಳ್ಳುವ ಹರಕೆ ಒಂದೇ-ಎರಡೇ ಹರಕೆಗಾಗಿ ಕುರಿ, ಕೋಳಿ ಬಿಡುವ ವಿಧಾನವೂ ಇದೆ. ಇದನ್ನೆ ಬಸ ವಣ್ಣ "ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತು" ಎಂದಿರುವುದು.

ಒಮ್ಮೆ ಒಬ್ಬ ಶ್ರೀಮಂತ ದೋಣಿ ಯಲ್ಲಿ ಪ್ರಯಾಣಿಸುತ್ತಿರುವಾಗ ಬಿರುಗಾಳಿ ಎದ್ದಿತು. ಆಗ ಭಯದಿಂದ ಆತ ತಾನು ಬದುಕುಳಿದರೆ ಅರಮನೆಯಂತಹ ಬಂಗಲೆ, ಅಪಾರ ಐಶ್ವರ್ಯವನ್ನು ಬಡಬಗ್ಗರಿಗೆ ದಾನ ಮಾಡಿಬಿಡುತ್ತೇನೆಂದು ಹರಕೆಹೊತ್ತ. ಬದುಕುಳಿದ. ಮತ್ತೆ ಜೀವನದಲ್ಲಿ ಆಸೆ ಹುಟ್ಟಿತು. ಹರಕೆ ಮರೆತ. ಮತ್ತೊಮ್ಮೆ ಹೀಗೇ ಆಯಿತು. ಹಿಂದಿನ ಹರಕೆ ನೆನಪಾಗಿ, ಖಂಡಿತ ಈ ಬಾರಿ ಮಾತಿಗೆ ತಪ್ಪುವುದಿಲ್ಲ ಎಂದು ಪ್ರಾಮಾಣಿಕತನದಿಂದ ಬೇಡಿದ. ಮತ್ತೆ ಬದುಕಿದ. ಹರಕೆಯದೇ ನೆನಪುಳಿ ಯಿತು. ಅರಮನೆಯಂತಹ ಬಂಗಲೆ, ಐಶ್ವರ್ಯ ತ್ಯಜಿಸಲಾರದೆ ಮತ್ತೊಂದು

ಉಪಾಯ ಮಾಡಿದ. ಬಂಗಲೆಗೆ ಒಂದು ರೂ ಬೆಲೆಗೆ ಮಾರುವುದೆಂದೂ ಜೊತೆಗೆ ತನ್ನ ಸಾಕು ಬೆಕ್ಕನ್ನು ಕೊಂಡು ೨೦ ಲಕ್ಷ ಕೊಡಬೇಕೆಂದು ಬೇಡಿಕೆ ತಂದ. ಇಲ್ಲಿ ಶ್ರೀಮಂತನ ಹರಕೆ ಬೆದರಿಕೆ ಆಗಿತ್ತೇ ಹೊರತು ಭಗವಂತನ ಮೇಲಿನ ಪ್ರೀತಿಯಿಂದಲ್ಲ.

ಹೀಗೆ ಹರಕೆ ಹನ್ನೆರಡು ವರ್ಷ ಎನ್ನುವ ಅವಧಿಯೂ ಇದೆ. ಹರಕೆ ಈಡೇರದಿದ್ದರೆ ತೀರಿಸಲೇಬೇಕೆಂಬ ನಿಯಮವಿಲ್ಲ. ಹರಕೆ ಹೇಳಿಕೊಳ್ಳುವಾಗ ಶ್ರೀಮಂತನಂತೆ ಮೋಹ ಪಾಶವಾಗಲೀ, ಲೇವಾದೇವಿ ವ್ಯವಹಾರವಾಗಲಿ ಕೊಂಡುಕೊಳ್ಳುವ ವ್ಯಾಪಾರವಾಗಲಿ ಆಗಬಾರದು. ಕೇವಲ ದೇವರ ಮೇಲೆ ಭಾರಹಾಕಿ ಕೂತರೂ ಆಗದು. ಪುರುಷಪ್ರಯತ್ನ ಬೇಕು. ಆಸ್ತಿಕರು ದೇವರಿಂದಾಗುವ ಹಾರೈಕೆ ಎಂದು ಭಾವಿಸಿದರೆ ನಾಸ್ತಿಕರು ಮೂಢನಂಬಿಕೆ ಕಷ್ಟದ ನಿವಾರಣೆಗೆ ದೇವರನ್ನು ಓಲೈಸುವ ಪರಿ, ದೇವರಿಂಗೆ ಲಂಚ ಕೊಡುವ ಪರಿ ಎಂದೂ ಮೂದಲಿಸುವವರಿದ್ದಾರೆ. ಏನೇ ಆಗಿರಲಿ, ಹೇಗೇ ಇರಲಿ "ಹರಕೆ, ದೇವನಿಂದ ಭಕ್ತನಿಗೆ ದೊರೆಯುವ ಅಭಯ ಹಸ್ತ ಹಾಗೂ ಹಾರೈಕೆ" ಎಂದು ಅರ್ಥೈಸಬಹುದು.



ಯುದ್ಧವಿರಾಮದಿಂದ ಮಾತ್ರ ಶಾಂತಿ ಸಾಧಿಸಲಾಗದು. ಎಲ್ಲಿಯೋ ಆಗಲಿ, ಜಗ್ಗನ ದ್ವೇಷಭಾವನೆಗಳನ್ನು ನಿರ್ಮೂಲಗೊಳಿಸುವುದರಿಂದ ಮಾತ್ರ ಶಾಂತಿ ಸಾ.

—ಜವಾಹರಲಾಲ ನೆಹರು

ರೋಗಾಸಿಗೆ ಕಹಿ ಔಷಧ ಮೆಲ್ಲನೇ ಬೇಕಾಗುವುದು. ಗುಣಕಾರಿಯೂ ಸಿಹಿಯೂ ಆದೌಷಧವನ್ನೇ ಅರಸಿದರೆ ದೊರಕೀತೆ? ಕಡಿವೌಷಧಂ ಬಾಯ್ಗೆ ಕಹಿಯಾದೊ ಒಡಲ ನಿಗ್ರಹಂ ಮಾಳ್ಪುದು.

—ರಾಘವಾಂಕ

ಬದುಕನ್ನು ಎದುರಿಸಲು ಮಕ್ಕಳಿಗೆ ನೆರವಾಗುವ ಬಗೆ

ಲೀಲಾಮಣ್ಣಾಲ

ಕಳೆದ ಮೇ ತಿಂಗಳಿನಲ್ಲಿ ನನ್ನ ಕೊನೆಯ ಮಗ ಮೈಕೆಲ್ ಪದವೀಧರನಾದ. ನನ್ನ ಮೂರು ಜನ ಸ್ಫುರದ್ರೂಪೀ ಗಂಡು ಮಕ್ಕಳ ಯಶಸ್ಸನ್ನು ಗಮನಿಸಿದಾಗ ಹೆಮ್ಮೆಯೆನಿಸಿತು. ಕಣ್ಣುಗಳು ಆನಂದಬಾಷ್ಪವನ್ನು ಸುರಿಸಿದುವು. ಹದಿನೇಳು ವರ್ಷಗಳ ಹಿಂದೆ ನಾನು ವಿವಾಹವಿಚ್ಛೇದನೆಯನ್ನು ಹೊಂದಿದಾಗ ಇಂದಿನ ಗೆಲುವನ್ನು ಕಲ್ಪಿಸುವುದೂ ಸಾಧ್ಯವಿರಲಿಲ್ಲ.

ವೈವಾಹಿಕ ಜೀವನ ಮುರಿದುಬಿದ್ದ ಮೇಲೆ ನಾನು ಸ್ಥಳೀಯ ಸಂಸ್ಥೆಯೊಂದರ ಮೊರೆಹೋದೆ. ನಾನಾ ವಿಧವಾದ ಸಮಸ್ಯೆಗಳಲ್ಲಿ ಸಿಲುಕಿರುವ ವಯಸ್ಕರಿಗೆ ಸಹಾಯ ನೀಡುವುದೇ ಈ ಸಂಸ್ಥೆಯ ಧ್ಯೇಯ. ಮಾನಸಿಕವಾಗಿ ಜರ್ಝರಿತಳಾಗಿದ್ದ ನನಗೆ ಈ ಸಂಸ್ಥೆಯ ಬೆಂಬಲದಿಂದ ಬದುಕನ್ನು ಎದುರಿಸುವ ಧೈರ್ಯವುಂಟಾಯಿತು. ಇಂಥ ಸೂಕ್ಷ್ಮ ಮತ್ತು ಸಂದಿಗ್ಧ ಪರಿಸ್ಥಿತಿಯಲ್ಲಿ ಮಕ್ಕಳಿಗೂ ನಾನು ಮಾನಸಿಕ ಒತ್ತಾಸೆ ನೀಡಬೇಕಾಗಿತ್ತು. ಅದೇನೂ ಸುಲಭದ ಕೆಲಸವಾಗಿರಲಿಲ್ಲ.

ಒಂದು ದಿನ ಸಂಜೆ ನಾನು ಸಂಸ್ಥೆಯ ಅಧಿವೇಶನ ಮುಗಿಸಿ ಬಂದಿದ್ದೆ. ಆಗ ಒಂಬತ್ತು ವರ್ಷದ ನನ್ನ ಕುಮಾರ ಟಿಮ್ ಕೇಳಿದ. "ಆ ಜನರು ನಿನಗೆ ತುಂಬಾ ಸಹಾಯ ಮಾಡ್ತಾರೆ. ಅಲ್ವೇನಮ್ಮ? ಮಕ್ಕಳಿಗಾಗಿ ಇಂಥದ್ದೇನಾದೂ ವ್ಯವಸ್ಥೆ ಇದೆಯೇ?" ಒಳ್ಳೆ ಪ್ರಶ್ನೆ! ನಾನು ಯೋಚಿಸಿದೆ. ಅನಂತರ ನಾವು ಅನೇಕ ಗಣ್ಯರೊಡನೆ ವಿಚಾರಿಸಿದೆ. ಆದರೆ ಇಂಥದ್ದೊಂದು ಸಂಸ್ಥೆಯ ಬಗ್ಗೆ ಯಾರಿಗೂ ತಿಳಿದಿರಲಿಲ್ಲ. ಆಗ, ಈ ಕಾರ್ಯವನ್ನು ನಾನೇ ಏಕೆ ಮಾಡಬಾರದು ಎನಿಸಿತು.

ನಾನು ಕೂಡಲೇ ಕಾರ್ಯೋನ್ಮುಖಳಾದೆ. ನಮ್ಮ ಚರ್ಚ್‌ನಲ್ಲಿಯೆ ವಾರದ ಕೊನೆದಿನಗಳಲ್ಲಿ ತರಗತಿ ನಡೆಸತೊಡಗಿದೆ. ಸಾಮಾಜಿಕ ಕಾರಣಗಳಿಂದಾಗಿ, ನೊಂದಿರುವ ಮಕ್ಕಳಿಗೆ ಸಾಂತ್ವನ ನೀಡಿ ಆತ್ಮವಿಶ್ವಾಸ ಬೆಳೆಸುವುದು ನನ್ನ ಉದ್ದೇಶವಾಗಿತ್ತು. ವೈಯಕ್ತಿಕ ಲಾಭಗಳಿಕೆಯ ದೃಷ್ಟಿ ನನ್ನಲ್ಲಿರಲಿಲ್ಲ. ೧೯೮೩ರಲ್ಲಿ ಶಾಲೆಗಳಿಗೆ ಆರ್ಥಿಕ ಪ್ರಯೋಜನ ಆಗುವ

೧೯೯೩ರ ಡಿಸೆಂಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಸೂಸಿವಾರ್ತ' ಅವರ "ವೆನ್ ಟ್ರಬಲ್ ಸ್ಟ್ರೈಕ್ಸ್ ಹೀರ್ಸ್ ಹೌಟು ಹೆಲ್ಪ್ ಯುವರ್ ಚೈಲ್ಡ್ ಬೌನ್ಸ್ ಬ್ಯಾಕ್" ಲೇಖನದ ಅನುವಾದ.

ಮಾದರಿಯಲ್ಲಿ ನಮ್ಮ 'ರೈನ್‌ಬೊ' (Rainbow) ಸಂಸ್ಥೆಯು ಕಾರ್ಯ ಚಟುವಟಿಕೆಯನ್ನು ವಿಸ್ತರಿಸಿದೆ. ನಮ್ಮ ಸಂಸ್ಥೆಯು ಇಂದಿಗೆ, ಅಮೇರಿಕೆಯ ನಾಲ್ವತ್ತಾರು ರಾಜ್ಯಗಳಲ್ಲಿ ಸುಮಾರು ನಾಲ್ಕು ಸಾವಿರದ ನಾನ್ನೂರು ಯಶಸ್ವೀ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದೆ. ವಿದೇಶಗಳಲ್ಲಿ ಹದಿಮೂರು ಕಾರ್ಯಕ್ರಮಗಳನ್ನು ನೀಡಿದೆ. ಮೂರು ಲಕ್ಷದ ಐವತ್ತು ಸಾವಿರಕ್ಕೂಮಿಕ್ಕಿದ ಮಕ್ಕಳು 'ರೈನ್‌ಬೊ' ಸಂಸ್ಥೆಯಿಂದ ಉಪಕೃತರಾಗಿದ್ದಾರೆ. ಇವರಲ್ಲಿ ಹದಿಹರೆಯದ ಮಕ್ಕಳೂ ಸೇರಿದ್ದಾರೆ. ವಿಚ್ಛೇದನೆ, ನಿರುದ್ಯೋಗ, ಅಪಘಾತ, ಕಾಯಿಲೆ ಇಂಥ ಸಮಸ್ಯೆಗಳು ಯಾವುದೇ ಕುಟುಂಬದಲ್ಲಿ ಸಂಭವಿಸಬಹುದು. ಮಾನಸಿಕ ಒತ್ತಡ ಉಂಟಾಗಬಹುದಾದ ಇಂಥ ಸಂದರ್ಭಗಳಲ್ಲಿ ಮಕ್ಕಳಿಗೆ ವಿಶೇಷ ಒತ್ತಾಸೆಯ ಅಗತ್ಯವಿರುತ್ತದೆ. ಈ ಕಾರಣಕ್ಕಾಗಿಯೇ ನಾನು 'ರೈನ್‌ಬೊ' ಸಂಸ್ಥೆಯನ್ನು ಸ್ಥಾಪಿಸಿದೆ.

ಸಂದಿಗ್ಧ ಪರಿಸ್ಥಿತಿಯಲ್ಲಿ ಸೂಕ್ತ ಮಾರ್ಗದರ್ಶನ ಇಲ್ಲದಿದ್ದರೆ ಮಕ್ಕಳ ಸ್ಥಿತಿ ಚಿಂತಾಜನಕವಾಗುತ್ತದೆ. ಅಮೇರಿಕೆಯ ಒಂದು ಸಮೀಕ್ಷೆಯ ಪ್ರಕಾರ, ವಿಚ್ಛೇದಿತ ದಂಪತಿಗಳ ಮಕ್ಕಳನ್ನು ಇತರ ಮಕ್ಕಳಿಗೆ ಹೋಲಿಸಿದಾಗ, ಮುಂದಿನ ಮೂರು ವರ್ಷಗಳಲ್ಲಿ, ಅವರು ಅನಾರೋಗ್ಯಕ್ಕೆ ಗುರಿಯಾಗುವ ಸಂಭವ ಹೆಚ್ಚು ಎಂದು ತಿಳಿದು ಬಂದಿದೆ. ಇಂಥ ಮಕ್ಕಳು ತರಗತಿಯಲ್ಲಿ ಅನುತ್ತೀರ್ಣರಾಗಬಹುದು ಅಥವಾ ಬಹಿಷ್ಕರಿಸಲ್ಪಡಬಹುದು. ಒಟ್ಟಿನಲ್ಲಿ ಸಮಸ್ಯಾತ್ಮಕವಾಗಬಲ್ಲ ಇವರಿಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿರುತ್ತದೆ. ಎಲ್ಲಾ ರೀತಿಯ ನೋವಿಗೂ ಕಾಲವೊಂದೇ ಪರಿಹಾರವಾಗಿರುವುದಿಲ್ಲ.

ಸಮಸ್ಯಾತ್ಮಕ ಕುಟುಂಬಗಳೊಡನೆ ವ್ಯವಹರಿಸಿದ ಅನಂತರ ನಾನು ಮೂರು ಸೂತ್ರಗಳನ್ನು ಕಂಡು ಕೊಂಡಿದ್ದೇನೆ.

೧. ಸಾಧ್ಯವಾದಷ್ಟು ಬೇಗನೆ ಮಕ್ಕಳಿಗೆ ವಾಸ್ತವಾಂಶವನ್ನು ತಿಳಿಸಿ ಬಿಡಬೇಕು. ಇದಕ್ಕೆ ಹಲವು ವಿಧಾನಗಳಿವೆ. ವಿಷಯ ಆಘಾತಕಾರಿಯಾದರೂ ಹಿಂಜರಿಯದೆ ಸತ್ಯವನ್ನೇ ಹೇಳುವುದು ಒಳಿತು. ವಿಶ್ವಾಸ ಪಾತ್ರನಾದ ಮತ್ತು ಪ್ರೀತಿ ಪಾತ್ರನಾದ. ವ್ಯಕ್ತಿಯಿಂದ ಇರುವ ಸುದ್ದಿಯನ್ನು ಅರಗಿಸಿಕೊಳ್ಳಲು ಮಕ್ಕಳಿಗೆ ಸಾಧ್ಯವಾಗುತ್ತದೆ. ವಿಚ್ಛೇದನೆಯ ಸಂಗತಿಯಾದರೆ ಅದನ್ನು ತಿಳಿಯಪಡಿಸುವಾಗ ತಂದೆತಾಯಿಗಳಿಬ್ಬರೂ ಅಲ್ಲಿ ಉಪಸ್ಥಿತರಿರಬೇಕು.

ಕುಟುಂಬದ ಸಂಕಷ್ಟವು ಅಪಘಾತದಿಂದ ಸಂಭವಿಸಿತಾದರೆ ಅದು ಹೇಗೆ ಆಯಿತೆಂಬುದನ್ನು ಮಕ್ಕಳಿಗೆ ಸ್ಪಷ್ಟಪಡಿಸಿರಿ. ಇಲ್ಲವಾದರೆ ಅವರಲ್ಲಿ ಅಪರಾಧೀ ಪ್ರಜ್ಞೆ ವೃಥಾ ಜಾಗೃತಗೊಳ್ಳುವ ಸಾಧ್ಯತೆಯಿದೆ. ಕಳೆದ ವರ್ಷ ಏನಾಯಿತೆಂದರೆ, ಮೂರು ಹೆಣ್ಮಕ್ಕಳ ತಂದೆಯೊಬ್ಬರು ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಅಪಘಾತಕ್ಕೆ ಈಡಾಗಿ ಅಸುನೀಗಿದರು. ಮಕ್ಕಳ ಮೇಲೆ ಇದು ಬಲುದೊಡ್ಡ ಆಘಾತ ಆದರೆ ನಡುವಿನವಳಿಗೆ ಮಾತ್ರ ಕಟುವಾಸ್ತವತೆಯೊಡನೆ ಹೊಂದಾಣಿಕೆ ಮಾಡಿಕೊಳ್ಳುವುದು ಸಾಧ್ಯವೇ ಆಗಲಿಲ್ಲ. ಒಂದು ಕಾಲದಲ್ಲಿ ಚುರುಕಾಗಿದ್ದ ಹುಡುಗಿ ಈಗ ಉದಾಸಳಾದಳು, ಅಂತರ್ಮುಖಿಯಾದಳು.

ಕುಟುಂಬದ ಯಜಮಾನನ ಅಂತ್ಯ ಸಂಸ್ಕಾರವಾಗಿ ಎಂಟುತಿಂಗಳ ಅನಂತರ ತಾಯಿ ತನ್ನ ಮಕ್ಕಳಿಗೆ ಒಂದು ಪುಟ್ಟ ಬೆಕ್ಕಿನಮರಿಯನ್ನು ತಂದುಕೊಟ್ಟಳು. ಏಳು ವರ್ಷದ ಹಿರೀಮಗಳು ಮತ್ತು ಎರಡುವರ್ಷದ ಕಿರಿಯಾಕೆ ಮರಿಯನ್ನು ತುಂಬಾ ಮುದ್ದು ಮಾಡಿದರು. ಆದರೆ ಐದುವರ್ಷ ವಯಸ್ಸಿನ ನಡುವಿನವಳು ಮಾತ್ರ ಬೆಕ್ಕಿನಮರಿಯನ್ನು ಮುಟ್ಟಿಯೂ ನೋಡಲಿಲ್ಲ. "ನಾನು ಅದನ್ನು ಪ್ರೀತಿಸುವುದಿಲ್ಲ." ಅವಳು ಹೇಳಿದಳು.

"ನಾನು ಯಾರನ್ನಾದರೂ ಪ್ರೀತಿಸಿದರೆ ಅವರು ನನ್ನಿಂದ ದೂರವಾಗುತ್ತಾರೆ. ಡ್ಯಾಡಿಯನ್ನು ಪ್ರೀತಿಸಿದೆ. ಅವರು ಇಲ್ಲವಾದರು. ನನ್ನ ಪ್ರೀತಿ ಅವರನ್ನು ಸಾಯಿಸಿತು." ಹುಡುಗಿ ಬಿಕ್ಕಿಬಿಕ್ಕಿ ಅತ್ತಳು.

"ಖಂಡಿತಾ ಅಲ್ಲ." ತಾಯಿ ಮಗಳಿಗೆ ಅರ್ಥವಾಗುವಂತೆ ಹೇಳಿದಳು. "ನಿನ್ನ ಪ್ರೀತಿಯಿಂದಾಗಿ ಡ್ಯಾಡಿ ಸದಾ ನಿನ್ನ ಹೃದಯದಲ್ಲಿ ಜೀವಂತವಾಗಿರುತ್ತಾರೆ. ಅಪಘಾತದಿಂದಾಗಿ ಅವರು ಸತ್ತರು. ನಿನ್ನಿಂದಾಗಿ ಅಲ್ಲ." ಅನಂತರವಷ್ಟೇ ಈ ಹುಡುಗಿ ತಾನೇ ಹೇರಿಕೊಂಡ ಅಪರಾಧೀ ಕಲ್ಪನೆಯಿಂದ ಹೊರಬಂದಳು.

ತುರ್ತು ಸಂದರ್ಭಗಳಲ್ಲಿ ಕುಟುಂಬ ಜೀವನವು ಹೇಗೆ ಬದಲಾಗಬಹುದೆಂಬುದನ್ನು ಮಕ್ಕಳಿಗೆ ಮನಮುಟ್ಟುವಂತೆ ಹೇಳಬೇಕು. ಕಿರಿಯರ ದೃಷ್ಟಿಯಲ್ಲಿ ಹೇಳುವುದಾದರೆ, ಅಜ್ಞಾನದಲ್ಲಿಟ್ಟು ಭಯಪಡಿಸುವುದಕ್ಕಿಂತ ವಾಸ್ತವವನ್ನು ತಿಳಿಸುವುದೇ ಮಿಗಿಲು.

ಒಂದು ಸಂಜೆ ಪುಟ್ಟ ಬಾಲಕನೊಬ್ಬ ಶಾಲೆಯಿಂದ ಮನೆಗೆ ತೆರಳುವ ಬಸ್ಸನ್ನು ಏರಲು ನಿರಾಕರಿಸಿದ. ಕಾರಣ ಕೇಳಿದಾಗ ಹಿನ್ನೆಲೆ ತಿಳಿದುಬಂತು. ಅದು ಅವನ ಹೆತ್ತವರ ಆರ್ಥಿಕ ದುಸ್ಥಿತಿಯ ಕತೆ. ತಮ್ಮ ತೋಟವನ್ನು ಮಾರಬೇಕಾದ ಅನಿವಾರ್ಯತೆಗೆ ಅವರು ಒಳಗಾಗಿದ್ದರು. ಆ ಪುಟ್ಟ ಹುಡುಗ ಹೀಗೆ ಹೇಳಿದ. "ನಿನ್ನೆ ನಾನು ಮನೆಗೆ ಹೋದಾಗ ಅಂಗಳದಲ್ಲಿ ಒಂದು ಟ್ರಕ್ ನಿಂತಿತ್ತು. ಹಂದಿಗಳನ್ನು ಬಲಾತ್ಕಾರದಿಂದ ಅದರೊಳಗೆ ತುಂಬಿಸುತ್ತಿದ್ದರು. ಬಹುಶ. ಈ ದಿನ ಆ ಜನ ನನ್ನನ್ನು ಒಯ್ಯಬಹುದು." ಮಗುವಿನ ಈ ಆತಂಕ ತಂದೆ ತಾಯಿಗಳಿಗೆ ಗೊತ್ತಾದಾಗ ಅವರು ಸಮಸ್ಯೆಯ ಪರಿಹಾರಕ್ಕಾಗಿ ನಮ್ಮ ಸಂಸ್ಥೆಯ ನೆರವು ಪಡೆದರು.

೩. ಭಾವನೆಗಳನ್ನು ಹಂಚಿಕೊಳ್ಳಲು ಮಕ್ಕಳಿಗೆ ಪ್ರೋತ್ಸಾಹಿಸಿರಿ. ಅವರು ಒಲ್ಲದಿದ್ದಾಗ ಬಲವಂತ ಸಲ್ಲದು. ಹಿರಿಯರಂತೆ ಕಿರಿಯರು ಕೂಡಾ ತಮಗಾದ ಹಾನಿಯ ಬಗ್ಗೆ ಮಾತನಾಡಿ ಹಗುರಾಗಲು ಇಚ್ಛಿಸುತ್ತಾರೆ. ಆದರೆ ಮಕ್ಕಳು ಮನಬಿಚ್ಚಿ ಮಾತನಾಡಲು ದೊಡ್ಡವರ ಉತ್ತೇಜನ ಬೇಕಾಗುತ್ತದೆ. ಅದಕ್ಕಾಗಿ ಅನುಸರಿಸುವ ವಿಧಾನ ಸಂದರ್ಭಕ್ಕೆ ಅನುಗುಣವಾಗಿರಬೇಕು.

ಏನಾದರೂ ದುರಂತ ಸಂಭವಿಸಿದಾಗ ಮೊದಲಿಗೆ ನಿಮ್ಮ ಭಾವನೆಯನ್ನು, ನೋವನ್ನು ಮಕ್ಕಳೊಡನೆ ಹಂಚಿಕೊಳ್ಳಿ. ಇದರಿಂದ ತಮ್ಮನ್ನು ತಾವು ವ್ಯಕ್ತಪಡಿಸಲು ಅವರಿಗೆ ಸುಲಭವಾಗಬಹುದು. ಸಂಭಾಷಣೆಗೆ ಅನುಕೂಲವಾಗುವಂತೆ ಅವರೊಡನೆ ಕೆಲವು ಪ್ರಶ್ನೆಗಳನ್ನೂ ಕೇಳಬಹುದು. ಆದರೆ ಇಂಥ ಆತ್ಮೀಯ ಸಂವಾದಕ್ಕೆ ಪ್ರಶಸ್ತವಾದ ಪರಿಸರ ಮತ್ತು ಸಮಯ ಮುಖ್ಯ.

ಕಳೆದ ವರ್ಷ ವಿಚ್ಛೇದಿತ ಮಹಿಳೆಯೊಬ್ಬಳು ನನ್ನೊಡನೆ ತನ್ನ ಅನುಭವ ಹೇಳಿಕೊಂಡಳು. ಆಕೆಗೆ ಹದಿನಾಲ್ಕು ವರ್ಷ ವಯಸ್ಸಿನ ಒಬ್ಬ ಮಗನಿದ್ದ. ತಮ್ಮ ವೈವಾಹಿಕ ಜೀವನ ಮುರಿದುಬಿದ್ದ ಬಗ್ಗೆ ಅವನ ಅಭಿಪ್ರಾಯ ಕೇಳುವಾಗ ಆ ಹುಡುಗ ಸರಿಯಾಗಿ ಉತ್ತರಿಸದೆ ಜಾಗ ಖಾಲಿ ಮಾಡುತ್ತಿದ್ದ. ತನ್ನ ಮತ್ತು ಮಗನ ನಡುವೆ ಗೋಡೆ ಏಳಬಾರದೆಂಬ ಕಾಳಜಿಯಿಂದ ಆ ಮಹಿಳೆ ಮುಕ್ತವಾಗಿ ಮಾತನಾಡಲು ನಿರ್ಧರಿಸಿದಳು. ದೂರದ ಊರಿನ ಬೇಸಿಗೆ ಶಿಬಿರಕ್ಕೆ ಮಗನೊಡನೆ ಪ್ರವಾಸ ಹೊರಟಳು. ಪಯಣದ ನಡುವೆ ತಮ್ಮ ವಿವಾಹ ವಿಚ್ಛೇದನೆಯ ಹಿನ್ನೆಲೆಯನ್ನು ಸಾದರ ಪಡಿಸಿದಳು. ಈಗ ಆ ಹುಡುಗ ಮೌನಮುರಿದು ಮಾತನಾಡಿದ. ತಂದೆಯನ್ನು ವಿಪರೀತವಾಗಿ ಹಚ್ಚಿಕೊಂಡಿದ್ದ ಅವನಿಗೆ, ತಂದೆತಾಯಿಗಳು ಪರಸ್ಪರ ವಿಮುಖರಾದದ್ದು ಆಘಾತವನ್ನುಂಟು ಮಾಡಿತ್ತು. ತಂದೆ ತನ್ನನ್ನು ತೊರೆದಿರುವ ಬಗ್ಗೆ ಕಹಿಭಾವನೆಯನ್ನು ವ್ಯಕ್ತಪಡಿಸಿದ ಹುಡುಗ. ಇದನ್ನು ಕೇಳಿ ಆಶ್ಚರ್ಯಚಕಿತ ಭಾವನೆಯಿಂದ ಮೂಕಳಾದಳು ತಾಯಿ. ಅದುವರೆಗೂ ಮಗನಿಗೆ ತನ್ನಲ್ಲಿ ಅಸಮಧಾನ ಇದೆ, ಆದ್ದರಿಂದಲೇ ಅವನು ತನ್ನೊಡನೆ ವಾಸಿಸಲು ಇಷ್ಟಪಡುವುದಿಲ್ಲ ಎಂದವಳು ಎಣಿಸಿದ್ದಳು. ಆದರೆ ಆ ಹುಡುಗನ ಪೂರಾ ಅಸಮಧಾನ ಇದ್ದುದು ತಂದೆಯ ಮೇಲೆ ಎಂದವಳು ಊಹಿಸಿರಲೇ ಇಲ್ಲ. ಈಗ ಆಕೆ ಮಗನಿಗೆ ಅರ್ಥವಾಗುವಂತೆ ತಿಳಿಹೇಳಿದಳು.

"ನಿನ್ನ ತಂದೆ ಪರಿತ್ಯಜಿಸಿದ್ದು ನನ್ನನ್ನೇ ವಿನಾ ನಿನ್ನನ್ನಲ್ಲ." ಅವರಿಬ್ಬರೂ ಬೇಸಿಗೆ ಶಿಬಿರ ತಲುಪುವ ವೇಳೆಗೆ ಅವನು ಹಗುರಾಗಿದ್ದ. ಮುಕ್ತವಾಗಿ ಮಾತನಾಡಲಾರಂಭಿಸಿದ್ದ. ಅನಂತರದ ದಿನಗಳಲ್ಲಿ ಅವನು ತಾಯಿಯೊಡನೆ ತನ್ನ ಭಾವನೆಗಳನ್ನು ಹಂಚಿಕೊಳ್ಳತೊಡಗಿದ.

ನಿಮ್ಮ ನೋವು ಅಥವಾ ಸಮಸ್ಯೆಯ ಬಗ್ಗೆ ಮಕ್ಕಳೊಡನೆ ಮಾತನಾಡುವುದು ಕಷ್ಟವೆನಿಸಿದರೆ ಪತ್ರಮುಖೇನ ಆ ಕೆಲಸ ಮಾಡಬಹುದು. ಒಟ್ಟಿನಲ್ಲಿ ಅವರು ನಿಮ್ಮನ್ನು ಅರ್ಥಮಾಡಿಕೊಳ್ಳಬೇಕು. ಆಗ ತಮ್ಮನ್ನು ತಾವೇ ತಿಳಿದುಕೊಳ್ಳುವುದು ಮಕ್ಕಳಿಗೆ ಸಾಧ್ಯವಾಗುತ್ತದೆ.

ನನ್ನ ವಿವಾಹ ವಿಚ್ಛೇದನೆಯ ಕಾರಣವನ್ನು ಆರಂಭದಲ್ಲೇ ಮಕ್ಕಳಿಗೆ ಹೇಳಿದ್ದೆ. ಆದರೆ ಓರ್ವ ತಾಯಿಯಾಗಿ ಅದು ನನ್ನ ವೈಫಲ್ಯ ಎಂಬ ಕೊರಗನ್ನು ವ್ಯಕ್ತಪಡಿಸಿರಲಿಲ್ಲ. ಮಕ್ಕಳು ಪ್ರಾಪ್ತವಯಸ್ಸಿಗೆ ಬಂದಾಗ ಪತ್ರದ ಮೂಲಕ ನನ್ನ ಅಂತರಂಗದ ನೋವಿನ ಆಳವನ್ನು ಅವರ ಮುಂದಿಟ್ಟೆ.

"ನಾನು ತಾಯಿಯಾಗುತ್ತಿದ್ದ ಪ್ರತಿಯೊಂದು ಸಂದರ್ಭದಲ್ಲೂ 'ಜಗತ್ತಿನ ಯಾವ ಶಕ್ತಿಯೂ ಇವರನ್ನು ನೋಯಿಸದಂತೆ ನೋಡಿಕೊಳ್ಳುತ್ತೇನೆ' ಎಂದು ಪ್ರತಿಜ್ಞೆ ಮಾಡಿದ್ದೆ. ಆದರೆ ವಿಚ್ಛೇದನೆಯನ್ನು ಹೊಂದುವುದರ ಮೂಲಕ ಮಾತು ತಪ್ಪುವುದರಲ್ಲಿ ನಾನೇ ಮೊದಲಿಗಳಾದೆ." ನಾನು ಬರೆದೆ ..."ಪರಿಪೂರ್ಣ ತಾಯಿ ಆಗದಿರುವ ಬಗ್ಗೆ ನನಗೆ ಪರಿತಾಪವಿದೆ ದಯವಿಟ್ಟು ಅದಕ್ಕಾಗಿ ನನ್ನನ್ನು ಮನ್ನಿಸಿ." ಕಣ್ಣೀರು ಮತ್ತು ಆಲಿಂಗನದೊಡನೆ ಮಕ್ಕಳು ನನ್ನನ್ನು ಒಪ್ಪಿಕೊಂಡರು.

೩. ಭವಿಷ್ಯದೆಡೆಗೆ ದೃಷ್ಟಿ—ನನ್ನ ಗೆಳೆಯರೊಬ್ಬರು ತಮ್ಮ ಮನೆಯನ್ನು ಆಧುನೀಕರಣಗೊಳಿಸಿದರು. ದುರದೃಷ್ಟವೆಂದರೆ ಕೆಲಸಮುಗಿದ ಒಂದೇ ವಾರದಲ್ಲಿ ಮನೆ ಅಗ್ನಿಗೆ ಆಹುತಿಯಾಯಿತು. ಮನೆಮಂದಿ ಪ್ರಯಾಸದಿಂದ ಜೀವ ಉಳಿಸಿಕೊಂಡರು.

"ಸರ್ವನಾಶವಾಯ್ತು" ಮಕ್ಕಳೊಡನೆ ನಿಂತಿದ್ದ ತಾಯಿ ನುಡಿದಳು. "ಆದರೆ ಜೀವನ ಒಂದೇ ರೀತಿ ಇರುವುದಿಲ್ಲ. ಮತ್ತೆ ಒಳ್ಳೆಯ ದಿನಗಳು ಬಂದೇ ಬರುತ್ತವೆ." ಒಂದು ವರ್ಷದ ಸತತ ಪ್ರಯತ್ನದ ಫಲವಾಗಿ ಮತ್ತದೇ ಜಾಗದಲ್ಲಿ ಹೊಸಮನೆ ಕಟ್ಟಿಕೊಳ್ಳುವುದು ಸಾಧ್ಯವಾಯ್ತು. ಅಗ್ನಿಯಜ್ಞದಲ್ಲಿ ಅವರು ಸಾಕಷ್ಟು ನಷ್ಟ ಹೊಂದಿದ್ದರು ನಿಜ, ಆದರೆ ಮನಸ್ಥೈರ್ಯವನ್ನು ಕಳಕೊಂಡಿರಲಿಲ್ಲ. ದೃಢ ಮನೋಭಾವನೆಯ ಅವರು ಪ್ರಗತಿ ಪಥದತ್ತ ದಿಟ್ಟ ಹೆಜ್ಜೆ ಇಟ್ಟಿದ್ದರು.

ಸಂಕಷ್ಟಗಳು ಬಂದಾಗ ದುರ್ಬಲ ಮನೋಭಾವನೆಯ ವ್ಯಕ್ತಿಗಳು ಕಂಗಾಲಾಗುತ್ತಾರೆ. ಆತ್ಮವಿಶ್ವಾಸ ಉಳ್ಳವರು ಭವಿಷ್ಯದಲ್ಲಿ ನಂಬಿಕೆ ಇಡುತ್ತಾ ಬದುಕನ್ನು ಮತ್ತೆ ರೂಪಿಸಿಕೊಳ್ಳುತ್ತಾರೆ. ಪರಿಸ್ಥಿತಿಯನ್ನು ತಾವೇ ನಿಭಾಯಿಸುತ್ತಾ, ಹಿರಿಯರು ತಮ್ಮ ಮಕ್ಕಳಿಗೆ ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಬೇಕು.

ನಾನ್ನೂರ ಐವತ್ತು ಕುಟುಂಬಗಳನ್ನು ಸಂದರ್ಶಿಸಿ ಸಮೀಕ್ಷೆ ನಡೆಸಿದಾಗ ಆರ್ಥಿಕ ಸಂಕಷ್ಟಗಳು ಹಿರಿಯರನ್ನು ತಾಗುವಂತೆ ಕಿರಿಯನ್ನು ಕಂಗೆಡಿಸುವುದಿಲ್ಲ ಎಂದು ತಿಳಿದು ಬಂದಿದೆ. ಏಕೆಂದರೆ ಆರ್ಥಿಕ ಜವಾಬ್ದಾರಿ ಚಿಕ್ಕವರಿಗಿರುವುದಿಲ್ಲ.

ಅಗತ್ಯವೆನಿಸಿದರೆ, ಕುಟುಂಬ ಜೀವನದ ಮೌಲ್ಯಗಳ ಬಗೆಗೆ ಮರು ಪರಿಶೀಲನೆ ನಡೆಸಿರಿ, ನಿಮ್ಮ ಜೀವನ ಸಂಗಾತಿಯು ಕೆಲಸ ಕಳೆದುಕೊಂಡಿದ್ದರೆ ಹಿಂದಿನಂತೆ, ಮನೋರಂಜನೆಗಾಗಿ ಹಣ ವ್ಯಯ ಮಾಡಲು ಸಾಧ್ಯವಾಗದಿರಬಹುದು. ಆದರೆ ಆ ಕುರಿತು ಪಶ್ಚಾತ್ತಾಪ ಬೇಡ. ಪ್ರವಾಹ, ಅಗ್ನಿ ದುರಂತ ಅಥವಾ ಇನ್ನಾವುದೇ ಆಕಸ್ಮಿಕದಲ್ಲಿ ಕಳೆದುಕೊಂಡದ್ದರ ಬಗ್ಗೆ ಮತ್ತೆಮತ್ತೆ ಮಾತನಾಡಿ ಪರಿತಪಿಸುವುದು ಸಲ್ಲದು.

ಏನಾದರೂ ಮಹತ್ತರವಾದ ನಿರ್ಧಾರವನ್ನು ಕೈಗೊಳ್ಳಬೇಕಾದ ಸಂದರ್ಭದಲ್ಲಿ ಆ ಕ್ರಿಯೆಯಲ್ಲಿ ಮಕ್ಕಳನ್ನು ಒಳಗೊಳ್ಳುವಂತೆ ಮಾಡಿರಿ, ಇದರಿಂದ ಅವರು ಕುಟುಂಬ ನಿರ್ವಹಣೆಯಲ್ಲಿ ತಮ್ಮ ಪಾತ್ರವೂ ಇದೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.

ನನ್ನ ಗೆಳತಿಯೊಬ್ಬಳು ತನ್ನ ಪತಿ ಮತ್ತು ಮಕ್ಕಳ ಜೊತೆಗೆ ಪುಟ್ಟ ಮನೆಯೊಂದರಲ್ಲಿ ವಾಸಿಸುತ್ತಿದ್ದಳು. ಏಕಾಂಗಿಯಾಗಿ ವಾಸಿಸುತ್ತಿದ್ದ ಆಕೆಯ ಅಜ್ಜಿ ಅನಾರೋಗ್ಯ ಪೀಡಿತೆಯಾದಾಗ ಮೊಮ್ಮಗಳ ಮನೆಗೆ ಬರಬೇಕಾಯ್ತು. ತಕ್ಷಣ ನನ್ನ ಸ್ನೇಹಿತೆ ಈ ವಿಚಾರವನ್ನು ಮಕ್ಕಳೊಡನೆ ಪ್ರಸ್ತಾಪಿಸಿದಳು. ಮಗನಿಗೆ ಹೀಗೆಂದಳು. "ನಿನ್ನ ತಂಗಿಯಿನ್ನೂ ತುಂಬಾ ಚಿಕ್ಕವಳು. ಆದ್ದರಿಂದ ಅಜ್ಜಿಗೆ ನಿನ್ನ ಹಾಸಿಗೆಯನ್ನು ಬಿಟ್ಟುಕೊಡಬೇಕಾಗುತ್ತದೆ."

"ಓ....ಖಂಡಿತಾ" ಹುಡುಗ ಉತ್ಸಾಹದಿಂದ ಒಪ್ಪಿಕೊಂಡ. ತಾನು ನಡುಮನೆಯ ಸೋಫಾದ ಮೇಲೆ ಮಲಗಬೇಕಾದ ಅನಿವಾರ್ಯತೆಯನ್ನು ಅವನು ಪ್ರತಿಭಟಿಸಲಿಲ್ಲ. ವ್ಯವಸ್ಥೆ ಮಾಡುವ ಮೊದಲು ತನ್ನ

ಅಭಿಪ್ರಾಯಕ್ಕೆ ಪ್ರಾಮುಖ್ಯತೆ ದೊರತಿದ್ದು ಅವನಿಗೆ ಸಂತೋಷವಾಗಿತ್ತು. "ಬೇಕಾದರೆ ನನ್ನ ಕೋಣೆಯನ್ನು ಅವರೇ ಉಪಯೋಗಿಸಿ ಕೊಳ್ಳಲಿ" ಉದಾರತೆಯಿಂದ ಹೇಳಿದ ಹುಡುಗ, ಅಷ್ಟೇ ಅಲ್ಲ. ಅಜ್ಜಿ ಬಂದನಂತರ ಅವರ 'ಬೇಕು....ಬೇಡ'ಗಳನ್ನು ಆಸ್ಥೆಯಿಂದ ಗಮನಿಸಿದ.

೧೯೯೦ರಲ್ಲಿ ಹದಿನಾಲ್ಕು ವರ್ಷಗಳ ಒಂಟಿ ಬದುಕಿಗೆ ವಿದಾಯ ಹೇಳಿ ನಾನು ಮರು ಮದುವೆಯಾದೆ. ನನ್ನ ಮೂರು ಮಕ್ಕಳೂ ಈಗ ದೊಡ್ಡವರಾಗಿದ್ದರು. ಹೊಸಸನ್ನಿವೇಶ ಅವರ ಮೇಲೆ ಆಘಾತವನ್ನೇನೂ ಉಂಟು ಮಾಡಿರಲಿಲ್ಲ. ಆದರೂ ಹೊಂದಾಣಿಕೆಯ ಸಮಸ್ಯೆ ಇದ್ದೇ ಇತ್ತು. ಪರಿಸ್ಥಿತಿ ಹತೋಟಿಗೆ ಬರುವವರೆಗೆ ನಾನು ತಾಳ್ಮೆಯಿಂದ ಕಾದೆ.

ಒಂದು ರಾತ್ರಿ ಊಟದ ನಂತರ ನನ್ನ ಮಕ್ಕಳು ಹೊರಗೆ ಹೋಗುವವರಿದ್ದರು. ಅವರು ನನ್ನನ್ನು ಚುಂಬಿಸಿ ಶುಭರಾತ್ರಿ ಕೋರಿದರು. ನನ್ನ ಪತಿ ಮಾರ್ಟಿಯನ್ನು ಮಕ್ಕಳು ಸಮೀಪಿಸಿದಾಗ ಮಾಮೂಲಿ ಕೈಕುಲುಕುವಿಕೆಯನ್ನು ನಾನು ನಿರೀಕ್ಷಿಸಿದೆ. ಆದರೆ ನನ್ನ ನಿರೀಕ್ಷೆಗೆ ವ್ಯತಿರಿಕ್ತವಾಗಿ ಮೈಕೆಲ್, ಟಾಮ್ ಮತ್ತು ಟಿಮ್ ನನ್ನ ಪತಿಯನ್ನು ಮೊದಲಬಾರಿಗೆ ಆಲಿಂಗಿಸಿ ಶುಭ ರಾತ್ರಿ ಕೋರಿದರು. ಅವರ ಈ ನಡವಳಿಕೆ ಮಲತಂದೆಯನ್ನು ಸ್ವೀಕರಿಸಿರುವುದಕ್ಕೆ ಸಾಕ್ಷಿಯಾಗಿತ್ತು. ನನಗಾಗ ಹಲವು ವರ್ಷಗಳ ಹಿಂದಿನ ಸಂದರ್ಭ ಜ್ಞಾಪಕಕ್ಕೆ ಬಂತು. ಭಯ ವಿಹ್ವಲರಾಗಿ ದಿಕ್ಕುಗಾಣದೆ ನಿಂತಿದ್ದ ಮಕ್ಕಳನ್ನು ಸುಧಾರಿಸಬೇಕಾಗಿದ್ದ ಕಾಲವದು.

ಅನಂತರ ವಿಚ್ಛೇದನೆಯ ಪರಿಣಾಮದೊಡನೆ ಗುದ್ದಾಡುತ್ತಾ ಬದುಕಿನ ಬದಲಾವಣೆಯನ್ನು ಅವರು ಒಪ್ಪಿಕೊಂಡರು. ಸವಾಲನ್ನು ಸ್ವೀಕರಿಸಿದರು. ಎಂಥ ಪರಿಸ್ಥಿತಿಯನ್ನೂ ಎದುರಿಸಬಲ್ಲ ಮನೋಶಕ್ತಿಯನ್ನು ಇಂದು ನನ್ನ ಮಕ್ಕಳು ಪಡೆದಿದ್ದರು. ನಾನು ಅಭಿಮಾನದಿಂದ ನಕ್ಕೆ. ಓರ್ವ ತಾಯಿಯಾಗಿ ಇದಕ್ಕಿಂತ ಹೆಚ್ಚಿನ ನಿರೀಕ್ಷೆ ಏನಿದೆ?

ಹೆಮ್ಮೆಯ ಕಣ್ಣನ್ನು, ಸುಳ್ಳಿನ ನಾಲಿಗೆಯನ್ನು, ಕಾಡಿಸುವ ಕೈಯನ್ನು, ದುರಾಲೋಚನೆಯ ಹೃದಯವನ್ನು, ಕೆಡುಕಿನೆಡೆಗೆ ನಡೆಯುವ ಕಾಲುಗಳನ್ನು, ಅಸತ್ಯವಾಡುವ ಬಾಯಿಯನ್ನು ಮನುಷ್ಯನಿಗೆ ಎಂದೆಂದೂ ಕೊಡಬೇಡ ದೇವಾ.

—ಕ್ರಿಸ್ತ

ಮಾದಕ ದ್ರವ್ಯಗಳಿಗೆ ನ್ಯಾಯಬದ್ಧವೆಂದು ಕಾನೂನಿನ ರಕ್ಷಣೆ ನೀಡದಿರಿ!

ಸರಸ್ವತಿ ಬಡೆಕ್ಕಿಲ

ಇದುವರೆಗೂ ನಿಷಿದ್ಧಮಾದಕ ದ್ರವ್ಯಗಳ ಉಪಯೋಗವನ್ನು ತಡೆಹಿಡಿಯಲು ಸಾಕಷ್ಟು ಹೋರಾಟ ನಡೆಸಿದರೂ, ನಿಷ್ಪ್ರಯೋಜಕವಾದ ಪ್ರಯುಕ್ತ, ಹೋರಾಟವನ್ನೇ ಕೈಬಿಟ್ಟು ಅವುಗಳು ನ್ಯಾಯಬದ್ಧವೆಂದು ಘೋಷಿಸಬೇಕೆಂದು ತೀರ್ಮಾನಿಸುವ ಮಹಾಶಯರುಗಳನ್ನು, ಖಂಡಿಸುವ ಪ್ರಾಧ್ಯಾಪಕರೊಬ್ಬರ ಪ್ರತಿಪಾದನೆ ಇಲ್ಲಿದೆ. ವೈಜ್ಞಾನಿಕವಾಗಿ ವಿಶ್ಲೇಷಿಸಿ ನಿರ್ಧರಿಸುವ ಇವರು ರೂಪಿಸಿದ ನವೀನ ಧೋರಣೆ ಇದು-"ನಾರ್ಕ್ಯೋಟಿಕ್ಸ್ ಎಂದು ಕರೆಯಲಾಗುವ ಇವುಗಳ ವಿರುದ್ಧ ಸಮರವನ್ನೆಂದೂ ನಿಲ್ಲಿಸದಿರಿ. ಅವುಗಳ ವ್ಯಾಪಾರ ವಹಿವಾಟಿನ ಮೂಲವನ್ನೇ ಉಚ್ಚಾಟಿಸಿರಿ.-ಬನ್ನಿ, ಹೊಸ ನೀತಿಯೊಂದನ್ನು ರೂಪಿಸೋಣ."

ವಿಜ್ಞಾನಿಗಳು ಮಾದಕ ವಸ್ತುಗಳ ಮೇಲೆ ನಡೆಸಿದ ಸಂಶೋಧನೆಯ ಹೋರಾಟದಲ್ಲಿ ಹಲವು ಅಜ್ಞಾನಗಳ ಮೇಲೆ ವಿಜಯ ಸಾಧಿಸಿದ್ದಂತೂ ನಿಜ. ಜಗತ್ತಿನಾದ್ಯಂತ, ಡ್ರಗ್ಸ್ ಎಂದು, ಕಾನೂನು ಬಾಹಿರವಾದುವುಗಳೆಂದು, ಪ್ರಚಲಿತವಾಗಿರುವ ಮಾದಕ ವಸ್ತುಗಳು-ಎಂದರೆ, ಮಾರಿಜುಆನಾ, ಹಶೀಶ್, ಕೊಕೇಯ್ನ್, ಅಫೀಮು ಮತ್ತು ಹೆರೊಯಿನ್ ಮುಂತಾದುವುಗಳು-ಇವು ಮೆದುಳಿನ ಅಂತರಾಳದವರೆಗೂ ಪ್ರವೇಶಿಸಿ ಮೂಲಾಧಾರಕ್ಕೇ ಕೊಡಲಿ ಏಟು ಹಾಕುತ್ತವೆ ಎಂದು ಹಲವು ಸಂಶೋಧಕರಿಂದ ತಿಳಿದು ಬಂದಿದೆ. ವೈದ್ಯಕೀಯ ಪ್ರತಿನಿಧಿಗಳು ಕೂಡಾ ಹಲವಾರು ವಿಧಿವಿಧಾನಗಳಿಂದ ಇವುಗಳನ್ನು ಸಾಧಿಸಿ, ಪ್ರಮಾಣ ಪೂರ್ವಕ ದೃಢೀಕರಿಸಿದ್ದಾರೆ. ಉದಾಹರಣೆಗೆ.

ಕೋಕೇಯ್ನ್ ಮಿದುಳಿನ ಮುಂಭಾಗದ ಪಟಲದ ಎಲ್ಲ ಕೆಲಸ ಕಾರ್ಯಗಳಲ್ಲಿ-ಎಂದರೆ ರಕ್ತ ಸಂಚಾರ ಮತ್ತು ಪುನರ್ರಚನೆಯಂಥ ಕಣಪರಿವರ್ತನೆಗಳಿಗೆ ಬಾಧೆಯುಂಟು ಮಾಡುತ್ತದೆ ಮತ್ತು ಮೆದುಳಿನ ಇತರ

೧೯೯೦ರ ಏಪ್ರಿಲ್ ತಿಂಗಳ ರೀಡರ್ಸ್ ಡೈಜೆಸ್ಟ್‌ನ "ಡಾಕ್ಟರ್ ಗೇಬ್ರಿಯಲ್ ನೇಹಾಸ್" ರವರ "ಡೋಂಟ್ ಲೀಗಲೈಜ್ ಡ್ರಗ್ಸ್" ಎಂಬ ಲೇಖನದ ಅನುವಾದ.

ಕಾರ್ಯರಂಗದಲ್ಲೂ ಅಡಚಣೆಯನ್ನೊಡ್ಡುತ್ತದೆ. ಬಹುಕಾಲ ಇದನ್ನು ಉಪಯೋಗಿಸುತ್ತಿದ್ದವರು ಪೂರ್ಣವಾಗಿ ಅದನ್ನು ತ್ಯಜಿಸಿ ನೂರು ದಿನ ಕಳೆದರೂ ಅದರ ದುಷ್ಪ್ರಭಾವ (ಭದ್ರವಾಗಿ ನೆಲೆಯೂರಿರುವುದರಿಂದ) ಮಾಯವಾಗುವುದಿಲ್ಲ.

ಮಾರಿಜುಆನಾ ಸಿಗರೇಟು ಸೇದಿ ೨೪ ಗಂಟೆಗಳು ಕಳೆದರೂ ವಿಮಾನ ಚಾಲಕರು–ಸಮರ್ಥ ಮತ್ತು ಅನುಭವಿಗಳಾಗಿದ್ದವರಾದರೂ, ತಾವು ಚೆನ್ನಾಗಿಯೇ ಇದ್ದೇವೆಂದು ಅವರಾಗಿಯೇ ಹೇಳಿಕೊಂಡಿದ್ದರೂ ಕೂಡ, ಅವರಿಂದ ವಿಮಾನವನ್ನು ನೇರವಾಗಿ ಓಡಿಸಲು ಸಾಧ್ಯವಾಗುವುದಿಲ್ಲ—ಇದು, ಒಬ್ಬಿಬ್ಬರನ್ನು ಪರೀಕ್ಷಿಸಿ ತಿಳಿದುಕೊಂಡ ವಿಚಾರವಲ್ಲ. ಹಲವರನ್ನು ನಟನೆಯ ಹಾರಾಟದಲ್ಲಿ ಪರೀಕ್ಷೆಗೊಳಪಡಿಸಿ ತಿಳಿದು ಬಂದಂಥ ವಿಚಾರ.

ಮಿದುಳಿನಲ್ಲಿ ಮಾದಕ ದ್ರವ್ಯಗಳು ಉಂಟು ಮಾಡುವ ರಾಸಾಯನಿಕ ಬದಲಾವಣೆಗಳಿಂದಾಗಿ ಮಿದುಳಿನ ಜೈವಿಕರಸ ದ್ರವ್ಯಗಳಲ್ಲೂ ಬದಲಾವಣೆಗಳಾಗುತ್ತವೆ. ಇದರಿಂದ ಜೀವಕಣಗಳ ಉತ್ಪತ್ತಿಯನ್ನು ನಿಯಂತ್ರಿಸುವ, ಪ್ರಜೋತ್ಪಾದನೆಯನ್ನು ಪ್ರೇರೇಪಿಸುವ, ಹಾರ್ಮೋನ್‌ಗಳನ್ನು ತಯಾರಿಸುವ ಗ್ರಂಥಿಗಳ ಮೇಲೆ ಕೂಡ ದುಷ್ಪರಿಣಾಮಗಳುಂಟಾಗುತ್ತವೆ. ಮಾದಕಗಳು ಮಿದುಳಿನೊಳಗೆ ಮಾತ್ರವಲ್ಲ ನೇರವಾಗಿ ಗರ್ಭಾಶಯದೊಳಗೂ ನುಗ್ಗುತ್ತವೆ. ಗರ್ಭವೇಷ್ಟನವು ಮಾಡುವ–ಗರ್ಭ ಪಿಂಡವನ್ನು ಬೆಳೆಯಿಸುವ ಕಾರ್ಯದಲ್ಲಿ ಅಡಚಣೆ ಉಂಟುಮಾಡುತ್ತವೆ.

ಈ ನಾರ್ಕೊಟಿಕ್‌ಗಳ ಮೇಲಿನ ಸಮರದಲ್ಲಿ ನಿಶ್ಚಿತವಾದ ವಿಜಯ ತಂದುಕೊಡಲು ಇತ್ತೀಚಿನ ವೈದ್ಯಕೀಯ ಪರಿಜ್ಞಾನವೂ, ಅಸಮರ್ಥವಾಗಿದೆ, ಅಪರಿಪೂರ್ಣವಾಗಿದೆ. ಹಾಗಿದ್ದೂ, ಎಷ್ಟೋ ಪತ್ರಿಕೋದ್ಯಮಿಗಳು, ನ್ಯಾಯಾಧೀಶರು, ಉಚ್ಚಶಿಕ್ಷಣವೇತ್ತರು, ಶ್ರೇಷ್ಠ ವಿದ್ಯಾಪಾರಂಗತರೂ ಕೂಡ ಈ ರೀತಿ ಹೇಳತೊಡಗಿದ್ದಾರೆ–"ಈ ಹೋರಾಟ ಗುರಿ ಇಲ್ಲದ್ದು; ನಿರರ್ಥಕವಾದ್ದು."

ಅವರ ನಿಲುವು ಇಷ್ಟೇ–ಮಾದಕ ದ್ರವ್ಯಗಳ ಸಾಗಾಣಿಕೆ, ಮಾರಾಟಗಳಲ್ಲಿ ಕೋಟಿಗಟ್ಟಲೆ ಹಣ ತೊಡಗಿಸಲಾಗುತ್ತಿದೆ; ಮತ್ತು ಪ್ರತಿಬಂಧಕ ಕ್ರಮಗಳೆಲ್ಲಾ ನಿಷ್ಪ್ರಯೋಜಕವಾಗಿವೆ. ಆದ್ದರಿಂದ ಹೊಗೆ ಸೊಪ್ಪು, ಮದ್ಯಗಳ ಮಾರಾಟ ಮತ್ತು ಉಪಯೋಗವನ್ನು ಕಾನೂನಿಗೆ ಒಳಪಡಿಸಿದ ರೀತಿಯಲ್ಲಿ 'ಡ್ರಗ್ಸ್'ಗಳನ್ನೂ ನ್ಯಾಯಬದ್ಧಗೊಳಿಸುವುದು ಸೂಕ್ತ ಮಾರ್ಗ. ನಾವು ನಾರ್ಕೋಟಿಕ್‌ಗಳ ವ್ಯಸನಿಗಳನ್ನು ಚಿಕಿತ್ಸೆಗೊಳಪಡಿಸಿ ಸರಿಪಡಿಸಬೇಕೇ ವಿನಃ ಅವರನ್ನು ಕಾನೂನು ಬಾಹಿರರೆಂದು ವಿಚಾರಣೆಗೊಳಪಡಿಸಿ ಶಿಕ್ಷಿಸುವುದು ಸರಿಯಲ್ಲ."

ಆದರೆ ಇಂಥ ವಿಚಾರಗಳ ಪ್ರತಿಪಾದಕರು ಮಾದಕ ವಸ್ತುಗಳ ಆಳವಾದ ಮತ್ತು ಭೀಕರವಾದ ಪರಿಣಾಮಗಳು ನಗಣ್ಯವೆಂದು ತಿಳಿಯುತ್ತಾರೆ. ಇವು ಮನುಷ್ಯನ ಸ್ವಭಾವವನ್ನು ನಿಯಂತ್ರಿಸಿ, ಮೃಗಗಳಿಂದ ಪ್ರತ್ಯೇಕಿಸುವಂಥ ಅತ್ಯಂತ ಮಹತ್ವಪೂರ್ಣ ಅಂಗವೆನಿಸಿದ ಮಿದುಳಿನ ಸೂಕ್ಷ್ಮಾತಿಸೂಕ್ಷ್ಮ ಕೋಶಿಕೆಯೊಳಗಿನ ಜೀನ್‌ಗಳನ್ನು ಕೆಡಿಸುತ್ತವೆ; ಗರ್ಭಸ್ಥ ಶಿಶುವಿನ ಮೇಲೆ, ಅದಕ್ಕೂ

ಮುನ್ನ ಗರ್ಭಪಿಂಡ ಬೆಳೆಯುತ್ತಿರುವಾಗಲೇ, ಶಾಶ್ವತ ಧಕ್ಕೆ ಉಂಟುಮಾಡುತ್ತವೆ; ಮಾನವ ಜನಾಂಗಕ್ಕೇ,-ಮುಂದಿನ ಪೀಳಿಗೆಗೇ–ಕಂಟಕ ಪ್ರಾಯವಾಗಿರುವ ಮಾದಕದ ವ್ಯವಸಾಯ ವ್ಯಾಪಾರಗಳನ್ನು ಅದರ ಪಾಡಿಗೆ ಬಿಟ್ಟುಬಿಡುವುದೆಂದರೆ ಮನುಕುಲಕ್ಕೇ ಅನ್ಯಾಯ ಮಾಡಿದಂತೆ. ಇಂಥ ಅದೂರದರ್ಶಿಗಳು ಚಿಕಿತ್ಸೆಯಿಂದ ಸುಲಭವಾಗಿ ದುಶ್ಚಟಗಳಿಗೆ ಬಲಿಯಾದವರನ್ನು ಸರಿಪಡಿಸಬಹುದೆಂದೂ ಭಾವಿಸುತ್ತಾರೆ. ವೈದ್ಯಕೀಯ ಶಾಸ್ತ್ರದ ಇತಿಮಿತಿಗಳೂ ಅವರಿಗೆ ತಿಳಿದಿಲ್ಲ. ನಿಜಸಂಗತಿ ಎಂದರೆ ಮಾದಕಗಳ ದುಷ್ಪರಿಣಾಮ ನಿವಾರಣೆಗೆ ನಿಶ್ಚಿತವಾದ ಯಾವ ಔಷಧಿಯೂ ಇದುವರೆಗೆ ದೊರೆಕಿಲ್ಲ. ವೈದ್ಯಶಾಸ್ತ್ರಕ್ಕನುಗುಣವಾಗಿ ಚಿಕಿತ್ಸಾತಂತ್ರ ಒಂದನ್ನು ರೂಪಿಸಲಾಗಿದೆಯೇ ವಿನಃ ಅವರಿಂದ ವ್ಯಕ್ತಿ ಮೊದಲಿನಂತಾಗಲೂಬಹುದು, ಆಗದೆಯೂ ಇರಬಹುದು.

ಪ್ರಗತಿವಾದಿಗಳೆಂದು ಹೇಳಿಕೊಳ್ಳುವ ಬುದ್ಧಿವಂತರಿಗೆ ಈ ಹಿಂದೆ ಈ ರೀತಿ ಮಾದಕ ದ್ರವ್ಯಗಳ ಅಬಾಧಿತ ವ್ಯಾಪಾರ ವಹಿವಾಟಿಗೆ ಅನುಮತಿ ಕೊಟ್ಟಲ್ಲೆಲ್ಲ ಏನಾಗಿದೆ ಎಂಬುದರ ಬಗ್ಗೆ ಅರಿವಿದೆಯೇ? ಮುಕ್ತ ವ್ಯಾಪಾರದ ಶಿಫಾರಸು ನೀಡುವ ಇವರಿಗೆ ಜನಜೀವನದ, ಆರೋಗ್ಯದ ಬಗ್ಗೆ ತೆರಬೇಕಾಗಿ ಬರುವ ಮೌಲ್ಯದ ಅರಿವಿದೆಯೇ? ಮಾದಕಗಳು ಸ್ವಚ್ಛಂದವಾಗಿ ಮಾರುಕಟ್ಟೆಗೆ ಬಂದಲ್ಲೆಲ್ಲ ಇದರ ಸೇವನೆಯ ಚಟ ಅತಿವೇಗವಾಗಿ ಅತಿ ವಿಸ್ತಾರವಾಗಿ ಪಸರಿಸಿದ್ದು ಕಂಡು ಬಂದಿದೆ. ಇದರಿಂದ ತಿಳಿದು ಬರುವುದಿಷ್ಟೆ–ಲಭ್ಯವಾಗುವುದು ಎಷ್ಟರಮಟ್ಟಿಗೆ ಹೆಚ್ಚುವುದೋ ಅಷ್ಟೇ ಪ್ರಮಾಣದಲ್ಲಿ ಅದರ ಬಳಕೆಯೂ ವೃದ್ಧಿಯಾಗುವುದು ಅನುಭವ ಸಿದ್ಧ. ಏಕೆಂದರೆ ಸಾಂಕ್ರಾಮಿಕ ರೋಗದಂತೆ ಇದು ಎಲ್ಲೆಲ್ಲಿ ಸಿಗುವುದೋ ಅಲ್ಲೆಲ್ಲಾ ಹರಡುತ್ತದೆ.

೧೯ನೇ ಶತಮಾನದಲ್ಲಿ ಚೀನಾದಲ್ಲಿ ಏನು ನಡೆಯಿತು? ಇದನ್ನು ಮರೆಯಬಹುದೇ? ಆಗ ಬ್ರಿಟಿಷರು ಅಫೀಮಿನ ವ್ಯಾಪಾರವನ್ನು ಕಾನೂನು-ಸಮ್ಮತಗೊಳಿಸಬೇಕೆಂದು ಚೀನೀ ಸರಕಾರದ ಮೇಲೆ ಒತ್ತಾಯ ತಂದರು! ೫೦ ವರ್ಷ ಕಳೆದಾಗ ಮಿಲಿಯ ಗಟ್ಟಲೆ ಚೀನೀಯರು ಅಫೀಮಿನ ಬಲೆಯಲ್ಲಿ ಬಿಡಿಸಿಕೊಳ್ಳಲಾಗದಷ್ಟು ಬಂಧಿತರಾಗಿದ್ದರು. ೨೦ನೇ ಶತಮಾನದ ಮೊದಲ ವರ್ಷಗಳಲ್ಲಿ ಅಫೀಮಿನ ಅಮಲಿನಿಂದ ಜಡವಾಗಿ ಜರ್ಜರಗೊಂಡ ಚೀನ ಕ್ರಾಂತಿಯ ತೂಫಾನಿನ ಹೊಡೆತಕ್ಕೆ ಸಿಕ್ಕಿ ಇನ್ನೂ ಬಡವಾಯಿತು.

ಆದರೆ ಕಮ್ಯೂನಿಸ್ಟ್ ಕ್ರಾಂತಿಯ ನಂತರದ ಹೊಸ ನಾಯಕರು ಅಫೀಮಿಗೆ ನಿಷೇಧಾಜ್ಞೆ ಹೇರಿದರು. ಇದರಿಂದಾಗಿ ಚೀನಾ ಮಾದಕದ್ರವ್ಯದ ಪಿಡುಗಿನಿಂದ ಮೇಲೆದ್ದಿತು. ಆದರೆ ಮೇಲೇಳಲು ದಶಕಗಳು ಬೇಕಾದುವು!

ನಾವೀಗ ಮಾಡಬೇಕಾದ್ದೇನು? ಇತ್ತ ಕಡೆ ಮಾದಕ ವಸ್ತುಗಳ ಸರಬರಾಜನ್ನು ಕಡಿತಗೊಳಿಸಬೇಕು; ಇನ್ನೊಂದೆಡೆ ಅದಕ್ಕಿರುವ ಬೇಡಿಕೆಯನ್ನು ನಿಯಂತ್ರಿಸಬೇಕು. ಇವೆರಡೂ ಈಡೇರಲು ಬೇಕಾದ ಒಂದು ಹೊಸ ಯುಕ್ತಿ! ಹೊಸ ನೀತಿ! ಅದು ಇಲ್ಲಿದೆ ನೋಡಿ:

ಪ್ರಥಮ ಹೆಜ್ಜೆಯಾಗಿ ಸರಬರಾಜನ್ನು ಹತ್ತಿಕ್ಕಲು ಅದರ ಮೂಲಕ್ಕೇ ಕೊಡಲಿ

ಏಟು ಹಾಕತಕ್ಕದ್ದು. ಪರಿಸರದ ಬಗ್ಗೆ ಜೀವಕಣಗಳ ಬಗ್ಗೆ, ಜೀವಶಾಸ್ತ್ರದ ಬಗ್ಗೆ, ನಮಗೆ ಸಾಕಷ್ಟು ಪರಿಜ್ಞಾನವಿದೆ. ಇವುಗಳ ಆಧಾರದಿಂದ ಮಾದಕ ದ್ರವ್ಯಗಳನ್ನು ಉತ್ಪಾದಿಸುವ ಮರಗಿಡಗಳನ್ನೇ ನಾಶ ಪಡಿಸಬೇಕು. ಗಿಡಗಳ ವಂಶವನ್ನೇ ನಿರ್ಮೂಲಗೊಳಿಸಬೇಕಾಗಿದ್ದರೆ ಅವುಗಳನ್ನು ಬೆಳೆಸಿ ಮಾರಾಟ ಮಾಡಿ ಲಾಭ ಪಡೆಯುವ ದೇಶಗಳ, ಆಯಾ ಸರಕಾರಗಳ ಬೆಂಬಲವಿರಬೇಕು. ಇದು ಅತ್ಯಗತ್ಯ ಮಾತ್ರವಲ್ಲ. ಅವು ಸಕ್ರಿಯವಾಗಿ ಈ ನಾಶ ಕಾರ್ಯವಲ್ಲಿ ಪಾಲ್ಗೊಳ್ಳುವಂತೆ ಅವುಗಳ ಮನವೊಲಿಸಬೇಕು. (ಸಾಕಷ್ಟು ಧನಾರ್ಜನೆ ಮಾಡಬಲ್ಲ ಇಂಥ ಬೆಳೆಯನ್ನು ತ್ಯಜಿಸುವುದು ಇಷ್ಟವಾಗುವ ಸಂಗತಿಯಲ್ಲ). ಮಾದಕ ಬೆಳೆಗಳಿಗೆ ಬದಲಾಗಿ ಇತರ ಹಣದ ಬೆಳೆಗಳನ್ನು ಬೆಳೆಸಬಹುದೆಂದು ಅವರಿಗೆ ಮನವರಿಕೆ ಮಾಡಿಕೊಡಬೇಕು. ಆಯಾ ದೇಶಗಳ ಜಲನೆಲಗಳಿಗನುಗುಣವಾಗಿ ಇತರ ಬೆಳೆಯನ್ನು ತ್ವರಿತವಾಗಿ ಬೆಳೆಯಿಸಲು ಮುಂದಾಗಬೇಕು. ಏಕೆಂದರೆ ಒಂದು ಅತ್ಯಧಿಕ ಲಾಭ ತರುವ ಬೆಳೆ ನಿರ್ಮೂಲವಾಗುತ್ತಿರುವಾಗ ತಕ್ಷಣವೇ ಈ ಬದಲಿ ಕಾರ್ಯಕ್ರಮ ಕೈಕೊಳ್ಳುವುದು ಅತ್ಯಾವಶ್ಯಕ. ಇಲ್ಲವಾದಲ್ಲಿ ಈ ಮಾದಕಗಳಗಳ ನಿರ್ಮೂಲನೆಯಲ್ಲಿ ವಿಜಯಿಗಳಾಗುವವುದು ಅಸಂಭವ. ಇವೆಲ್ಲ ಚಟುವಟಿಕೆಗಳು ಜಗತ್ತಿನ ಎಲ್ಲೆಡೆ–ಎಂದರೆ ಎಲ್ಲೆಲ್ಲಿ ಇವುಗಳ ಬೆಳೆ ಇದೆಯೋ ಅಲ್ಲೆಲ್ಲಾ–ಭರದಿಂದ ನಡೆಯಬೇಕು ಮತ್ತು ಸಂಯುಕ್ತ ರಾಷ್ಟ್ರಗಳ ಒಕ್ಕೂಟದ ನಾಯಕತ್ವದಲ್ಲಿ ಇವು ನಡೆದರೆ ಹೆಚ್ಚು ಪ್ರಭಾವಶಾಲಿಯಾಗಿ, ಹೆಚ್ಚು ವಾಸ್ತವಿಕವಾಗಿ ನಿರ್ವಂಚನೆಯಿಂದ ಮೂಲೋತ್ಪಾಟನೆಯಾದೀತು.


ಇನ್ನು ಎರಡನೆಯದಾಗಿ ಮಾದಕ ವ್ಯಸನಿಗಳ ಪುನರುದ್ಧಾರಕ್ಕೆ ತಗಲುವ ವೆಚ್ಚ ಮತ್ತು ಸೀಮಿತವಾದ ಚಿಕಿತ್ಸಾ ಪ್ರಯೋಜನಗಳನ್ನು ಗಮನದಲ್ಲಿಟ್ಟುಕೊಂಡು ಮಾದಕಗಳ ಬೇಡಿಕೆಯನ್ನು ಕಡಿಮೆ ಮಾಡಲು ಪ್ರಭಾವಶಾಲಿ ತಡೆಗಳನ್ನು ಒಡ್ಡುವುದು ಅತ್ಯಂತ ಅವಶ್ಯ. ಯಾವದೇ ವಸ್ತುಗಳ ಬಳಕೆಯನ್ನು ಕಡಿತಗೊಳಿಸುವ ಕಾರ್ಯಕ್ರಮಗಳಲ್ಲಿ ಜೀವನಾಡಿಯಂತಿರುವುದು ಒಂದಿಷ್ಟೂ ರಿಯಾಯಿತಿ ಇಲ್ಲದ ಕಠಿಣ ನಿಯಂತ್ರಣ ಧೋರಣೆ. ಆದರೆ, ಈಗ ಚಾಲ್ತಿಯಲ್ಲಿರುವ ಕಾನೂನುಗಳು ಹಲವು ವಿರೋಧಾಭಾಸಗಳಿಂದ ಕೂಡಿದ ಒಂದು ಕಗ್ಗಂಟಾಗಿದೆ.

ಇನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಪರ್ಯಾಲೋಚಿದರೂ, ಜೀವಿಗಳ ಮುಖ್ಯ ಚೈತನ್ಯ ಕೇಂದ್ರವಾದ ಮಿದುಳಿಗೆ ಪರಿಸರ ಮಾಲಿನ್ಯದಿಂದ ಆಗಬಹುದಾದ ಅಪಾಯದಷ್ಟೇ ಮಾದಕ ದ್ರವ್ಯಗಳಿಂದಲೂ ಉಂಟಾಗುತ್ತವೆಂದು ಸಿದ್ಧಪಟ್ಟಿದೆ. ಜಗತ್ತಿನಾದ್ಯಂತ ಮಾದಕಗಳ ಉಪಯೋಗದಿಂದ ಆಗುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಪ್ರಯತ್ನ ನಡೆಯುವುದಕ್ಕೆ ಅರ್ಧ ಶತಮಾನದಷ್ಟು ಹಿಂದೆಯೇ ಸಂಯುಕ್ತ ರಾಷ್ಟ್ರ ಸಂಘವು ಔಷಧವಾಗಿ ಬಳಸುವುದಕ್ಕೆ ಹೊರತಾದ ಇತರ ಉಪಯೋಗವನ್ನು ನಿಷೇಧಿಸಿತ್ತು. ಸಂಪ್ರದಾಯವಾದಿಗಳು, ಮಾದಕ ವಿರೋಧಿ ಸಮರ ಕೈಕೊಂಡವರು. ಇವರೆಲ್ಲರ ಗುರಿಯು ಒಂದೇ – ಆಂತರಿಕ ಮತ್ತು ಬಾಹ್ಯ

ಮಾಲಿನ್ಯಗಳಿಂದ ಜೀವಜಗತ್ತನ್ನು–ಮುಖ್ಯವಾಗಿ ಮನುಕುಲವನ್ನು ರಕ್ಷಿಸುವುದು.

ಆದ್ದರಿಂದ ಗೆಳೆಯರೇ, ಮಾದಕಗಳನ್ನು ನ್ಯಾಯಬದ್ಧವೆಂದು ತೀರ್ಮಾನಿಸುವ ಮೂರ್ಖತನವನ್ನು ಮಾಡದಿರಿ! ಎಚ್ಚರಿಕೆ! ತಕ್ಷಣ ನಿಷೇಧಾಜ್ಞೆ ಘೋಷಿಸಿರಿ! ಮಾದಕಗಳ ಹುಟ್ಟನ್ನೇ ಅಡಗಿಸಿರಿ! ಅದರ ಮೂಲವನ್ನೇ ಉಚ್ಚಾಟಿಸಿರಿ! ಮಾದಕಗಳಿಗೆ ಕಾನೂನಿನ ರಕ್ಷಣೆಯನ್ನೆಂದೂ ನೀಡದಿರಿ!

ಮಾನವರ ಕಲ್ಯಾಣಕ್ಕಾಗಿ ಮಾಡುವ ಈ ಕಾರ್ಯಕ್ಕೆ ಇನ್ನೂ ಕಾಲ ಮಿಂಚಿಲ್ಲ. ಆದರೆ ಇನ್ನು ಮುಂದೆ ಕಾಲ ಕಳೆಯಲು ಕಾಲವಿಲ್ಲ!



ನಾನು ಮರಣವನ್ನು ಇಚ್ಛಿಸುವುದಿಲ್ಲ. ದ್ವೇಷ ಸಾಧಿಸುವುದೂ ನನಗೆ ಮರಣದಷ್ಟೇ ಬೇಡವಾದ ವಿಷಯ. ಎಲ್ಲರ ಪ್ರೇಮ ಸಂಪಾದನೆಯೇ ನನಗೆ ಪ್ರಿಯವಾದುದು.

—ಶೇಕ್ಸ್‌ಪಿಯರ್

ಅಧೈರ್ಯವು ಯಶಸ್ಸಿನ ವೈರಿ. ಧೈರ್ಯದಿಂದ ಮುನ್ನುಗ್ಗುವವರಿಗೇ ಯಶಸ್ಸು ದೊರೆಯುವುದು.

—ವಿವೇಕಾನಂದ

ಕಲಿಕೆ

ಚಂದ್ರಶೇಖರಾರಾಧ್ಯ

'ಕಲಿಕೆ' ಎಂಬುದು ತೊಟ್ಟಿಲಿನಿಂದ ಪ್ರಾರಂಭವಾಗಿ ಸಮಾಧಿಯಲ್ಲಿ ಅಂತ್ಯವಾಗುತ್ತದೆ ಎಂಬುದು ಪ್ರಚಲಿತವಾದ ಮಾತು. ಕಲಿಕೆಯು ಎಲ್ಲ ಜೀವರಾಶಿಗಳಲ್ಲಿ ಹುಟ್ಟಿನಿಂದ ಸಾಯುವವರೆಗೆ ನಡೆಯುವ ನಿರಂತರವಾದ ಕ್ರಿಯೆಯಾಗಿರುತ್ತದೆ. ಯಾವುದೇ ಕಲಿಕೆಗೆ ಅದರ ಹಿಂದೆ ಪ್ರೇರಣೆ ಒಂದು ಇರುತ್ತದೆ. ಈ ಪ್ರೇರಣೆಯು ತೀವ್ರವಾದಷ್ಟು ಕಲಿಕೆಯೂ ಪರಿಣಾಮಕಾರಿಯಾಗಿರುತ್ತದೆ. ಜಗತ್ತಿನ ಜೀವರಾಶಿಗಳಲ್ಲಿ ಮನುಷ್ಯರ ಕಲಿಕೆಗೂ, ಪ್ರಾಣಿ ಪಕ್ಷಿಗಳ ಕಲಿಕೆಗೂ ಇರುವ ಅಂತರ ಅಪಾರ. ಪ್ರಾಣಿ ಪಕ್ಷಿಗಳ ಕಲಿಕೆಯು ಆಹಾರ ಸಂಪಾದನೆ ಹಾಗೂ ತಮ್ಮ ರಕ್ಷಣೆಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ಮನುಷ್ಯರ ಕಲಿಕೆಯು ಅನ್ನ, ವಸತಿಗೆ ಮಾತ್ರ ಸೀಮಿತವಾದುದಲ್ಲ. ಇದರ ವ್ಯಾಪ್ತಿ ವಿಶಾಲ ಮತ್ತು ನಿರಂತರವಾದುದು. ಕಲಿಕೆಗೆ ಲಿಂಗಬೇಧಗಳ ಅಂತರ ಇಲ್ಲ. ಕಾಲದ ಮಿತಿ ಇಲ್ಲ. ವಯಸ್ಸಿನ ನಿರ್ಬಂಧ ಇಲ್ಲ. ಕಲಿಯುವ ವಿಷಯದ ಕೊರತೆಯೂ ಇಲ್ಲ. ಆದರೆ ಕಲಿಯುವ ಕುತೂಹಲ ಮತ್ತು ಆಸಕ್ತಿ ಇರಬೇಕು. ಕಲಿಕೆಯು ಅರಿತಷ್ಟೂ ಆಳ, ವಿಚಾರಿಸಿದಷ್ಟೂ ವಿಶಾಲ.

ಪಾಲ್ಕುರಿಕೆ ಸೋಮನಾಥ ಕವಿಯು ಹೇಳುವಂತೆ, ಕೆಲವನ್ನು ಬಲ್ಲವರಿಂದ, ಕೆಲವನ್ನು ಅಧ್ಯಯನದಿಂದ, ಕೆಲವನ್ನು ಸಜ್ಜನರ ಸಹವಾಸದಿಂದ, ಕೆಲವನ್ನು ಸುಜ್ಞಾನದಿಂದ ಕಲಿತು ಜ್ಞಾನದ ದಿಗಂತವನ್ನು ಹಲವು ಹತ್ತು ಮೂಲಗಳಿಂದ ವಿಸ್ತರಿಸಿಕೊಳ್ಳುವ ಅವಕಾಶ ಇದೆ. ಕಲಿಕೆಗೆ ಓದು ಬರಹ ಒಂದೇ ಸಾಧನ ಅಲ್ಲವಾದರೂ ಅದು ಪರಿಣಾಮಕಾರಿಯಾದ ಒಂದು ಸಾಧನವಂತೂ ಹೌದು. ಕಾಲದ ಬೆಲೆ ತಿಳಿದು ಸದುಪಯೋಗಪಡಿಸಿಕೊಳ್ಳುವ ಅವಕಾಶ ಇರುವುದು ಮಾನವ ಜೀವಿಗೆ ಮಾತ್ರ, ಅದರಲ್ಲಿಯೂ ಓದು ಬರಹ ತಿಳಿದವರಿಗೆ ವಿಶೇಷ ಮೂಲಗಳಿಂದ ವೈವಿಧ್ಯಮಯವಾಗಿ ಕಲಿಯುವ ಸೌಲಭ್ಯ ಇದೆ. ಆದಕಾರಣ ಪ್ರತಿ ಕ್ಷಣವನ್ನು ಲೆಕ್ಕಾಚಾರ ಮಾಡಿ ಕಲಿಕೆಗೆ ಬಳಕೆ ಮಾಡಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣ. ಅವಕಾಶ ಒದಗಿ ಬಂದಾಗ ಹೊಸದೊಂದನ್ನು ಕಲಿಯುವ, ಕಲಿತ ಒಳ್ಳೆಯ ಅಂಶವನ್ನು ಆಚರಣೆಯಲ್ಲಿ

ಕೃಪೆ: ಮೈಸೂರು ಆಕಾಶವಾಣಿ 'ಚಿಂತನ'

ತರುವ ಪ್ರಯತ್ನ ಮಾಡಬೇಕು. ಇಂದು ಕಲಿತದ್ದು ನಾಳೆಯೇ ಉಪಯೋಗಕ್ಕೆ ಬಾರದಿರಬಹುದು. ಈ ಕಾರಣದಿಂದ ನಿನ್ನೆ ಕಲಿತದ್ದು ಅಪ್ರಯೋಜನ ಎಂಬ ನಿರ್ಧಾರಕ್ಕೆ ಬರುವುದು ತರವಲ್ಲ.

ಹಲವು ಸನ್ನಿವೇಶಗಳಲ್ಲಿ ಕಲಿಕೆಯ ಪರಿಣಾಮದಿಂದ ಅನುಭವ ಅಂತರ್ಗತವಾಗಿ ಇದು ಬಾಹ್ಯ ಗೋಚರಕ್ಕೆ ಬಾರದಿರಬಹುದು. ಆದರೆ ಅನಿವಾರ್ಯ ಪರಿಸ್ಥಿತಿ ಎದುರಾದಾಗ, ಈ ಕಲಿಕೆಯು ತಾನಾಗಿಯೇ ಪ್ರಯೋಜನಕ್ಕೆ ಬರುತ್ತದೆ. ತತ್‌ಕ್ಷಣದ ಉಪಯೋಗಕ್ಕೆ ಈ ಅನುಭವ ನಿಲುಕದ ಕಾರಣ ಏನೂ ಕಲಿಯಲಿಲ್ಲ ಎಂಬುದು ಸಮ್ಮತವಲ್ಲ.

ಕಲಿಕೆಯು ಬದುಕಿನಿಂದ ಭಿನ್ನವಾಗಿರಲು ಸಾಧ್ಯ ಇಲ್ಲ. ಕಲಿತದ್ದು ಆಚರಣೆಯಲ್ಲಿ ಅಳವಡುವುದು. ಒಳ್ಳೆಯದನ್ನು ಕಲಿತು ಅಳವಡಿಸಿಕೊಂಡಲ್ಲಿ ಬದುಕು ಸಾರ್ಥಕ. ಕೆಟ್ಟದ್ದನ್ನು ಕಲಿತಲ್ಲಿ ಬದುಕು ಬವಣೆ. ಆದರೆ ಯಾವುದೇ ವ್ಯಕ್ತಿಯಲ್ಲಿ ಕಲಿಯುವ ಆಸಕ್ತಿ ಕುಂದಿದರೆ ವ್ಯಕ್ತಿತ್ವದ ಬೆಳವಣಿಗೆ ಸ್ಥಗಿತವಾಗುತ್ತದೆ. ನಿಂತ ನೀರು ಮಲಿನತೆಗೆ ಆಶ್ರಯತಾಣವಾಗಿ ರೋಗರುಜಿನ ಹರಡುವ ಕೇಂದ್ರವಾಗುವಂತೆ, ಕಲಿಕೆಯಿಂದ ವಿಮುಖರಾದವರ ವ್ಯಕ್ತಿತ್ವ ಜಡವಾಗುತ್ತದೆ. ಇದರಿಂದ ವ್ಯಕ್ತಿಗೆ ಹಾನಿಯಾಗುವುದರೊಂದಿಗೆ ಸಮಾಜವೂ ನಷ್ಟ ಹಂಚಿಕೊಳ್ಳಬೇಕಾಗುತ್ತದೆ. ಜಗತ್ತಿನ ದಿನನಿತ್ಯದ ವ್ಯವಹಾರದಲ್ಲಿ ಕಲಿಯಲು ಅಗಾಧವಾದ ವಿಷಯ ಸಂಪತ್ತಿದೆ. ಕಲಿಯುವ ಕುತೂಹಲ ಮತ್ತು ಆಸಕ್ತಿ ಇದ್ದಲ್ಲಿ ನಿಸರ್ಗ, ಪ್ರಾಣಿ ಪಕ್ಷಿಗಳಿಂದಲೂ ನಿರಂತರವಾಗಿ ಕಲಿಯಬಹುದು.

ಕಾಗೆ ಒಂದು ಅಗುಳನ್ನು ಕಂಡರೂ ತನ್ನವರನ್ನೆಲ್ಲಾ ಕೂಗಿ ಕರೆಯುತ್ತದೆ. ಕೋಳಿ ಒಂದು ಗುಟುಕು ಕಂಡರೂ ಸಾಕು ತನ್ನ ಬಳಗಕ್ಕೆ ತಿಳಿಸುತ್ತದೆ. ನಾನು ಏನನ್ನೂ ಕಲಿಯಲಿಲ್ಲ, ಕಲಿಯಬೇಕಾಗಿಲ್ಲ ಎಂಬುದಕ್ಕಿಂತ ಕಲಿಯುವ ಮನಸ್ಸಿನಿಂದ ಕಾಗೆ ಕೋಳಿಗಳಿಂದಲೂ ಈ ಸಹಕಾರ ತತ್ತ್ವ ಕಲಿತು, ಆಚರಣೆಯಲ್ಲಿ ಅಳವಡಿಸಿಕೊಳ್ಳುವುದು ಶ್ರೇಯಸ್ಸಲ್ಲವೇ ?

ಹೆಚ್ಚು ಮಾತನಾಡುವವರೆಲ್ಲ ಕಡಿಮೆ ವಿಚಾರ ಮಾಡುತ್ತಾರೆ. ಹಾಗೂ ಸ್ವಲ್ಪ ಕೆಲಸ ಮಾಡುತ್ತಾರೆ.

—ಮಾಂಟೊಸ್ಕಿ

ಈಶೇಚ್ಛೆಯಿಂದ ಅಮೃತವೂ ವಿಷವಾಗಬಲ್ಲದು. ವಿಷವೂ ಅಮೃತವಾಗಬಲ್ಲದು, ಕಷ್ಟ ಸುಖಗಳೂ ಹಾಗೆಯೇ.

—ಕಾಳಿದಾಸ

ಅಲರ್ಜಿಯ ಬಗ್ಗೆ ತಿಳಿದಿರಿ

ಎಸ್. ರಘು

ವ್ಯಕ್ತಿ ಯಾವುದೇ ಒಂದು ಬಾಹ್ಯ ವಸ್ತುವಿನೊಡನೆ ಹೊಂದಿರಬಹುದಾದ ಅತಿಸೂಕ್ಷ್ಮ ಸಂಪರ್ಕಕ್ಕೆ ಅವನ ದೇಹ ತನ್ನ ವಿರೋಧವನ್ನು ವ್ಯಕ್ತಪಡಿಸುವ ರೀತಿಯೇ 'ಅಲರ್ಜಿ' ಎನಿಸಿಕೊಳ್ಳುತ್ತದೆ. ಮೇಲ್ನೋಟಕ್ಕೆ ಈ ನಿರೂಪಣೆ ಅಸಹಜವೆನಿಸಿದರೂ ಆ ಸ್ಥಿತಿಯನ್ನು ಅನುಭವಿಸಿದವರಿಗಷ್ಟೇ ಅದರ ವೈಪರೀತ್ಯಗಳ ಪರಿಚಯವಿರಲು ಸಾಧ್ಯ.

ಎಲ್ಲರೂ ಉಸಿರಾಡುವಗಾಳಿಯಲ್ಲಿ ಸೇರಿ ಹೋಗುವ ಅತಿಸೂಕ್ಷ್ಮವಾದ ಪುಷ್ಪರೇಣುಗಳು (ಉದಾ: ಪಾರ್ಥೇನಿಯಂ) ಹಲವರಲ್ಲಿ ಉಚ್ಛ್ವಾಸದೊಂದಿಗೆ ಮೂಗಿನ ಹೊಳ್ಳೆಗಳಲ್ಲಿ ಸೇರಿ ತೀಕ್ಷ್ಣ ಕಚಗುಳಿ ಇಟ್ಟಂತಾಗಿ, ಮೂಗು ಉಜ್ಜಿಕೊಂಡಂತೆ ರಭಸದ ಸೀನುಗಳ ಸರಮಾಲೆ ಆರಂಭವಾಗುತ್ತದೆ, ಕಣ್ಣುಗಳು ಊದಿ, ಕೆಂಪಾಗುತ್ತಿರುವಂತೆ ಮೂಗಿನಿಂದ ತೆಳುದ್ರವದ ಅನಿಯಂತ್ರಿತ ಸೋರುವಿಕೆಯಿಂದ ಆರಂಭವಾಗುವ ಅಲರ್ಜಿ ಛಳಿ, ಜ್ವರ, ಸುಸ್ತುಗಳ ಮೂಲಕ ವ್ಯಕ್ತಿಯನ್ನು ನಿಶ್ಯಕ್ತಗೊಳಿಸುತ್ತದೆ, ಇದು ಹಲವು ದಿನಗಳವರೆಗೆ ಮುಂದುವರೆಯಬಹುದು, ನಮ್ಮ ರಕ್ತದಲ್ಲಿನ ಬಿಳಿರಕ್ತಕಣಗಳು ಅವಿರತ ನಮ್ಮ ರಕ್ತವಾಹಿನಿಗಳಲ್ಲಿ ಸೇರಿಕೊಂಡು ಥಾಂಧಲೆ ಮಾಡಲೆಳಿಸುವ ಸೂಕ್ಷ್ಮ ಜೀವಾಣುಗಳನ್ನು ಹೊರದೂಡುತ್ತಲೇ ಇರುತ್ತವೆ, ಒಮ್ಮೊಮ್ಮೆ ಅಕಸ್ಮಾತ್ತಾಗಿ ಕೆಲವು ಸೂಕ್ಷ್ಮಾಣುಗಳೊಂದಿಗೆ ಘರ್ಷಣೆಯಾದಾಗ ಅಲರ್ಜಿಯ ಮೂಲಕ ಅವು ದೇಹದಿಂದ ಹೊರಹೋಗುವಂತೆ ಮಾಡುತ್ತದೆ. ಉಸಿರಾಟದ ಮೂಲಕ ಸಾಗುವ ಧೂಳು, ಸುಗಂಧ/ದುರ್ಗಂಧ, ಹೊಗೆ, ಜನಸಂದಣಿಯಲ್ಲಿನ ವಿಚಿತ್ರವಾಸನೆ ಇವೆಲ್ಲದರ ಬಗ್ಗೆ ಎಚ್ಚರ ವಹಿಸಿದಲ್ಲಿ ಅಲರ್ಜಿಯನ್ನು ದೂರ ಇಡಬಹುದು, ಇದರೊಟ್ಟಿಗೆ ಅಸ್ತಮಕ್ಕಾಗಿಯೂ ವೈದ್ಯಕೀಯ ಸಲಹೆ ಪಡೆಯುವುದು ಅತಿಸೂಕ್ತ.

ನಾವು ಸೇವಿಸುವ ಆಹಾರಗಳು (ಉದಾ: ಹಾಲು, ಬೇಳೆ, ಮೀನು) ಅಲರ್ಜಿ ಉಂಟುಮಾಡುತ್ತವೆಂದರೆ ಆಶ್ಚರ್ಯವೆನಿಸಬಹುದು ಈಚೆಗೆ "ದಿಢೀರ್ ಆಹಾರ"ಗಳಲ್ಲಿ ಬಳಸುವ ರಾಸಾಯನಿಕ ವಸ್ತುಗಳು ಈ ಸಾಲಿಗೆ ಸೇರುತ್ತವೆ, ಇವುಗಳ ಸೇವನೆಯಿಂದ ಹಲವರಲ್ಲಿ ತಲೆಸುತ್ತುವಿಕೆ, ವಾಂತಿ, ತುರಿಕೆ, ಆಮಶಂಕೆ ಉಂಟಾಗುತ್ತದೆ; ರಕ್ತದೊತ್ತಡ

೧೯೯೪ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಕೋಪಿಂಗ್ ವಿತ್ ಅಲರ್ಜಿ' ಎಂಬ ಶೂವಿ ಬಿ. ಚಿನಾಯ್ ಅವರ ಲೇಖನದ ಸರಳಾನುವಾದ.

ತೀವ್ರವಾಗಿ ಇಳಿಯುತ್ತದೆ. ಅಲರ್ಜಿ ತೀವ್ರ ನಾಡಿ ಬಡಿತದಿಂದ ಹಿಡಿದು ಮಾರಕ ಸ್ತರಕ್ಕೇರಲೂಬಹುದು, ಜೇನುನೊಣ, ಕಣಜದಕಡಿತ, ಔಷಧಿಗಳ ಉಪಚಾರ (ಉದಾ : ಪೆನ್‌ಸಿಲಿನ್)ದಿಂದಲೂ ಅನೇಕ ವೇಳೆ ಅಲರ್ಜಿ ಧಿಢೀರನೆ ಮಾರಕ ಪರಿಣಾಮ ಗಳನ್ನು ಉಂಟುಮಾಡಬಲ್ಲದು.

ನಮ್ಮ ದೇಹದೊಳಗಿನ ತೊಂದರೆಗಳನ್ನು ಚರ್ಮವು ಗುರುತುಮಾಡಿ ತೋರಿಸುತ್ತದೆ ಎಂದು ವೈದ್ಯಪರಿಣಿತರು ಹೇಳುತ್ತಾರೆ. ಆಹಾರಪದಾರ್ಥಗಳಿಂದ, ಸೌಂದರ್ಯ ಪ್ರಸಾಧನಗಳಿಂದ, ಔಷಧೋಪಚಾರಗಳಿಂದ ಸಾಕುಪ್ರಾಣಿಗಳ ಸ್ಪರ್ಶದಿಂದ, ಹವಾಮಾನ ಗಳ ತೀವ್ರತೆಗಳಿಂದ ಅಷ್ಟೇ ಏಕೆ, ಧರಿಸುವ ಉಡುಪುಗಳಿಂದಲೂ, ಅಲರ್ಜಿ ತಲೆದೋರು ತ್ತದೆ. ಇದರ ಲಕ್ಷಣ ಎಂದರೆ ಚರ್ಮದಲ್ಲಿ ಏಳುವ ಕೆಂಪುದದ್ದುಗಳು, ಕಡಿತ, ಇದು ಕೆಲವು ನಿಮಿಷಗಳಿಂದ ಹಲವಾರು ದಿನದ ವರಗೆ ಕಾಡಬಹುದು. ತೀವ್ರಸ್ಥಿತಿಯಲ್ಲಿ ಮುಖ, ಗಂಟಲು, ಊದಿಕೊಂಡು ಉಸಿರಾಡುವುದು ಅತಿಕಷ್ಟವಾಗಬಹುದು. ನಾವು ಧರಿಸುವ ಪಾದರಕ್ಷೆ, ಆಭರಣಗಳು ಹಾಗೂ ಬಳಸುವ ಸಾಬೂನುಗಳಲ್ಲಿಯೂ ನಮಗೆ ಒಗ್ಗದ ಸೂಕ್ಷ್ಮಾಣುಗಳಿದ್ದು, ಇವು ಗಳ ಬಳಕೆಯಿಂದ ಸಣ್ಣ ತುರಿಕೆ ಗುಳ್ಳೆ ಗುಳುಂಟಾಗುತ್ತದೆ. ಹಣೆಗಿಟ್ಟುಕೊಳ್ಳುವ ಬಿಂದಿ, ಕೂದಲಿಗೆ ಹಚ್ಚುವ ಕಪ್ಪುಬಣ್ಣ ಸಹ ಅಲರ್ಜಿ—ಜನಕವಾಗಬಹುದು.

ಅಲರ್ಜಿ ಯಾವುದರಿಂದ ಉಂಟಾಗುತ್ತದೆ ಎಂಬುದನ್ನು ಕಂಡುಹಿಡಿಯುವ ತಜ್ಞತೆ ಯಾವ ಪತ್ತೇದಾರನ ಜಾಣ್ಮೆಗಿಂತಲೂ ಕಡಿಮೆಯಾದುದಲ್ಲ ರೋಗ ಲಕ್ಷಣವನ್ನು ಕೆರಳಿಸುವ ವಸ್ತುಮೂಲವನ್ನು ಪತ್ತೆ ಹಚ್ಚಲು ರೋಗಿಯ ದಿನಚರಿಯಲ್ಲಿ ಸಂಪರ್ಕಕ್ಕೆ ಬರುವ ಅನೇಕ ವಸ್ತುಗಳ ಪೈಕಿ 'ಕೆರಳಿಸುವ ಪ್ರತಿಕ್ರಿಯೆ'ಗಾಗಿ ಒಂದು (ಒಮ್ಮೊಮ್ಮೆ ಒಂದಕ್ಕಿಂತ ಹೆಚ್ಚು) ವಸ್ತು ವನ್ನು ರೋಗಿಯ ಚರ್ಮಕ್ಕೆ ಸೇರಿಸುವುದ ರಿಂದ, ಆಹಾರ ಪದಾರ್ಥಗಳ ಆಯ್ದ ವರ್ಜನೆ ಯಿಂದ ಕಾರಣವರಿತು ಅಲರ್ಜಿಯನ್ನು ತಡೆಗಟ್ಟಬಹುದು. ರಕ್ತದಲ್ಲಿನ 'ವಿರೋಧ ಕಣ'ಗಳನ್ನು ಪತ್ತೆಹಚ್ಚುವ ವಿಧಾನವೂ ಈಗ ರೂಢಿಯಲ್ಲಿದೆ. ಅಲರ್ಜಿಯನ್ನು ಪೂರ್ಣ ಗುಣಪಡಿಸಲು ಅಸಾಧ್ಯವಾದರೂ, ಕಾರಣ ತಿಳಿದು ಆ ವಿಶಿಷ್ಟ ವಸ್ತುವಿನ ಸಂಪರ್ಕ ತ್ಯಜಿಸುವುದೊಂದೇ ಮಾರ್ಗದಿಂದ ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕು. ಉದಾ : ನೈಲಾನ್ ಕಾಲುಚೀಲ, ರಬ್ಬರ್ ವಸ್ತುಗಳು, ಸುಗಂಧದ್ರವ್ಯ, ಧೂಳು, ನಿರ್ದಿಷ್ಟ ಆಹಾರ ಪದಾರ್ಥ ಇತ್ಯಾದಿ. ಕಡಿತಕ್ಕೆ ಅಡಿಗೆಸೋಡಾದ ಲೇಪನ, ಉಪ್ಪು ನೀರಿನ ತಂಪುಪಟ್ಟಿ, ಧೂಳಿನಿಂದಾಗುವ ಅಸ್ತಮಾಕ್ಕೆ ಔಷಧ—ಸಿಂಪಡನೆಗಳು ಉಪ ಯೋಗಕ್ಕೆ ಬರುತ್ತದೆ. ವಿಶಿಷ್ಟ ರೀತಿಯ ಮುಖವಾಡಗಳನ್ನು ಧರಿಸುವುದರಿಂದ ಸೋಸಿದ ಶುದ್ಧಗಾಳಿಯು ದೊರಕುತ್ತದೆ.

ನಿಮಗೆ ಅಲರ್ಜಿ ಇದ್ದಲ್ಲಿ, ವೈದ್ಯರನ್ನು ಸಂಪರ್ಕಿಸಿ. ಕಾರಣವನ್ನು ಪತ್ತೆಹಚ್ಚಲು ಪ್ರಯತ್ನಿಸಿ. ಚೆನ್ನಾಗಿ ನಿದ್ದೆಮಾಡಿ. ಸಮತೋಲನ ಆಹಾರ ಸೇವಿಸಿ. ಸರಳ ವ್ಯಾಯಾಮಮಾಡಿ. ಧೂಮಪಾನವನ್ನು ಬಿಡಿ. ಅಲರ್ಜಿಗೆ ಕಾರಣ ತಿಳಿದುಕೊಂಡಿ ದ್ದಲ್ಲಿ ಅನಾರೋಗ್ಯದ ಸಮಯದಲ್ಲಿ ವೈದ್ಯ ರಿಗೆ ಅದನ್ನು ತಿಳಿಸಿ, ಸೂಕ್ತ ಔಷಧೋಪ ಚಾರ ಪಡೆಯಬಹುದು.

ಡಬಲ್ ಪ್ರಮೋಷನ್

ಮಾಧವರಾವ್ ಮುಧೋಳ್

ಪಿಂಕಿ ತನ್ನ ತಾಯಿ ತಂದೆ ಜೊತೆಯಲ್ಲಿ ಕಾಲೋನಿಗೆ ಹೊಸದಾಗಿ ಬಂದಿದ್ದಳು. ಕಾಲೋನಿ ಬಹಳ ಚೆನ್ನಾಗಿತ್ತು. ಆದರೆ ಪಿಂಕಿಗೆ ಹಿಡಿಸಿರಲಿಲ್ಲ. ನಿಜವಾದ ಮಾತೆಂದರೆ ಕಾಲೋನಿಯಲ್ಲಿ ಇರುವ ಹುಡುಗಿಯರೆಲ್ಲ ಪಿಂಕಿಗಿಂತ ದೊಡ್ಡವರು ಇಲ್ಲವೇ ತೀರ ಚಿಕ್ಕವರು. ಅವಳು ಎರಡನೆ ವರ್ಗದಲ್ಲಿ ಓದುತ್ತಿದ್ದಳು. ಈ ಕಾಲೋನಿಯಲ್ಲಿ ಯಾವ ಹುಡುಗಿಯರೂ ಇವಳ ಜೊತೆ ಇರುತ್ತಿರಲಿಲ್ಲ. ಇದರಿಂದಾಗಿ ಇವಳಿಗೆ ಯಾರ ಜೊತೆಗೂ ಸ್ನೇಹ ಮಾಡಿಕೊಳ್ಳುವುದಕ್ಕಾಗಲಿಲ್ಲ. ಹತ್ತಿರವಿರುವ ಹುಡುಗಿಯರು ನಮೀತಾ, ನೀರಜಾ ಮತ್ತು ಷಬ್ನಮ್ ನಾಲ್ಕನೇ ಮತ್ತು ಐದನೇ ವರ್ಗದಲ್ಲಿ ಓದುತ್ತಿದ್ದರು. ಅವರು ಇವಳೊಡನೆ ಮಾತನಾಡುತ್ತಿದ್ದರಾದರೂ ಮೇಲೆ ಮೇಲಿನ ಮನಸ್ಸಿನಿಂದಲೇ. ಯಾರೂ ಇವಳನ್ನು ಸ್ನೇಹಿತೆಯನ್ನಾಗಿ ಮಾಡಿಕೊಳ್ಳಲು ಬಯಸುತ್ತಿರಲಿಲ್ಲ. ಇದನ್ನು ಕಂಡು ಇವಳಿಗೆ ಅತೀವ ಕಳವಳವಾಗುತ್ತಿತ್ತು.

ಕಾಲೋನಿಯ ದೊಡ್ಡ ಹುಡುಗಿಯರೆಲ್ಲ ಒಂದು ಕ್ಲಬ್ ಮಾಡಿದ್ದರು. ತಿಂಗಳಿಗೆ ಒಂದು ರೂಪಾಯಿ ಚಂದಾ ಎತ್ತುತ್ತಿದ್ದರು. ಪ್ರತಿ ದಿವಸವೂ ಸಾಯಂಕಾಲ ಅವರು ಯಾವುದಾದರೂ ಸದಸ್ಯ—ಹುಡುಗಿಯ ಮನೆಯಲ್ಲಿ ಸೇರುವರು ಮತ್ತು ಆಟವಾಡಿ ಗಲಾಟೆ ಮಾಡುವರು. ಸ್ವಲ್ಪ ದಿವಸಗಳ ಮೇಲೆ ಇವರೆಲ್ಲರೂ ಒಂದು ನಾಟಕವನ್ನಾಡಿದರು. ಅದನ್ನು ಬಹಳ ಮೆಚ್ಚಲಾಯಿತು. ಪಿಂಕಿಗೆ ನಾಟಕ ನೋಡುವ ಅವಕಾಶ ಸಿಕ್ಕಿತು. ಆದರೆ ಕ್ಲಬ್ಬಿನ ಸದಸ್ಯಳಾಗಿ ನಾಟಕದಲ್ಲಿ ಭಾಗವಹಿಸುವ ಮಜವೇ ಬೇರೆ. ಪಿಂಕಿಯ ಮನಸ್ಸಿನಲ್ಲಿ ಕ್ಲಬ್ಬಿನ ಸದಸ್ಯಳಾಗಬೇಕೆಂಬ ಹಂಬಲ ವಿಶೇಷವಾಗಿ ಬೇರೂರಿತು. ಆದರೆ ಕ್ಲಬ್ಬಿನ ಸೆಕ್ರೆಟರಿ ರಜಿಯಾಬಾನ್ ಇವಳ ಹಂಬಲವನ್ನು ನೇರವಾಗಿ ನಿರಾಕರಿಸಿದಳು. ಕ್ಲಬ್ಬಿನ ಸದಸ್ಯರಾಗಲು ಹತ್ತು ವರ್ಷದ ವಯಸ್ಸಾಗಿರಬೇಕೆಂಬುದು ಕಡ್ಡಾಯವಾಗಿತ್ತು. ಅಥವ ಅವಳು ನಾಲ್ಕನೆಯ ವರ್ಗದ ವಿದ್ಯಾರ್ಥಿನಿಯಾಗಿರಬೇಕು. ಪಿಂಕಿ ಈ ಯಾವ ಷರತ್ತುಗಳನ್ನೂ ಪೂರೈಸುತ್ತಿರಲಿಲ್ಲ. ಇವಳಿಗೆ ಕ್ಲಬ್ಬಿನ ಸದಸ್ಯಳಾಗದಿರುವುದಕ್ಕೆ ಬಹಳ ಅಸಮಾಧಾನವಾಯಿತು. ಈಗ ೧೫ನೇ ಆಗಸ್ಟ್‌ನ ದಿನ, ಮತ್ತೆ ಬಾಪೂಜೀಯ ಜನ್ಮ ದಿವಸ, ಇದಾದ ಮೇಲೆ ಚಾಚಾ ನೆಹರೂರವರ ಜನ್ಮ ದಿನದಂದು ಕ್ಲಬ್ಬಿನ ಹುಡುಗಿಯರೆಲ್ಲ

ಒಂದಿಲ್ಲೊಂದು ಚಟುವಟಿಕೆ ಇಟ್ಟುಕೊಳ್ಳುವರು. ಆದರೆ ಇವಳು ಅದರಲ್ಲಿ ಭಾಗವಹಿಸಲಾರಳು. ಇದನ್ನು ಯೋಚಿಸುತ್ತಲೂ ಇವಳಿಗೆ ಅತೀವ ಖೇದವಾಗುತ್ತಿತ್ತು.

ಕೊನೆಗೆ ಇವಳೊಂದು ಉಪಾಯವನ್ನು ಯೋಚಿಸಿದಳು. ಇವಳು ತನಗಿಂತ ಕಿರಿಯ ವಯಸ್ಸಿನ ಹುಡುಗಿಯರೆಲ್ಲರನ್ನೂ ಸೇರಿಸಿ ಒಂದು ಕ್ಲಬ್ ಮಾಡಿದಳು. ಆ ಹುಡುಗಿಯರ ಮನೆಗೆ ಹೋಗಿ, ಅವರ ತಾಯಿಂದಿರನ್ನು ಕಂಡು, ಪ್ರತಿ ಸದಸ್ಯರಿಗೆ ೫೦ ಪೈಸೆಯಂತೆ ಚಂದಾ ವಸೂಲಿ ಮಾಡಿದಳು. ಚಿಕ್ಕ ಹುಡುಗಿಯರ ತಾಯಿಂದಿರಿಗೆ ಸಂತೋಷವೇ ಆಯಿತು. ಕೇವಲ ೫೦ ಪೈಸೆ ತಿಂಗಳಿಗೆ ಕೊಡುವುದರಿಂದ ಚಿಕ್ಕ ಮಕ್ಕಳ ಕಾಟದಿಂದ ಸ್ವಲ್ಪ ಹೊತ್ತಾದರು ತಪ್ಪಿಸಿಕೊಳ್ಳಬಹುದು. ಸ್ವಲ್ಪ ಸಮಯವಾದರು ವಿಶ್ರಾಂತಿಯಿಂದ ಕಳೆಯಬಹುದು ಎಂದು ಅವರಿಗನಿಸಿತು. ಕ್ಲಬ್ಬು ಪ್ರಾರಂಭವಾಗುತ್ತಲೂ ಪಿಂಕಿಗೆ ನಿರಾಶೆಯೇ ಆಯಿತು. ಏಕೆಂದರೆ ಕ್ಲಬ್ಬಿನಲ್ಲಿ ಇವಳದು ಏನೂ ನಡೆಯುತ್ತಿರಲಿಲ್ಲ. ಕ್ಲಬ್ಬಿನ ರೀತಿ ನೀತಿಗಳು ಚಿಕ್ಕಮಕ್ಕಳಿಗೇನು ಗೊತ್ತು ! ಅವರು ಪಿಂಕಿಯದೇನನ್ನೂ ಕೇಳುತ್ತಿರಲಿಲ್ಲ.ಆಗಾಗ ಪರಸ್ಪರ ಜಗಳವಾಡುವರು. ಒಮ್ಮೊಮ್ಮೆ ಮಾತನಾಡುವುದನ್ನೇ ನಿಲ್ಲಿಸುತ್ತಿದ್ದರು. ಮತ್ತೆ ಒಮ್ಮೊಮ್ಮೆ ಸುಮ್ಮನೇ ಅಳುವುದನ್ನೂ ದುಃಖಿಸುವುದನ್ನೂ ಮಾಡುತ್ತಿದ್ದರು. ಯಾವಾಗಾದರೊಮ್ಮೆ ತಮ್ಮ ಚಂದಾ ಹಣ ವಾಪಸ್ಸು ಕೊಡಬೇಕೆಂದು ಕೇಳುತ್ತಿದ್ದರು.ಅವರೆಲ್ಲರನ್ನೂ ಸಮಾಧಾನ ಪಡಿಸುವುದಕ್ಕೆ, ಪಿಂಕಿ, ಬಿಸ್ಕತ್ ಮತ್ತು ಟಾಫಿಗಳನ್ನು ಕೊಡಬೇಕಾಗುತ್ತಿತ್ತು.

ಮತ್ತೆ ಅವಳು, ಅವರನ್ನು ಸಮಾಧಾನ ಮಾಡುತ್ತ ಬೇಸರಗೊಂಡಳು. ಪೂರ್ತಿ ಚಂದಾ ಎಲ್ಲಾ ಹುಡುಗಿಯರಿಗೆ ಟಾಫಿ ಮತ್ತು ಬಿಸ್ಕತ್ ಖರೀದಿಸುವುದರಲ್ಲೇ ಖರ್ಚಾಯಿತು. ಕೊನೆಗೆ ಒಂದು ದಿವಸ ಅವಳು ಕ್ಲಬ್ ಮುಚ್ಚಿಬಿಟ್ಟಳು. ಈಗ ಮತ್ತೆ ಅವಳು ಮೊದಲಿನಂತೆ ಒಂಟಿಯಾಗಿ ಉಳಿದಳು.

ಸ್ಕೂಲು ಮುಗಿಯುತ್ತಲೂ ಅವಳಾಯಿತು ಮತ್ತು ಅವಳ ಸ್ಕೂಲಿನ ಪುಸ್ತಕಗಳಾದವು.

ಸ್ಕೂಲಿನ ಪುಸ್ತಕದಲ್ಲಿ ಯಾವಾಗ ಅವಳು ಮನಸ್ಸುಗೊಟ್ಟಳೋ, ಅವಳಿಗೆ ಅತ್ಯಂತ ಕುತೂಹಲವೆನಿಸತೊಡಗಿತು. ಅವಳ ಸ್ಕೂಲಿನಲ್ಲಿ ಪ್ರತಿ ಹದಿನೈದು ದಿವಸಕ್ಕೊಮ್ಮೆ ರಿಪೋರ್ಟಿನ ರೂಪದಲ್ಲಿ ಒಂದು ಕಾರ್ಡು ಸಿಕ್ಕುತ್ತಿತ್ತು. ಅದನ್ನು ಮಕ್ಕಳು ತಮ್ಮ ತಾಯಿ ತಂದೆಯರ ಸಹಿ ಮಾಡಿಸಿ ತಿರುಗಿ ಟೀಚರ್‌ಗೆ ಕೊಡಬೇಕಾಗುತಿತ್ತು. ನಾಲ್ಕು ಬಣ್ಣದ ಕಾರ್ಡುಗಳಿದ್ದವು. ಕಂದು, ನೀಲಿ, ಗುಲಾಬಿ ಮತ್ತು ಬಂಗಾರದ ಬಣ್ಣದವು. ಒಳ್ಳೇ ಅಂಕಗಳನ್ನು ಪಡೆದವರಿಗೆ ಬಂಗಾರದ ಬಣ್ಣದ ಮತ್ತು ಕಡಿಮೆ ಅಂಕಗಳನ್ನು ಪಡೆದವರಿಗೆ ಕಂದು ಬಣ್ಣದ ಕಾರ್ಡು ಸಿಕ್ಕುತಿದ್ದವು. ಈ ಎರಡರ ನಡುವಿನ ಅಂಕ ಪಡೆದವರಿಗೆ ನೀಲಿ ಮತ್ತು ಗುಲಾಬಿ ಬಣ್ಣದ ಕಾರ್ಡುಗಳು ಸಿಕ್ಕುತ್ತಿದ್ದವು. ಪಿಂಕಿಗೆ ಸಾಧಾರಣವಾಗಿ ಗುಲಾಬಿ ಬಣ್ಣದ ಕಾರ್ಡು ಸಿಕ್ಕುತ್ತಿತ್ತು. ಈಗ ಅವಳು ಮನಸ್ಸುಗೊಟ್ಟು ನಿತ್ಯ ಪ್ರಯತ್ನ ಮಾಡುತ್ತಿರುವುದರಿಂದ ಅವಳಿಗೆ ಸತತವಾಗಿ ಬಂಗಾರ ಬಣ್ಣದ ಕಾರ್ಡೇ ಸಿಕ್ಕ ತೊಡಗಿತು. ಅವಳ

ತಂದೆ ತಾಯಿಯವರಿಗೂ ಬಹಳ ಸಂತೋಷವಾಯಿತು. ಸುತ್ತಮುತ್ತಲಿನ ಹುಡುಗಿಯರು ಇವಳನ್ನು ಸ್ಪರ್ಧಿಸುವ ದೃಷ್ಟಿಯಿಂದ ನೋಡಲಾರಂಭಿಸಿದರು. ಅವರ ಸ್ಕೂಲಿನ ವೈಭವಪೂರಿತ ರಿಪೋರ್ಟ ಇವಳನ್ನು ಇತರ ಹುಡುಗಿಯರಲ್ಲಿ ತಲೆಯೆತ್ತಿ ಹೆಮ್ಮೆಯಿಂದ ನಿಲುವಂತೆ ಮಾಡಿತು. ಈಗ ಇವಳನ್ನು ಸ್ನೇಹಿತೆಯನ್ನಾಗಿ ಮಾಡಿಕೊಳ್ಳಲು ಅವರೆಲ್ಲರೂ ಸಿದ್ಧರಾಗಿದ್ದರು ಎನಿಸುತ್ತಿತ್ತು.

ಸಮಯ ಸಿಕ್ಕಾಗಲೆಲ್ಲ ಇವಳು, ತನ್ನ ಅಣ್ಣನ ಮೂರನೇ ಕ್ಲಾಸಿನ ಪುಸ್ತಕಗಳನ್ನು ಓದ ತೊಡಗಿದಳು. ಇವಳ ತಾಯಿ.... "ಮಗೂ! ನಿನ್ನ ಪುಸ್ತಕ ಓದು"....ಅಣ್ಣನ ಈ ಮೂರನೇ ವರ್ಗದ ಪುಸ್ತಕ ಏಕೆ ತೆಗೆದುಕೊಂಡು ಕೂತಿದ್ದೀ?" ಅನ್ನುತ್ತಿದ್ದರು.

"ಮಮ್ಮೀ! ನನ್ನ ಪುಸ್ತಕಗಳಂತೂ ನನಗೆ ಬಾಯಿಪಾಠ ಆಗಿ ಹೋಗಿವೆ ಮತ್ತೆ ನನಗೆ ಈ ಪುಸ್ತಕಗಳಂತೂ ಮುಂದೆ ಓದಲೇಬೇಕಾಗಿವೆ. ಈಗಲೇ ಓದಿದರೆ ಏನು ಅಭ್ಯಂತರವಿದೆ?" ಎಂದು ಉತ್ತರಿಸಿದಳು.

ತಾಯಿ, ಇವಳ ಚುರುಕು ಬುದ್ಧಿಯನ್ನು ಮತ್ತು ಆ ಬಗ್ಗೆ ಇವಳ ಮಗ್ನತೆಯನ್ನೂ ಕಂಡು ಸಂತೋಷ ಪಟ್ಟಳು.

ಪರೀಕ್ಷೆಗೆ ಒಂದು ತಿಂಗಳ ಮೊದಲು ಇವಳ ತಾಯಿ ಹಾಗೂ ತಂದೆ ಮಗಳ ಸ್ಕೂಲಿನ ಪ್ರಿನ್ಸಿಪಾಲರನ್ನು ಕಂಡು, ಪಿಂಕಿಯ ಎರಡನೇ ವರ್ಗದ ಪರೀಕ್ಷೆಯ ಜೊತೆಗೆ ಮೂರನೇ ವರ್ಗದ ಪರೀಕ್ಷೆಯನ್ನೂ ಅವಳು ತೆಗೆದುಕೊಳ್ಳುವುದಕ್ಕೆ ಒಪ್ಪಿಸಿಕೊಂಡು ಬಂದರು. ಪಿಂಕಿ ಹಗಲು ರಾತ್ರಿ ಒಂದು ಮಾಡಿ ಅಭ್ಯಾಸಮಾಡಿದಳು. ಮೂರನೇ ವರ್ಗದ ಪರೀಕ್ಷೆಯ ಸಿದ್ಧತೆಯನ್ನೂ ಮಾಡಿಕೊಂಡಳು. ಪರೀಕ್ಷೆಯಾಯಿತು. ಪಿಂಕಿಗೆ ಡಬಲ್ ಪ್ರಮೋಷನ್ ಸಿಕ್ಕಿತು. ಅವಳು ಮೂರನೆಯ ವರ್ಗಕ್ಕೆ ಹೋಗುವ ಬದಲು ಈಗ ನೇರ ನಾಲ್ಕನೆಯ ವರ್ಗಕ್ಕೆ ಹೋದಳು.

ಪರೀಕ್ಷೆಯ ಪರಿಣಾಮ ಹೊರಡುತ್ತಲು ಪಿಂಕಿ ರಜಿಯಾಬಾನ್ ಬಳಿ ಹೋಗಿ, "ಈಗಂತೂ ತಾವು ನನ್ನನ್ನು ತಮ್ಮ ಕ್ಲಬ್ಬಿನ ಸದಸ್ಯರನ್ನಾಗಿ ಮಾಡಿಕೊಳ್ಳಬಹುದಲ್ಲ?" ಎಂದು ಕೇಳಿದಳು. "ನನ್ನ ಸ್ಕೂಲ್ ರಿಪೋರ್ಟ ನೋಡಿ! ನಾನು ಈಗ ನಾಲ್ಕನೇವರ್ಗದ ವಿದ್ಯಾರ್ಥಿನಿ" ಎಂದಳು.

ರಜಿಯಾಖಾನ್ ಈ ಚಿಕ್ಕ ಹುಡುಗಿಯನ್ನು ಆಶ್ಚರ್ಯದಿಂದ ನೋಡುತ್ತ, "ಆಗಬಹುದು" ಎಂದು ತಲೆಯಾಡಿಸಿದಳು. ವಯಸ್ಸಿನಿಂದ ಈಗಲೂ ಇವಳು ಕ್ಲಬ್ಬಿನ ಸದಸ್ಯಳಾಗಲು ಬರುತ್ತಿರಲಿಲ್ಲ; ಆದರೆ ಇವಳು ಪಡೆದ ದರ್ಜೆಯ ಮೇಲಿಂದ ಖಂಡಿತ ಸದಸ್ಯಳಾಗಲು ಅರ್ಹಳಾಗಿದ್ದಳು.

[ಮೂಲ : ಡಾ॥ ಬಿಪೇಶರ ಪ್ರದೀಪ್]

ಎಳ್ಳು

ಕಿಕ್ಕೇರಿ ನಾರಾಯಣ

ಮನುಷ್ಯ ಪ್ರಕೃತಿಯನ್ನು ಸಂಸ್ಕೃತಿಯನ್ನಾಗಿ ಮಾರ್ಪಡಿಸಿಕೊಳ್ಳುವುದರಲ್ಲಿ ಉಳಿದ ಪ್ರಾಣಿ ಪಕ್ಷಿಗಳಿಗಿಂತ ಸಿಸ್ಸೀಮ. ಎಳ್ಳು ಪ್ರಕೃತಿಗೆ ಸೇರಿದ್ದು. ಆ ಎಳ್ಳನ್ನು ತಂದು ಬೆಳೆಸಿ, ಅದರ ಉಪಯೋಗಗಳನ್ನು ಕಂಡು ಹಿಡಿದು, ಮನುಷ್ಯ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾನೆ. ಅಷ್ಟೇ ಅಲ್ಲ, ಎಳ್ಳಿಗೆ ಇನ್ನೂ ಅನೇಕ ಅರ್ಥಗಳನ್ನು ಆರೋಪಿಸಿದ್ದಾನೆ. ಅದಕ್ಕೆ ಪುರಾಣದ, ಕ್ರಿಯಾವಿಧಿಯ ಅರ್ಥಗಳನ್ನು ಕೊಟ್ಟಿದ್ದಾನೆ. ಎಳ್ಳನ್ನು ಸಮಾಜದ ಜನರು ತಮ್ಮ ಕೆಲವು ಆಚರಣೆಯ ಅಂಗವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಈ ಆಚರಣೆಗಳು ಬುದ್ಧಿಗೆ ರಜೆ ಕೊಟ್ಟು ಭಾವಕ್ಕೆ ಬೆಲೆ ಕೊಡುತ್ತವೆ. ಈ ಆಚರಣೆಯನ್ನೇ ನಾವು 'ಹಬ್ಬ' ಎಂದು ಕರೆಯುತ್ತೇವೆ. ಯಾವುದಾದರೂ ಒಬ್ಬ ವ್ಯಕ್ತಿ ಆಚರಿಸುವ ಕ್ರಿಯೆ ಹಬ್ಬವೆನ್ನಿಸಿಕೊಳ್ಳುವುದಿಲ್ಲ.

ಮನುಷ್ಯ ಮಾತ್ರ ಪ್ರಕೃತಿಯನ್ನು ಸಂಸ್ಕೃತಿಯನ್ನಾಗಿ ಮಾಡಿಕೊಳ್ಳುವುದಿಲ್ಲ. ಪ್ರಾಣಿ-ಪಕ್ಷಿಗಳೂ ಈ ಕ್ರಿಯೆಯಲ್ಲಿ ತೊಡಗುತ್ತದೆ. ಒಂದು ಹಕ್ಕಿ ಪ್ರಕೃತಿಯಲ್ಲೇ ಸಿಗುವ ಹುಲ್ಲನ್ನು ತಂದು ಮನುಷ್ಯನೂ ಕಟ್ಟಲಾರದಂತಹ ತನ್ನ ಗೂಡನ್ನು ಹೆಣೆದುಕೊಳ್ಳುತ್ತದೆ. ದುಂಬಿ ಮಧುವನ್ನು ಶೇಖರಿಸಲು ವಿಶಿಷ್ಟವಾದ ಗೂಡನ್ನು ನಿರ್ಮಿಸಿಕೊಳ್ಳುತ್ತದೆ. ಇವೆಲ್ಲ, ಸ್ಥೂಲವಾಗಿ ಪ್ರಕೃತಿಯನ್ನು ಸಂಸ್ಕೃತಿಯನ್ನಾಗಿ ಪರಿವರ್ತಿಸಿಕೊಳ್ಳುವ ರೀತಿ. ಆದರೆ ಪ್ರಾಣಿ-ಪಕ್ಷಿಗಳಲ್ಲಿನ ಈ ಕ್ರಿಯೆ, ಸೀಮಿತವಾಗಿ ನಡೆಯುತ್ತಿರುತ್ತದೆ. ಅಂದರೆ ತಮ್ಮ ಸಾಮರ್ಥ್ಯಕ್ಕೆ ತಕ್ಕದಾಗಿ ಒಂದು ವಿಧದ ಪರಿವರ್ತನೆಯನ್ನು ಮಾತ್ರ ಪ್ರಕೃತಿಯಲ್ಲಿ ತರಬಲ್ಲವು. ಮನುಷ್ಯ ಮಾತ್ರ ಪ್ರಕೃತಿಯನ್ನು ಸಂಸ್ಕೃತಿಯನ್ನಾಗಿ ಸಂಕೀರ್ಣ ರೀತಿಯಲ್ಲಿ ಸೃಷ್ಟಿಸಿಕೊಳ್ಳಬಲ್ಲ. ಕಾಲ ಕಾಲಕ್ಕೆ ಬದಲಾಯಿಸಿಕೊಳ್ಳಬಲ್ಲ. ಹೊಸ ಅರ್ಥಗಳನ್ನು ನೀಡಬಲ್ಲ. ಹಳೆಯ ಅರ್ಥವನ್ನು ಮರೆಯಲೂ ಬಲ್ಲ.

ಹೀಗಾಗಿ ಎಳ್ಳಿಗೆ ನಮ್ಮಲ್ಲಿ ಅನೇಕ ಸಂಕೀರ್ಣ ಅರ್ಥಗಳ ಸೃಷ್ಟಿಯಾಗಿದೆ.

ಹಾಗೆ ನೋಡಿದರೆ, ಮನುಷ್ಯನೂ ಪ್ರಕೃತಿಯ ಒಂದು ಭಾಗ. ತನ್ನ ಜನಾಂಗೀಯ ಅನುಭವವನ್ನು ಕ್ರೋಢೀ

ಕೃಪೆ: ಆಕಾಶವಾಣಿ, ಮೈಸೂರು.

ಕರಿಸಿಕೊಳ್ಳುವುದರ ಮೂಲಕ ಆತ ಪ್ರಕೃತಿಯ ಭಾಗವಾಗಿಯೂ ಇರಬಲ್ಲ. ದೂರದಲ್ಲಿ ನಿಂತು ನೋಡಲೂ ಬಲ್ಲ. ಕಾಲ ಮಾನಕ್ಕೆ ತಕ್ಕಂತೆ ಬದಲಾವಣೆಗಳನ್ನು ಪ್ರಕೃತಿಯಲ್ಲಿ ಗಮನಿಸಿ ಎಳ್ಳಿಗೆ ನಮ್ಮ ಸಂಸ್ಕೃತಿಯಲ್ಲಿ ವಿಶಿಷ್ಟವಾದ ಅರ್ಥವನ್ನು ಹಚ್ಚುತ್ತಾ ಬಂದಿದ್ದಾನೆ.

ಪ್ರಕೃತಿ ಶಿಶಿರ ಋತುವಿನಿಂದ ವಸಂತ ಋತುವಿಗೆ ಜಾರುವ, ಮಗ್ಗುಲು ಬದಲಾಯಿಸುವ, ರೂಪಾಂತರಗೊಳ್ಳುವ ಕಾಲ ನಮಗೆ ಬಹಳ ಮುಖ್ಯವಾದದು. ಇದು ಹಳೆಯದು ಹೊಸದರೊಡನೆ ಬೆರೆಯುವ ಕಾಲ. ಹಿಂಗಾರು ಬೆಳೆಯ ಸುಗ್ಗಿಯ ಪ್ರಾರಂಭ. ಬೆಳೆದ ಸಸಿಗಳು ಫಲಬಿಟ್ಟು ಸಂಪೂರ್ಣ ತಾನು ಸತ್ತು ಫಲವನ್ನು ಮನುಷ್ಯನಿಗಾಗಿ ಅರ್ಪಿಸಿಕೊಳ್ಳುವ ಕಾಲ. ಅದಕ್ಕಾಗಿ ಕುಯ್ಲು ನಡೆಸುತ್ತಾನೆ. ಮೆದೆ ಹಾಕುತ್ತಾನೆ, ಬಡಿಯುತ್ತಾನೆ, ದವಸ ಧಾನ್ಯವನ್ನು ಒಕ್ಕಣೆಮಾಡಿ ತನ್ನ ಮುಂದಿನ ಬದುಕಿಗಾಗಿ ಕಾಯ್ದಿರಿಸಿಕೊಳ್ಳುತ್ತಾನೆ. ಹೀಗೆ ಪ್ರಕೃತಿಯ ಕೆಲವು ಬೆಳೆಗಳು ತಮ್ಮ ಜೀವವನ್ನು ಕೊಟ್ಟು ಮನುಷ್ಯನ ಜೀವನವನ್ನು ಮುಂದುವರೆಸುವಂತೆ ಮಾಡುವ ಕಾಲ. ಒಂದು ಇನ್ನೊಂದಾಗಿ ಪರಿವರ್ತನೆಗೊಳ್ಳುವ ಕಾಲ. ಇದನ್ನೇ 'ಸಂಕ್ರಮಣ' ವೆನ್ನುತ್ತೇವೆ. 'ಸಂಕ್ರಾಂತಿ' ಎನ್ನುತ್ತೇವೆ.

ಈ 'ಸಂಕ್ರಮಣ'ಕಾಲವನ್ನು ಸೂರ್ಯ ಮಕರರಾಶಿಗೆ ಪ್ರವೇಶಿಸುವ ದಿನವನ್ನು ಶಾಸ್ತ್ರೀಯವಾಗಿ ಕಂಡುಕೊಂಡು, ಆ ದಿನವನ್ನು 'ಸಂಕ್ರಾಂತಿ' ಎಂದು ನಮ್ಮ ನಾಡಿನಲ್ಲಿ ಆಚರಿಸುತ್ತೇವೆ. ಇದು 'ಎಳ್ಳು ಕೊಟ್ಟು ಒಳ್ಳೆ ಮಾತನಾಡುವ' ದಿನ. 'ನಾಗರೀಕತೆ'ಯಿಂದಾಗಿ ಪ್ರಕೃತಿಯಿಂದ ದೂರವಾದವರೂ ಈದಿನ ಪ್ರಕೃತಿಯೊಡನೆ ಸಾಂಕೇತಿಕವಾಗಿಯಾದರೂ ಬೆರೆತು, ಒಂದಾಗಿ ನಲಿಯಲು ವನಭೋಜನ ಮಾಡುವ ದಿನವೂ ಹೌದು.

ಸಂಕ್ರಾಂತಿ ಹಬ್ಬದ ದಿನವೇ ಉತ್ತರಾಯಣವೂ ಪ್ರಾರಂಭವಾಗುತ್ತದೆ. ಆದರೆ, ಈ ಉತ್ತರಾಯಣ ಕಾಲದ ಎಣಿಕೆಯಲ್ಲಿ ಈಗ ಸಂಕ್ರಾಂತಿಗಿಂತ ಮುಂಚೆಯೇ ಬಂದು ಬಿಡುತ್ತದೆ. ಜೊತೆಜೊತೆಯಾಗಿ ಪ್ರಾರಂಭವಾಗುತ್ತಿದ್ದುದು ಈಗ ಹಿಂಚು ಮುಂಚಾಗಿದೆ. ಶಾಸ್ತ್ರವು ಸಂಕ್ರಾಂತಿ ಮತ್ತು ಉತ್ತರಾಯಣ ಕಾಲವನ್ನು ಬೇರ್ಪಡಿಸಿದರೂ ಅದು ಸಂಕ್ರಾಂತಿಯಂದೇ ಪ್ರಾರಂಭವಾಗುತ್ತದೆಂದು ಪುರಾಣ ಅಥವಾ ಆಚರಣೆ ತಿಳಿಸುತ್ತದೆ. ಹೀಗೆ ಶಾಸ್ತ್ರ ಮತ್ತು ಪುರಾಣ ಬೇರೆ ಬೇರೆಯಾಗಿದೆ.

ಈ 'ಸಂಕ್ರಾಂತಿ' ಎಳ್ಳು ಬೀರುವ ಹಬ್ಬ, ಆದರೂ ಯಾರೂ ಕೇವಲ ಎಳ್ಳನ್ನು ಮಾತ್ರ ಬೀರುವುದಿಲ್ಲ. ಎಳ್ಳಿನ ಜೊತೆ ಹುರಿಗಡಲೆ, ನೆಲಗಡಲೆ, ಕೊಬ್ಬರಿ, ಬೆಲ್ಲ, ಜೀರಿಗೆಕಾಳು ಸೇರಿದ ಪೆಪ್ಪರಮಿಂಟ್ ಸೇರಿಸಿ, ಕಬ್ಬಿನ ತುಂಡಿನೊಡನೆ, ಮನೆ ಮನೆಗೆ ಹಂಚಿ, ಸಡಗರದಿಂದ ತಮ್ಮ ಮುಂದೆ ಬರುವ ವರ್ಷ ಸುಖದಿಂದಿರಲಿ ಎಂದು ಆಶಿಸುವ ದಿನ. ಹೊಸ ಅಕ್ಕಿ-ಬೆಲ್ಲ ಬಳಸಿ ಹುಗ್ಗಿಯನ್ನು ಮಾಡಿ ಹಿಗ್ಗುವ ದಿನ. ಇಷ್ಟೆಲ್ಲ ಇತರ ಧಾನ್ಯಗಳನ್ನು ಬೆರೆಸಿದರೂ ಇದನ್ನು 'ಎಳ್ಳು' ಎಂದೇ ಕರೆಯುತ್ತೇವೆ. ಇದರ ಹಿಂದೆ ಎಳ್ಳಿಗೆ ಇರುವ ಮಹತ್ವವನ್ನು ನಾವು ಗಮನಿಸಬೇಕು. ಎಳ್ಳು ಇಲ್ಲದೆ ಸಂಕ್ರಾಂತಿ ಹಬ್ಬ ಇಲ್ಲ.

ಇಂದೇ ರೈತರು ತಾವು ಸಾಕಿದ ದನಗಳನ್ನು ಕಿಚ್ಚುಹಾಯಿಸುವ ದಿನ. ದನಗಳಿಗೆ ಮೈತೊಳೆದು ಬಣ್ಣಗಳಿಂದ ಶೃಂಗರಿಸಿ ದಾರಿಯ ಅಡ್ಡಕ್ಕೆ ಒಂದು ಗೆರೆಯಾಗಿ ಬರುವಂತೆ ಹುಲ್ಲು ಇತ್ಯಾದಿಗಳನ್ನು ಇಟ್ಟು ಬೆಂಕಿಹಚ್ಚಿಸಿ ದನಗಳನ್ನು ಓಡಿಸಿಕೊಂಡು ಬಂದು ಆ ಬೆಂಕಿಯ ನಡುವೆ ಹಾರಿಸಿಕೊಂಡು ಒಡುತ್ತಾರೆ. ಇದೂ ಸಹ ಹಳೆಯ ಕಾಲದ ಗೆರೆಯನ್ನು ದಾಟಿ ಹೊಸ ಕಾಲಕ್ಕೆ ಕಾಲಿಡುವಂತೆ ಮಾಡುವ ಸಾಂಕೇತಿಕ ಕ್ರಿಯೆ.

ಅಷ್ಟೇ ಅಲ್ಲ, ನಮ್ಮ ಜನಪದರು ತಮ್ಮ ಕಣದಲ್ಲಿ ಶೇಖರಿಸಿದ ದವಸ ಧಾನ್ಯಗಳನ್ನು ಒಟ್ಟುಗೂಡಿಸಿ, ಪೂಜೆಮಾಡಿ, ಕೋಲಾಟ, ನೃತ್ಯಗಳನ್ನು ಮಾಡುತ್ತಾರೆ. ಇದು ಹಿಂದೆ ಮನುಷ್ಯ ತನ್ನ ಬೇಟೆಯ ಕಾಲದಲ್ಲಿ ಸಿಕ್ಕ ಪ್ರಾಣಿಗಳ ಮುಂದೆ ನರ್ತನ ಮಾಡುವುದನ್ನು ಜ್ಞಾಪಕಕ್ಕೆ ತರುತ್ತದೆ. ಅಷ್ಟೇ ಅಲ್ಲದೆ, ತಮ್ಮ ಜೀವದ ಉಳಿವಿಗಾಗಿ ಪ್ರಕೃತಿ ಅಥವಾ ಭೂಮಿತಾಯಿ ತಮಗೆ ಕರುಣಿಸಿದ ವಸ್ತುಗಳೆಂದು ವಂದಿಸುತ್ತಾರೆ. ಅಂತೆಯೇ ನಮ್ಮ ಕಣದ ಪೂಜೆಯೂ. ಅಂದು ಭೂಮಿತಾಯಿಯನ್ನು ನೋಯಿಸಿದ್ದಕ್ಕಾಗಿ ಕಣ್ಣಿಗೊತ್ತಿಕೊಂಡು ಕ್ಷಮೆಯಾಚಿಸುತ್ತಾರೆ.

ಇದಕ್ಕಾಗಿಯೇ—

"ಹೊತ್ತಾರೆ ಎದ್ದು ನಾ ಯಾರ್ಯಾರ ನೆನೆಯಾಲಿ
ಎಳ್ಳು-ಜೀರಿಗೆ ಬೆಳೆಯೋಳ । ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನ ॥"

ಎಂದು ಹಾಡುತ್ತಾರೆ. ಇಲ್ಲಿ ಎಳ್ಳು ಸಾವಿಗೆ ಸಂಕೇತವಾದರೆ, ಜೀರಿಗೆ ಬದುಕಿಗೆ, ಶುಭಕ್ಕೆ ಸಂಕೇತವಾಗುತ್ತದೆ.

ಭಾಷೆಯಲ್ಲಿ ಒಂದು ಪದಕ್ಕೆ ಒಂದೇ ಅರ್ಥವು ಹೇಗೆ ಇರುವುದಿಲ್ಲವೋ ಅಂತೆಯೇ ಸಂಸ್ಕೃತಿಯಲ್ಲಿ ಒಂದು ವಸ್ತುವಿಗೆ ಒಂದೇ ಅರ್ಥವಿರುವುದಿಲ್ಲ—ನಾನಾ ಅರ್ಥಗಳಿರುತ್ತವೆ. ಎಳ್ಳಿಗೂ ಹಾಗೇ. ಎಳ್ಳನ್ನು ಫಲವಂತಿಕೆಯ ಸಂಕೇತವನ್ನಾಗಿಯೂ ಉಪಯೋಗಿಸುತ್ತಾರೆ. ಎಳ್ಳಿಗೂ ಸಾವಿಗೂ ಇರುವ ಸಂಬಂಧ 'ಎಳ್ಳು-ನೀರು ಬಿಡು' ಎಂಬ ಸಂಬಂಧ ಕಳೆದುಕೊಳ್ಳುವ ನುಡಿಯಾಗಿಯೂ ಬಳಕೆಯಲ್ಲಿದೆ. ಅದಕ್ಕಾಗಿ ಸತ್ತವರಿಗೆ ಎಳ್ಳಿನ ತರ್ಪಣ ಬಿಡುವ ಕ್ರಿಯೆ ಇದೆ. ಶ್ರಾದ್ಧದ ದಿನ ಪಿಂಡಕ್ಕೆ ಎಳ್ಳನ್ನು ಬೆರೆಸುವುದನ್ನು ಕಾಣುತ್ತೇವೆ. ಇದಕ್ಕೆ ಒಂದು ವಿಶಿಷ್ಟ ಅರ್ಥವೂ ನಮ್ಮಲ್ಲಿದೆ. ಸಾಯುವುದೆಂದರೆ ಆತ್ಮವು ಕೇವಲ ದೈಹಿಕವಾದ ಅಂಗಾಂಗಗಳನ್ನು ಬಿಟ್ಟು ಪ್ರಕೃತಿಯಲ್ಲಿ ಲೀನವಾಗುವುದು ಎಂಬುದು ನಮ್ಮ ನಂಬಿಕೆ. ಹೀಗೆ ಅವಸ್ಥಾಂತರಗೊಳ್ಳುವ ಕ್ರಿಯೆಯನ್ನು ಸೂಚಿಸುವುದೇ ಇಲ್ಲಿಯೂ ಎಳ್ಳಿನ ಮಹತ್ವ. ಎಳ್ಳನ್ನು ಪ್ರಧಾನ ಮಾಡಿದರೆ ಸತ್ತವನ ಆತ್ಮಕ್ಕೆ ಹೊಸ ಅಂಗಾಂಗಗಳು ಮೂಡಿಬರುತ್ತವೆ ಎಂಬ ನಂಬಿಕೆ. ಆದ್ದರಿಂದ ಈ ಕ್ರಿಯಾವಿಧಾನದಲ್ಲೂ ಎಳ್ಳು ಸಂಕ್ರಮಣ ಅಥವಾ ಬದಲಾವಣೆಯನ್ನು ಸೂಚಿಸುತ್ತದೆ.

ಅಂತೆಯೇ, ನಮ್ಮಲ್ಲಿ ಹೊಸದಾಗಿ ಮೈನೆರೆದ ಬಾಲಕಿಯರಿಗೆ ಎಳ್ಳಿನಿಂದ ಮಾಡಿದ ತಿನಿಸುಗಳನ್ನು ಕೊಟ್ಟು ಉಪಚರಿಸುವ ಕ್ರಿಯೆಯನ್ನು 'ಋತುಮತಿ' ಯಾಗುವುದು ಎಂದು ಕರೆಯುತ್ತೇವೆ. ಈ ದೈಹಿಕ ಬದಲಾವಣೆ ಅಥವಾ ಸ್ಥಿತ್ಯಂತರವನ್ನು ಹುಡುಗಿ ಹೆಣ್ಣಾಗಿ ಪರಿವರ್ತನೆಗೊಳ್ಳುತ್ತಿರುವ ಅವಧಿಯನ್ನು ಸೂಚಿಸಲು

ಎಳ್ಳನ್ನು ಸಾಂಕೇತಿಕವಾಗಿಯೂ ಬಳಸುತ್ತೇವೆ.

ಉಪನಯನದಂದು ಬಾಲಕ ತಾನು 'ದ್ವಿಜ'ನಾಗುವ ಕ್ರಿಯೆಯ ಸ್ಥಿತ್ಯಂತರವನ್ನು ಸೂಚಿಸಲೂ ಎಳ್ಳನ್ನು ಬಳಸುತ್ತಾರೆ. ಗೃಹಸ್ಥಾಶ್ರಮಕ್ಕೆ ಕಾಲಿಡುವಾಗಲೂ ಸೃಷ್ಟಿಯ ಸಂಕೇತವಾಗಿ, ಸಂಕ್ರಮಣಾವಸ್ಥೆಯನ್ನು ಸೂಚಿಸಲೂ ಎಳ್ಳನ್ನು ಬಳಸುತ್ತೇವೆ.

ಇಷ್ಟೇ ಅಲ್ಲ. ಮಹಾಭಾರತದ ಭೀಷ್ಮ ತನ್ನ ಪ್ರಾಣತ್ಯಾಗ ಮಾಡಲು ಈ ಉತ್ತರಾಯಣ ಪುಣ್ಯಕಾಲಕ್ಕಾಗಿ ಶರಶಯ್ಯೆಯಲ್ಲಿ ಮಲಗಿ ತನ್ನ ಸಾವನ್ನು ಮುಂದೂಡಿಕೊಳ್ಳುತ್ತಾನೆ. ತನ್ನ ಜೀವಾತ್ಮ ಪರಮಾತ್ಮನಲ್ಲಿ ಲೀನವಾಗುವ ಪರಿವರ್ತನೆಗಾಗಿ, ಕಾಯುವ ಕಾಲವಾಗಿ ಪರಿವರ್ತಿಸಿಕೊಳ್ಳುತ್ತಾನೆ.

ಎಳ್ಳು ಕೇವಲ ಸಂಕ್ರಾಂತಿ ಹಬ್ಬಕ್ಕೆ ಮಾತ್ರವಿಲ್ಲ. ಯಾವುದೇ ಅಮಾವಾಸ್ಯೆಯ ದಿನವೂ ಎಳ್ಳು-ನೀರಿನ ಅರ್ಘ್ಯ ಕೊಡಬಹುದು. ಇಲ್ಲಿ ಆದಿನ ಚಂದ್ರ ಸಂಪೂರ್ಣವಾಗಿ ಕಾಣೆಯಾಗಿದ್ದಾಗ ಆತ ಮತ್ತೆ ಮೂಡಿಬರಲಿ, ಅವನ ಅಂಗಾಂಗಗಳು ವೃದ್ಧಿಯಾಗಲಿ. ಅಂತೆಯೇ ತಮಗೆ ಹೊಸ ಜೀವನ ಬರಲಿ ಎಂಬ ಅರ್ಥವೂ ಇದೆ.

ಹಿಂದೆ ಜಮದಗ್ನಿಯ ಮಗ ಪರಶುರಾಮ, ತಂದೆಯ ಆಜ್ಞೆಯಂತೆ ತಾಯಿಯ ಶಿರಚ್ಛೇದನ ಮಾಡಿ, ಆ ಪಾಪವನ್ನು ಕಳೆದುಕೊಳ್ಳಲು ತನ್ನ ರಕ್ತ ಸಿಕ್ತ ಕೊಡಲಿಯನ್ನು ಹೊತ್ತುಕೊಂಡು ಅಲೆದಾಡುತ್ತಾ ತುಂಗಾನದಿಗೆ ಬಂದ. ಅಲ್ಲಿ ನದಿ ಮಧ್ಯದ ಬಂಡೆಯ ಮೇಲೆ ತನ್ನ ಕೊಡಲಿಯನ್ನು ಇಟ್ಟು ನಿದ್ದೆ ಹೋದ, ಹಾಗೆ ನಿದ್ದೆ ಹೋದಾಗ ಕೊಡಲಿ ಜಾರಿ ನದಿಗೆ ಬಿದ್ದು ದೊಡ್ಡ ಹಳ್ಳವನ್ನೇ ನಿರ್ಮಿಸಿತು. ಪರಶುರಾಮ ಕೊಡಲಿಯನ್ನು ಹುಡುಕಿ ತೆಗೆದು ನೋಡಿದಾಗ ಕೊಡಲಿಗಂಟಿದ್ದ ರಕ್ತ ತೊಡೆದು ಹೋಗಿತ್ತು. ಅಂದು ತನ್ನ ಪಾಪವನ್ನು ಕಳೆದುಕೊಂಡು, ಆತ ಹೊಸ ಬದುಕಿನೆಡೆಗೆ ಪರಿವರ್ತನೆಯನ್ನು ಪಡೆಯುವ, ರೂಪಾಂತರ ಹೊಂದುವ, ಸ್ಥಿತ್ಯಂತರ ಹೊಂದುವ ದಿನವನ್ನು ಇಂದೂ ತೀರ್ಥಹಳ್ಳಿಯಲ್ಲಿ 'ಎಳ್ಳಮಾಸೆ'ಎಂದು ಆಚರಿಸುತ್ತಾರೆ.

ಹೀಗೆ 'ಎಳ್ಳು' ಪರಿವರ್ತನೆಯ, ಸಂಕ್ರಮಣದ ಸಂಕೇತವಾಗಿ ನಮ್ಮ ಜೀವನದ ಉದ್ದಕ್ಕೂ, ಸಂಸ್ಕೃತಿಯ ಪ್ರತೀಕವಾಗಿ ಕಾಣುತ್ತಲೆ ಬಂದಿದೆ. ಎಳ್ಳು ನಮ್ಮ ಜೀವನದಲ್ಲಿ ಬೆರೆತುಹೋಗಿದೆ. ತಿಲದಲ್ಲಿರುವ ತೇಜ ಜೀವನೋತ್ಕರ್ಷವಾಗಿ ಬೆಳಕಾಗುವ ಕಾಣ್ಕೆಯಾಗಿದೆ.

ನೀವು ಒಳ್ಳೆಯ ಕೃತಿಗಳನ್ನು ಮಾಡದಿದ್ದರೂ ಚಿಂತೆಯಿಲ್ಲ, ಒಳ್ಳೆಯ ಕೃತಿಗಳನ್ನು ಮಾಡುವವರನ್ನು ಟೀಕಿಸಬೇಡಿ.

—ಆ್ಯಡಿಸನ್

ತುಂಟ ಮಕ್ಕಳು ಒಡ್ಡುವ ಸಮಸ್ಯೆಗಳು

ಪಿ. ಮಂಜುಳಾದೇವಿ

ಬಳಲಿ ಬೆಂಡಾಗಿದ್ದ ತರುಣ ತಾಯಿಯೊಬ್ಬಳು ಒಮ್ಮೆ ನನ್ನ ಬಳಿಗೆ ಬಂದಳು. ಅವಳ ದೂರು ಹೀಗಿತ್ತು : "ನನ್ನ ಎರಡು ವರ್ಷದ ಮಗ ಆಹಾರ ಸೇವನೆಯಲ್ಲಿ ಆಸಕ್ತಿ ತೋರುತ್ತಿಲ್ಲ. ಒಂದು ಚಮಚೆಯಷ್ಟು ತಿನ್ನಲು ಒಂದು ಗಂಟೆಯಷ್ಟು ಕಾಲವ್ಯಯ ಮಾಡುತ್ತಾನೆ. ಊಟ ಮಾಡಲು ಮತ್ತಷ್ಟು ಸಮಯ ತೆಗೆದುಕೊಳ್ಳುತ್ತಾನೆ." ಹುಡುಗ ಸಾಮಾನ್ಯ ಬೆಳವಣಿಗೆಯುವನಾಗಿದ್ದು, ತುಂಬಾ ಚಟುವಟಿಕೆಯುವನಾಗಿದ್ದುದರಿಂದ, ಅವನಿಗೆ ಸ್ವಲ್ಪ ಸ್ವಲ್ಪ ಬಡಿಸಿ ತಿನ್ನಲು ಸುಮಾರು ಇಪ್ಪತ್ತು ನಿಮಿಷ ಸಮಯ ನೀಡಿ, ಅವನ ಒಪ್ಪಿಗೆಗಾಗಿ ಕಾಯದೆ, ಆಹಾರದ ತಟ್ಟೆಯನ್ನು ಅವನಿಂದ ಬೇರ್ಪಡಿಸಬೇಕೆಂದು ಆಕೆಗೆ ತಿಳಿಸಿದೆ. [ನಡುನಡುವೆ ಕುರುಕು ತಿಂಡಿಗಳನ್ನು ಖಂಡಿತಾ ಕೊಡಬೇಡಿ ಎಂದು ಹೇಳಿಕಳುಹಿಸಿದೆ. ಈ ಸಮಸ್ಯೆ ಪರಿಹಾರವಾಗುವವರೆಗೆ] ಒಂದು ವಾರದ ಅನಂತರ ಆ ಹೆಂಗಸು ತನ್ನ ಮಗು ಆಹಾರವನ್ನು ಸಕ್ರಮವಾಗಿ ಸೇವಿಸುತ್ತಿದೆಯೆಂದು ತಿಳಿಸಿದಳು.

ಎಲ್ಲ ಮಕ್ಕಳ ಸಮಸ್ಯೆಗಳೂ ಇಷ್ಟು ಸುಲಭವಾಗಿ ಪರಿಹಾರವಾಗದಿದ್ದರೂ ಸಣ್ಣ ಮಕ್ಕಳಲ್ಲಿ ಸಾಮಾನ್ಯವಾಗಿ ಕಾಣಬರುವ ನಡವಳಿಕೆಯ ಸಮಸ್ಯೆಗಳನ್ನು ಬಗೆಹರಿಸಲು ಅನೇಕ ಪರಿಣಾಮಕಾರಿಯಾದ ಮಾರ್ಗಗಳಿವೆ. ಶಿಶು ವೈದ್ಯನಾಗಿ ನನ್ನ ನಲವತ್ತು ವರ್ಷಗಳ ಅನುಭವದಲ್ಲಿ ನನಗೆ ಎದುರಾದ ಮಕ್ಕಳ ನಡವಳಿಕೆಯ ಐದು ಸಮಸ್ಯೆಗಳನ್ನು ಅವುಗಳ ಪರಿಹಾರದ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಇಲ್ಲಿ ನಮೂದಿಸುತ್ತಿದ್ದೇನೆ.

ಹಸಿವು ಕಡಿಮೆಯಾಗಿರುವುದು : ಒಂದರಿಂದ ಮೂರು ವರ್ಷದ ಮಕ್ಕಳಲ್ಲಿ 'ಕಡಿಮೆ ಹಸಿವು' ಸಾಮಾನ್ಯವಾಗಿ ಕೇಳಿಬರುವ ತೊಂದರೆ. ಹೀಗಾಗಿ ಅವರ ಆಹಾರ ಸೇವನೆಯ ಕಡೆ ಗಮನ ಹರಿಸೋಣ. ತಂದೆ ತಾಯಂದಿರು ಮಗು ಕಡಿಮೆ ಆಹಾರ ಸೇವಿಸಿದರೆ ಆತಂಕಗೊಳ್ಳುತ್ತಾರೆ. ಮಗುವಿನ ಬೆಳವಣಿಗೆಗೂ ಆಹಾರ ಸೇವನೆಗೂ ಅಂತಹ ಸಂಬಂಧವೇನಿಲ್ಲ. ಅನುವಂಶಿಕವಾಗಿ ಮಾತಾಪಿತೃಗಳಲ್ಲಿ ಒಬ್ಬರು ಮಗುವಾಗಿದ್ದಾಗ

೧೯೯೫ ನೇ ಜನವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ಡಾ॥ ರಿಚರ್ಡ್ ಗೋಲ್ಡ್ ಬ್ಲೂಮ್ ಅವರ "ಹಾಟು ಹ್ಯಾಂಡಲ್ ಯುವರ್ ಡಿಫಿಕಲ್ಟ್ ಟಾಡ್ಲರ್" ಎಂಬ ಲೇಖನದ ಅನುವಾದ.

ಹೀಗಿದ್ದಿರಲೂ ಸಾಕು. ಮಗು ಸಾಮಾನ್ಯ ಬೆಳವಣಿಗೆ ಹೊಂದಿ ಚೂಟಿಯಾಗಿದ್ದಲ್ಲಿ ಆತಂಕ ಅನಾವಶ್ಯಕ. ಹೆಚ್ಚಾಗಿ ಹಾಲನ್ನು ಸ್ವೀಕರಿಸುವುದು ಹಸಿವು ಕಡಿಮೆಯಾಗುವುದಕ್ಕೆ ಕಾರಣವಾಗಿರಬಹುದು. ಒಂದು ವರ್ಷದ (೧೦ ಕಿಲೋ ತೂಕ) ಮಗು ಸಾವಿರ–ಸಾವಿರದಿನ್ನೂರು ಕ್ಯಾಲೊರಿಗಳನ್ನು ಬಳಸುತ್ತದೆ.ಅದು ಒಂದು ಲೀಟರ್ ಹಾಲು ಸೇವಿಸಿದಲ್ಲಿ ಶೇಕಡಾ ಅರವತ್ತರಷ್ಟು ಕ್ಯಾಲೊರಿಗಳಷ್ಟು ಆಹಾರ ಲಭ್ಯವಾಗುತ್ತದೆ. ಇತರ ಆಹಾರವನ್ನು ಅದು ಸೇವಿಸುವಂತಾಗಬೇಕಾದರೆ ಹಾಲು ಕಡಿಮೆ ಉಣಿಸಬೇಕು. ಇಲ್ಲವೇ ಹಾಲಿನಲ್ಲಿ ಕೊಬ್ಬಿನ ಅಂಶ ಕಡಿಮೆ ಇರುವಂತೆ ಮಾಡಬೇಕು. ಆಹಾರ ಸೇವನೆಯ ಸಮಯದಲ್ಲಿಮಗುವಿಗೆ ಬೇರೆ ಆಸೆಗಳನ್ನು ಬೆದರಿಕೆಗಳನ್ನು ಒಡ್ಡಿ ಉಣಿಸುವುದು ತಪ್ಪು. ಮಗುವಿನ ನಡೆವಳಿಕೆಯ ಕಾರಣ ತಿಳಿಯಲು ಯತ್ನಿಸಿ ಹೆಚ್ಚಿಗೆ ಗೊಣಗದೆ ಪರಿಹಾರದತ್ತ ಗಮನ ಕೊಡಿ.

ನಿದ್ರೆ ಮಾಡುವ ಸಮಯದಲ್ಲಿ ಕೊಡುವ ಕಾಟಗಳು : ಸಣ್ಣ ವಯಸ್ಸಿನ ಮಕ್ಕಳು ದಣಿವಾಗುವವರೆಗೂ, ಮಲಗಿ ನಿದ್ರಿಸುವ ಇಚ್ಛೆಯನ್ನು ತೋರುವುದಿಲ್ಲ. ಕೆಲವೊಮ್ಮೆ ಮಲಗಲು ವಿರೋಧ ವ್ಯಕ್ತಪಡಿಸುವುದು, ಮಧ್ಯೆ ಎಚ್ಚರಗೊಳ್ಳುವುದು, ಹಾಸಿಗೆ ಬಿಟ್ಟೇಳುವುದು ಮಾಡುತ್ತಾರೆ. ದಿನನಿತ್ಯದ ಈ ಸಮಸ್ಯೆ ಗಂಭೀರವಾಗಿ ಪರಿಣಮಿಸಬಹುದು. ನಾನು ಕಂಡಿರುವ ತಾಯಿತಂದೆಯರಲ್ಲಿ ಮೂರರಲ್ಲಿ ಒಂದು ಭಾಗ ತಮ್ಮ ಮಗುವಿಗೆ ನಿದ್ರೆಗೆ ಸಂಬಂಧಿಸಿದ ಸಮಸ್ಯೆ ಇದೆಯೆಂದು ದೂರುತ್ತಾರೆ. ಇವು ಅಂತಹ ಕೆಲವು ಸಮಸ್ಯೆಗಳು. ಮಕ್ಕಳ ದೈನಂದಿನ ಚಟುವಟಿಕೆಗಳು ಕ್ರಮಬದ್ಧವಾಗಿರುತ್ತವೆ. ಹೀಗಾಗಿ ಇದರೊಡನೆ ಹೊಂದಾಣಿಕೆಮಾಡಿಕೊಂಡು ಮಗು ಮಲಗುವ ಸಮಯವನ್ನು ನಿಯತಕ್ರಮವಾಗಿಸಿಕೊಳ್ಳಬಹುದು. ಇದು ಅತಿಮುಖ್ಯ. ಅನೇಕ ಮಕ್ಕಳು ಪದೇಪದೇ ಹಾಸಿಗೆ ಬಿಟ್ಟೆದ್ದು ಬೇರೆಯವರ ಬಳಿ ಹೋಗುವುದು, ನೀರು ಕೇಳುವುದು, ಎಚ್ಚತ್ತಿರಲು ಸಮಯ ಪಡೆಯಲು ಯತ್ನಿಸುವುದು ಮಾಡುತ್ತವೆ. ಇಂತಹ ಪರಿಸ್ಥಿತಿಯಲ್ಲಿ ತಕ್ಷಣವೇ ತಾಳ್ಮೆಯಿಂದ ಮತ್ತೆ ಹಾಸಿಗೆಯಲ್ಲೇ ಮಲಗುವಂತೆ ನೋಡಿಕೊಂಡಲ್ಲಿ ಈ ಕ್ರಮಕ್ಕೆ ಹೊಂದಿಕೊಂಡುಬಿಡುತ್ತವೆ.

ಆವೇಶದ ನಡವಳಿಕೆಗಳು : ನೆಲದ ಮೇಲೆ ಬಿದ್ದು ಕಿರಿಚುತ್ತಾ ಕೈಕಾಲು ಬಡಿದು ಆರ್ಭಟ, ಆವೇಗಗಳಿಂದ ಹಿಡಿತಕ್ಕೂ ಸಿಗದಿರುವಂತೆ ರಂಪಮಾಡುವ ಎರಡು ವರ್ಷ ವಯಸ್ಸಿನ ಮಗು ಇದೆಯೇನು? ತಂದೆ ತಾಯಂದಿರನ್ನು ಗೊಂದಲಕ್ಕೀಡು ಮಾಡಲು ಇದಕ್ಕಿಂತ ಗಂಭೀರವಾದ ಕಾರಣವೇನೂ ಬೇಕಿಲ್ಲ, ಇಂಥಹ ಸ್ಥಿತಿ ಅಲ್ಪ ಸಮಯದವರೆಗೆ ಮಾತ್ರ ಇರುತ್ತದೆ. ಯಾವುದೇ ಒಂದು ಸಣ್ಣ ಕಾರಣಕ್ಕಾಗಿ ಮಗು ಆಶಾಭಂಗಕ್ಕೆ ಒಳಗಾಗಿರಬಹುದು. ಅದರ ಸಣ್ಣ ಕೋರಿಕೆ ಈಡೇರಿಸಲ್ಪಡದೆ ಇರಬಹುದು. ಸುಮಾರು ಎರಡು ವರ್ಷದ ಮಗುವಿನಲ್ಲಿ ಈ ನಡವಳಿಕೆ ಸಾಮಾನ್ಯ. ಮೂರು ವರ್ಷವಾಗುವುದರಲ್ಲಿ ಇದು ತನ್ನಿಂದ ತಾನೇ ಮಾಯವಾಗುತ್ತದೆ. ಈ ಕಾಲದಲ್ಲಿ ಮಕ್ಕಳು ತಮ್ಮ ಹೆಚ್ಚುತ್ತಿರುವ ಚಟುವಟಿಕೆಗಳಲ್ಲಿ ತಾವೇ ತೊಡಗಿಸಿಕೊಳ್ಳು

ತ್ತಾರೆ ; ಹೊಸಹೊಸ ಪ್ರಯತ್ನ ಮಾಡುತ್ತಿರುತ್ತಾರೆ ; ಕೆಲವೊಮ್ಮೆ ಅವು ಗೆಲ್ಲಬಹುದು, ಕೆಲವೊಮ್ಮೆ ಅವು ಸೋಲಬಹುದು, ಕೆಲವು ಬಾರಿ ಮಕ್ಕಳ ಉದ್ವೇಗ ತಮ್ಮ ಇತಿಮಿತಿಗಳಿಗೆ ತೋರಿದ ಪ್ರತಿಕ್ರಿಯೆಯಾಗಿರುತ್ತದೆ. ಈ ಇತಿಮಿತಿಗಳು ತುಂಬ ಸಹಜವೇ ಆಗಿರಬಹುದು. ತಂದೆ ತಾಯಿಯರೇ ಇತಿಮಿತಿಗಳನ್ನು ಒಡ್ಡಿರಬಹುದು. ಮಕ್ಕಳ ಉದ್ವೇಗ ಇಂತಹ ಇತಿಮಿತಿಗಳಿಗೆ ಪ್ರತಿಕ್ರಿಯೆಯೂ ಆಗಿರುತ್ತದೆ. ಸಹಜ ಸಾಮಾನ್ಯ ಕೋಪ-ಉದ್ವೇಗಗಳನ್ನು ಬೇರ್ಪಡಿಸುವ ಸಂಗತಿಗಳೆಂದರೆ ಅವುಗಳು ಪುನರಾವರ್ತಿಸುವ ಕ್ರಮ ಮತ್ತು ತೀವ್ರತೆ. ಸಾಕಷ್ಟು ದೀರ್ಘಕಾಲದವರೆಗೆ ಮಗು ಈ ಬಗೆಯ ಕೋಪೋದ್ರೇಕಗಳಿಗೆ ಒಳಗಾಗುತ್ತಿದ್ದರೆ ಅದಕ್ಕೆ ಕೌಟುಂಬಿಕ ಒತ್ತಡಗಳೇ ಕಾರಣವಾಗಿರಬಹುದು. (ಉದಾ : ವಿಚ್ಛೇದನ, ಸಾವು, ಮನೆ ಬದಲಾವಣೆ ಇತ್ಯಾದಿ) ಮಕ್ಕಳ ಈ ಸಾಮಾನ್ಯ ಉದ್ವೇಗ ಸ್ಥಿತಿಯನ್ನು ವೈಯುಕ್ತಿಕ ಕೋಪವೆಂದುಕೊಳ್ಳಬಾರದು ಹಾಗೂ ಅದರ ಕಾರಣಗಳನ್ನು ಅರಸಲು ಹೋಗಬಾರದು. ಮಗುವಿನ ಆರ್ಭಟ ಆರಂಭವಾದಂತೆ ತಾಳ್ಮೆ ಕಳೆದುಕೊಳ್ಳುವ ಬದಲು ಶಾಂತವಾಗಿ ಪರಿಸ್ಥಿತಿಯನ್ನೆದುರಿಸಿ; ಮನೆಯ ಹೊರಗಾದಲ್ಲಿ, ಗದ್ದಲವಿಲ್ಲದೆಡೆ ಮಗುವನ್ನೊಯ್ದು ಆವೇಗ ಕಡಿಮೆಯಾಗಲು ಸಹಾಯಮಾಡಿ, ಮನೆಯಲ್ಲಾದರೆ, ಮಗುವನ್ನು ಏಕಾಂತವಾಗಿ ಅದರ ಕೋಣೆಯೊಳಗೆ ಕರೆದೊಯ್ದು ಬಾಗಿಲು ಹಾಕಿಕೊಂಡು ಬಂದರೆ ಮಗುವು ಅತ್ತು ಅತ್ತು ತಾನೇ ಶಾಂತವಾಗುತ್ತದೆ.

ಸುಳ್ಳು ಹೇಳುವಿಕೆ : ಮಕ್ಕಳು ಸತ್ಯ ಸಂಗತಿಯನ್ನು ಬದಲಾಯಿಸಿ ಹೇಳಿದಾಗ ತಂದೆತಾಯಂದಿರಿಗೆ ಗಾಬರಿಯಾಗುತ್ತದೆ. ಸುಳ್ಳುಹೇಳುವಿಕೆಯಲ್ಲಿ ಹಿರಿಯರ ಉದಾಹರಣೆ ಮಕ್ಕಳಿಗೆ ಮಾರ್ಗದರ್ಶಿಯಾಗಬಹುದಲ್ಲವೇ ? ಮಕ್ಕಳು ನೈಜತೆ ಹಾಗೂ ಕಲ್ಪನೆಗಳ ನಡುವಣ ವ್ಯತ್ಯಾಸವನ್ನು ಗುರುತಿಸಲಾರರು. ಅಸತ್ಯದಲ್ಲಿ ಅವರಿಗೆ ನೈತಿಕ ಜವಾಬ್ದಾರಿಯೆಂದೂ ಕಂಡುಬರುವುಲ್ಲ. ಇದು ಅಂತಹ ದೊಡ್ಡ ಸಮಸ್ಯೆಯೆನ್ನುವಂತಿಲ್ಲ. ತಂದೆತಾಯಿಗಳು ಸರಿಯಾದ ಮಾರ್ಗವನ್ನು ಹಾಕಿಕೊಡದೇ ಇದ್ದಲ್ಲಿ ಮಾತ್ರ ಇದು ಗಂಭೀರ ಸಮಸ್ಯೆಯಾಗಬಹುದು. ಬಿಚ್ಚು ಮನಸ್ಸಿನಿಂದ ಮಗುವಿನೊಡನೆ ಮಾತನಾಡುವುದು ಸುಳ್ಳು ಹೇಳುವ ಅಭ್ಯಾಸವನ್ನು ತಪ್ಪಿಸುತ್ತದೆ. ಸುಳ್ಳು ಹೇಳಿದಾಗ ಮಗುವನ್ನು ಕುರ್ಚಿಯಲ್ಲಿ ಕೂಡಿಸಿ ತಪ್ಪೊಪ್ಪಿಗೆಯನ್ನು ಪಡೆಯುವುದರಿಂದ ಯಾವ ಪ್ರಯೋಜನವೂ ಇಲ್ಲ. ಇದರಿಂದ ಮಗುವಿನ ನಡತೆ ಸರಿ ಹೋಗುವುದೂ ಇಲ್ಲ, ಸುಳ್ಳಿನಿಂದ ಆಗಬಹುದಾಗಿದ್ದ ಅಪಾಯವನ್ನು ಸ್ವಲ್ಪ ಮಟ್ಟಿಗೆ ನಿವಾರಿಸಬಹುದು. ಪ್ರಾಮಾಣಿಕತೆಗೆ ನೀವು ಹೆಚ್ಚಿನ ಬೆಲೆ ಕೊಡುತ್ತೀರಿ ಎಂಬ ಸಂಗತಿ ನಿಮ್ಮ ಮಕ್ಕಳಿಗೆ ಅರಿವಾಗುವಂತೆ ಮಾಡಿದರೆ ಸುಳ್ಳುಹೇಳುವಿಕೆ ಗಂಭೀರವಾದ ಸಮಸ್ಯೆಯಾಗುವ ಸಂಭವ ಕಡಿಮೆಯಾಗುತ್ತದೆ. ಮಕ್ಕಳು ದೊಡ್ಡವರಾದಂತೆ ಈ ಮೌಲ್ಯಗಳನ್ನು ಪಾಲಿಸುವ ಸಾಧ್ಯತೆ ಹೆಚ್ಚುತ್ತದೆ.

ಆಕ್ರಮಣಕಾರಿ ನಡವಳಿಕೆ : ಅನ್ಯರೊಡನೆ ಹೊಂದಿಕೊಂಡು ಹೋಗುವುದು

ಮಗು ನಡೆಯಲು ಕಲಿತಾಗಿನಿಂದ ಅಭ್ಯಾಸವಾಗಲಾರಂಭಿಸುತ್ತದೆ. ಆಟಗಳಲ್ಲಿ ತೊಡಗಿದಾಗ ಜೊತೆಗಾರರೊಂದಿಗೆ ಗುದ್ದಾಟ, ಕಿರುಚಾಟ ಮಾಡುವ ಪ್ರಸಂಗಗಳು ಎದುರಾಗುತ್ತವೆ. ಉದಾ : ಒಂದು ಬೊಂಬೆಗಾಗಿ ಕಿತ್ತಾಡುವುದು ; ಕೆಲವೊಮ್ಮೆ, ಇನ್ನೊಂದು ಮಗುವನ್ನು ಹೊಡೆಯುವುದು. ಮಗು ಕಲಿತುಕೊಳ್ಳಬೇಕಾದ ಮುಖ್ಯ ಪಾಠವೆಂದರೆ ಇತರರೊಂದಿಗೆ ಹಂಚಿಕೊಳ್ಳುವುದು. ಎಲ್ಲ ಮಕ್ಕಳೂ ಈ ಪಾಠವನ್ನು ಅಷ್ಟೇ ಬೇಗ ಅಥವಾ ಅಷ್ಟೇ ಚೆನ್ನಾಗಿ ಕಲಿಯದಿರಬಹುದು. ಒಂದು ವರ್ಷದ ಮಗುವಿನಲ್ಲಿ ಮೊದಲಿಗೆ ಚಾತುರ್ಯವೆಂದೋ, ಕ್ಷಮ್ಯವಾದುದೆಂದೋ ತೋರಬಹುದಾದ ಸಂಗತಿ ಮುಂದೆ ಆಕ್ರಮಣಕಾರಿ ನಡವಳಿಕೆಯಾಗಿ ಪರಿಣಮಿಸುತ್ತದೆ. ಈ ಮನೋಭಾವ ಇರುವ ಮಕ್ಕಳು ಹೊರಾಂಗಣ ಕ್ರೀಡೆಗಳನ್ನು ಇಷ್ಟಪಡುತ್ತಾರೆ. ಏನೇ ಆದರೂ ಈ ಸಮಸ್ಯೆಗೆ, ಮಕ್ಕಳು ಅನ್ಯರೊಡನೆ ಬೆರೆಯುವವರೆಗೆ, ಸೂಕ್ತ ಮೇಲ್ವಿಚಾರಣೆ ಅಗತ್ಯ.

ಮಕ್ಕಳನ್ನು ದಿಗ್ಬಂಧನಕ್ಕೆ ಒಳಪಡಿಸುವ ತಂತ್ರವನ್ನು ಕೆಲವು ತಾಯಿತಂದೆಯರು ಚೆನ್ನಾಗಿ ಬಳಸಿಕೊಳ್ಳುತ್ತಿರುವ ವಿಚಾರ ನನಗೆ ಗೊತ್ತಿದೆ. ಯಾವುದೇ ಒಂದು ದುರ್ನಡತೆಗಾಗಿ ಮಗುವನ್ನು ಬಾಹ್ಯ ಸಂಪರ್ಕವಿಲ್ಲದೆ ಕೆಲಸಮಯದವರೆಗೆ (ಮಗುವಿನ ವಯಸ್ಸಿಗನುಗುಣವಾಗಿ–ವರ್ಷವೊಂದಕ್ಕೆ ೧ ನಿಮಿಷದಂತೆ) ನಿಶಬ್ದವಾಗಿ ಕೂಡುವಂತೆ ಮಾಡಬೇಕು. ಈ ಶಿಕ್ಷೆ ಮುಗಿದ ಅನಂತರ ಆ ಬಗ್ಗೆ ಚರ್ಚಿಸಬಾರದು. ತಂದೆ ತಾಯಿಗಳು ಈ ಬಗೆಯ ಲಕ್ಷ್ಮಣರೇಖೆಯನ್ನು ನಿರ್ಮಿಸಬೇಕು. ತಮ್ಮ ಯಾವುದೇ ಕ್ರಿಯೆ ಹಿರಿಯರಲ್ಲಿ ಒಂದೇ ತರಹದ ಪ್ರತಿಕ್ರಿಯೆ ಉಂಟುಮಾಡುತ್ತದೆಂದು ಅರಿತು ಮಕ್ಕಳು ಸ್ಥೈರ್ಯ, ನೆಮ್ಮದಿಗಳನ್ನು ಪಡೆಯುತ್ತಾರೆ. ಈ ಬಗ್ಗೆ ತಂದೆ ತಾಯಿಗಳಲ್ಲಿ ಒಮ್ಮತವಿಲ್ಲದಿದ್ದಲ್ಲಿ ಮಕ್ಕಳ ನಡವಳಿಕೆ ಒಬ್ಬೊಬ್ಬರೊಡನೆ ಒಂದೊಂದು ರೀತಿಯಾಗಿ ಬಿಡಬಹುದು. ಮಗು ಅರ್ಥಮಾಡಿಕೊಳ್ಳಲು ಸಮರ್ಥವಾಗಿದ್ದರೆ ಮುಂಚಿತವಾಗಿಯೇ ಅಂತಹ ಸಂಗತಿಗಳನ್ನು ತಿಳಿಯಹೇಳಬೇಕು; ಹಾಗೂ ನಿರ್ದಿಷ್ಟ ದುರ್ವರ್ತನೆಯ ಸಂದರ್ಭಗಳಲ್ಲಿ ಇದನ್ನು ಬಳಸಬೇಕು. ಮೊದಲ ಹೆಜ್ಜೆಯೆಂದರೆ ಮನೆಯಲ್ಲಿ ಬೇಸರ ತರಿಸುವಂತಹ ಜಾಗವನ್ನು ಇದಕ್ಕಾಗಿ ಆರಿಸಬೇಕು. ಮೂಲೆಗೆ ಎದುರಾಗಿ ಹಾಕಿರುವ ಕುರ್ಚಿ ಇದಕ್ಕೆ ಬಹು ಸೂಕ್ತ. ಮಗುವು ಇದನ್ನರಿತು ಸನ್ನಡೆಯತ್ತ ಸಾಗುವಂತಾಗುತ್ತದೆ. ಇದರಿಂದ ಇದು ನಡವಳಿಕೆಯ ಗಂಭೀರ ಸಮಸ್ಯೆಯಾಗುವುದು ತಪ್ಪುತ್ತದೆ. ತಂದೆ ತಾಯಿಗಳು ಯಾವುದಾದರೂ ಒತ್ತಡದಲ್ಲಿದ್ದಾಗ (ಹಣಕಾಸಿನ ಸಮಸ್ಯೆಗಳು ಕೆಲಸದ ತೊಂದರೆಗಳು ಅಥವಾ ಇತರ ಸಂಗತಿಗಳು) ತಮ್ಮ ಮಕ್ಕಳ ಬಗ್ಗೆ ಸಣ್ಣ ವಿಷಯಗಳಿಗೂ ತಾಳ್ಮೆ ಕಳೆದುಕೊಳ್ಳುತ್ತಾರೆ. ಮಕ್ಕಳ ಬಗೆಗಿನ ಹೊಗಳಿಕೆ/ತೆಗಳಿಕೆ ಶಿಕ್ಷೆ/ಬಹುಮಾನ ಇವುಗಳು ಸಾಧ್ಯವಾದಷ್ಟೂ ಸಮತೋಲಿತವಾಗಿರುವಂತೆ ಹಿರಿಯರು ಅರಿವಿನಿಂದ ವರ್ತಿಸಬೇಕು. ಪ್ರತಿ ಮಗುವಿಗೂ ತನ್ನತನದ ಮಹತ್ವದ ಅರಿವುಂಟಾಗಲು ಹಿರಿಯರು ಅವರಿಗಾಗಿ ಕೆಲ ಸಮಯ ಮೀಸಲಿಡಬೇಕು. ಉದಾ:-ಹಿಂದಿನ

ದಿನದ ಕಾರ್ಯ ಚಟುವಟಿಕೆಗಳನ್ನು ಒರೆ ಹಚ್ಚಿ ನೋಡುವುದು. ಮರುದಿನದ ಕಾರ್ಯ ಕ್ರಮಗಳ ಬಗ್ಗೆ ಚರ್ಚಿಸುವುದು ಇತ್ಯಾದಿ.

ಇವೆಲ್ಲಾ ಪಾಕಶಾಸ್ತ್ರ ಪುಸ್ತಕದಂತೆ. ಸಿದ್ಧಪಡಿಸಿದ ಪರಿಹಾರಗಳಲ್ಲ. ಅನೇಕ ಸಂದರ್ಭಗಳಲ್ಲಿ ಅವು ಕೇವಲ ಮಾರ್ಗದರ್ಶಿಯಾಗಬಲ್ಲವು. ಒಂದೇ ಒಂದು ಸೂತ್ರ ಎಲ್ಲರಿಗೂ ಉಪಯುಕ್ತವಾಗುವುದಿಲ್ಲ. ಏಕೆಂದರೆ ಪ್ರತಿ ಮಗು, ಪ್ರತಿ ಸಂಸಾರ ವಿಶಿಷ್ಟವಾಗಿರುವುದರಿಂದ ಮಕ್ಕಳ ಸಮಸ್ಯೆಗಳಿಗೆ ಪರಿಹಾರವನ್ನು ಸಾಂಸಾರಿಕ ವಾತಾವರಣ ಮತ್ತು ಪರಿಸ್ಥಿತಿಗಳಿಗೆ ಅನುಗುಣವಾಗಿ ಕಂಡುಕೊಳ್ಳುವುದು ವಿಹಿತ. ನಡವಳಿಕೆಯ ವಿಚಾರ ನಿಮ್ಮ ಕೈವಿಾರದಿರಲಿ, ಬೇಕೆನಿಸಿದಾಗ ಶಿಶುವೈದ್ಯರೊಡನೆ ಚರ್ಚಿಸಿ.



ನಮ್ಮ ಬೇಡಿಕೆಗಳು ಹೆಚ್ಚಾದಂತೆ ನಾವು ಬಡವರಾಗುತ್ತ ಹೋಗುತ್ತೇವೆ. ಆದ್ದರಿಂದ ಶ್ರೀಮಂತರಾಗಲು ಉತ್ತಮ ಉಪಾಯ ನಮ್ಮ ಬೇಡಿಕೆಗೆ ಮಿತಿ ಹಾಕುವುದು.

—ವ್ಹೇಟ್ಲ

ಸ್ವಾರ್ಥರಹಿತವಾದ ಉಪದೇಶಗಳನ್ನು ಕೊಡುವವರೆಲ್ಲರೂ ಅಜರಾಮರರಾಗುತ್ತಾರೆ. ತೋರಿಕೆಗೆ ಬೋಧನೆ ನೀಡುವವರೆಲ್ಲ ಸತ್ತ ನಂತರವಾದರೂ ನಗೆಗೀಡಾಗುತ್ತಾರೆ.

—ಈಸೋಪ

ಧೀಮಂತ ಸಮಾಜ ಸುಧಾರಕ ಹಾಗೂ ಸ್ವಾತಂತ್ರ್ಯ ಹೋರಾಟಗಾರ—ಹೆಚ್. ಸಿ. ದಾಸಪ್ಪ

ಇಂದಿರಾ ಬಿ. ಪಿ.

ಖ್ಯಾತ ಸಮಾಜ ಸುಧಾರಕ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ದಕ್ಷ ಆಡಳಿತಗಾರರಾದ ಶ್ರೀ ಹೆಚ್. ಸಿ. ದಾಸಪ್ಪನವರು ಡಿಸೆಂಬರ್ ೫, ೧೮೯೪ರಲ್ಲಿ ಮಡಿಕೇರಿಯಲ್ಲಿ ರಾವ್ ಸಾಹೇಬ್ ಚೆನ್ನಯ್ಯನವರ ಎರಡನೆಯ ಮಗನಾಗಿ ಜನಿಸಿದರು. ಆರಂಭದ ವಿದ್ಯಾಭ್ಯಾಸವನ್ನು ಮಡಿಕೇರಿಯಲ್ಲಿ ಮುಗಿಸಿದ ದಾಸಪ್ಪನವರು ಮುಂದೆ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿ, ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ. ಎ. ಪದವಿ ಪಡೆದರು· ಬೊಂಬಾಯಿ ವಿಶ್ವವಿದ್ಯಾನಿಲಯದಿಂದ ಎಲ್.ಎಲ್.ಬಿ. ಪದವಿ ಪಡೆದಮೇಲೆ ಮೈಸೂರಿಗೆ ಬಂದು ವಕೀಲಿ ವೃತ್ತಿಯನ್ನು ೧೯೧೯ರಲ್ಲಿ ಆರಂಭಿಸಿದರು. ದಾಸಪ್ಪನವರಿಗೆ ಚೆನ್ನಾಗಿ ಸಂಪಾದನೆಯಾಗುತ್ತಿದ್ದ ಈ ವಕೀಲವೃತ್ತಿಯೊಂದೇ ತೃಪ್ತಿಕೊಡಲಿಲ್ಲ. ಅಂದಿನ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಸಾಮಾಜಿಕ—ರಾಜಕೀಯ ಚಟುವಟಿಕೆಗಳಿಂದ ಪ್ರೇರಿತರಾಗಿ ಸಾರ್ವಜನಿಕ ಕ್ಷೇತ್ರವನ್ನು ಪ್ರವೇಶಿಸಿದರು.

ಈ ಹೊತ್ತಿಗಾಗಲೇ ಮದ್ರಾಸಿನಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಆರಂಭವಾಗಿತ್ತು. ಈ ಚಳುವಳಿಯು ಹಿಂದುಳಿದ ವರ್ಗಗಳ ಏಳಿಗೆಗಾಗಿ ಸರ್ಕಾರಿ ಕೆಲಸಗಳಲ್ಲಿ, ವಿದ್ಯಾ ಇಲಾಖೆಗಳಲ್ಲಿ ಮೀಸಲಾತಿ ನೀಡಬೇಕೆಂದು ಒತ್ತಾಯಪಡಿಸಲಾರಂಭಿಸಿತ್ತು. ಈ ಚಳುವಳಿ ಮೈಸೂರು ಸಂಸ್ಥಾನದ ಜನರ ಮೇಲೂ ಅಪಾರ ಪ್ರಭಾವ ಬೀರಿತು. ರಾವ್ ಸಾಹೇಬ್ ಚೆನ್ನಯ್ಯನವರು ಬ್ರಾಹ್ಮಣೇತರ ನಾಯಕರ ನಿಯೋಗದ ಮುಖಂಡತ್ವ ವಹಿಸಿಕೊಂಡು ಅಂದಿನ ದೊರೆಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಬಳಿ ಹೋಗಿ ಮನವಿ ಸಲ್ಲಿಸಿದರು. (೨೪ ಜನವರಿ ೧೯೧೮). ಹಿಂದುಳಿದ ವರ್ಗದವರಿಗೆ ಸರ್ಕಾರಿ ಸೇವೆಗಳಲ್ಲಿ ಸರಿಯಾದ ಅವಕಾಶ ಸ್ಥಾನಮಾನ ಸಿಗಬೇಕೆಂಬುದನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಬೇಕೆಂದು ಈ ನಿಯೋಗ ಮನವಿ ಮಾಡಿಕೊಂಡಿತು. ಮಹಾರಾಜರು ಸಮಿತಿಯನ್ನು ರಚಿಸಲು ಒಪ್ಪಿಗೆಯಿತ್ತು ಮಿಲ್ಲರ್ ಸಮಿತಿಯನ್ನು ನೇಮಿಸಿದರು. ರಾವ್ ಸಾಹೇಬ್ ಚೆನ್ನಯ್ಯನವರು ಈ ಸಮಿತಿಯ ಖಾಸಗಿ ಸದಸ್ಯರಾಗಿ ನೇಮಕಗೊಂಡರು. ಈ ಮಿಲ್ಲರ್

ಸಮಿತಿಯು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿದ್ದು, ಸರ್. ಎಂ. ವಿಶ್ವೇಶ್ವರಯ್ಯನವರು ಪ್ರತಿಭೆಗೆ ಒತ್ತು ನೀಡಬೇಕೆಂದು ಹೇಳಿ ದಿವಾನ್ ಹುದ್ದೆಗೆ ರಾಜೀನಾಮೆ ನೀಡಿದ್ದು ಐತಿಹಾಸಿಕ ಸಂಗತಿಯಾಗಿವೆ. ಆದರೆ ಹಿಂದುಳಿದ ವರ್ಗದ ಈ ಹೊಸ ಜಾಗೃತಿ ದಾಸಪ್ಪನವರ ವ್ಯಕ್ತಿತ್ವದ ಮೇಲೆ ವಿಶೇಷ ಪರಿಣಾಮ ಬೀರಿತು. ಹಿಂದುಳಿದ ವರ್ಗಗಳ ಏಳಿಗೆಗಾಗಿ ಪ್ರಜಾಮಿತ್ರ ಮಂಡಳಿ ಸ್ಥಾಪಿತವಾಯಿತು. ಸಿ. ಆರ್. ರೆಡ್ಡಿ, ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್, ಅರ್ಕಾಟ್ ಲಕ್ಷ್ಮಣಸ್ವಾಮಿಮೊದಲಿಯಾರ್ ಮುಂತಾದವರು ಈ ಚಳುವಳಿಯ ನಾಯಕರಾಗಿದ್ದರು. ಈ ನಾಯಕರಿಂದ ಪ್ರಭಾವಿತರಾಗಿ ದಾಸಪ್ಪನವರೂ ಹಿಂದುಳಿದ ವರ್ಗಗಳ ಚಳುವಳಿಯಲ್ಲಿ ಧುಮುಕಿದರು. ಮುಂದೆ ಹಿಂದುಳಿದ ವರ್ಗಗಳ ಬಗ್ಗೆ ಪ್ರಗತಿಪರ ದೃಷ್ಟಿಕೋನವುಳ್ಳ ಪ್ರಜಾಪಕ್ಷವನ್ನು ಸೇರಿದರು. ದಾಸಪ್ಪನವರು ಮೈಸೂರಿನ ಪೌರಸಭೆ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಚುನಾಯಿತರಾದರು. ಅವರು ಸುಮಾರು ೧೦ ವರ್ಷ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಹಾಗೂ ನ್ಯಾಯ ವಿಧಾಯಕ ಸಭೆಯಲ್ಲಿ ಒಂದು ಅವಧಿಯತನಕ ಇದ್ದರು. ಪ್ರಗತಿಪರ ಸುಧಾರಕ ಮನೋಭಾವವುಳ್ಳ ದಾಸಪ್ಪನವರು ಈ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಅನೇಕ ಪ್ರಗತಿಪರ ಮಸೂದೆಗಳನ್ನು ತರಲು ಬೆಂಬಲ ನೀಡಿದರು.

ಈ ಶತಮಾನದ ಆರಂಭದಲ್ಲಿ ಬಾಲ್ಯ ವಿವಾಹವನ್ನು ನಿರೋಧಿಸಲು, ವಿಧವಾ ವಿವಾಹವನ್ನು ಜಾರಿಗೆ ತರಲು, ಹೆಂಗಸರಿಗೆ ಆಸ್ತಿಯ ಹಕ್ಕುಗಳನ್ನು ನೀಡಲು ಹಾಗೂ ಇತರ ಸಮಾಜ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಲು ದೇಶದಾದ್ಯಂತ ತೀವ್ರ ಪ್ರಯತ್ನಗಳು ಚರ್ಚೆ ವಾಗ್ವಾದಗಳು ನಡೆಯುತ್ತಿದ್ದವು. ಮೈಸೂರು ಸಂಸ್ಥಾನದಲ್ಲೂ ಈ ಸುಧಾರಣಾ ಕ್ರಮಗಳನ್ನು ಜಾರಿಗೆ ತರುವ ಉದ್ದೇಶದಿಂದ ಮಸೂದೆಗಳನ್ನು ಹೊರಡಿಸಲು ಪ್ರಜಾಪ್ರತಿನಿಧಿ ಸಭೆ,ನ್ಯಾಯ ವಿಧೇಯಕ ಸಭೆಗಳಲ್ಲಿ ಚರ್ಚೆಗಳು ನಡೆದವು. ಹೆಚ್.ಸಿ. ದಾಸಪ್ಪನವರು ಹೆಣ್ಣು ಮಕ್ಕಳ ಹಾಗೂ ಗಂಡು ಮಕ್ಕಳ ವಿವಾಹದ ವಯಸ್ಸನ್ನು ಹೆಚ್ಚಿಸುವ ನ್ಯಾಯ ವಿಧೇಯಕ ಮಸೂದೆಯನ್ನು ಪ್ರಬಲವಾಗಿ ಸಮರ್ಥಿಸಿದರು. ದಾಸಪ್ಪನವರು ತತ್ವ ನಿಷ್ಠೆಯ ವ್ಯಕ್ತಿಯಾಗಿದ್ದು, ತಾವು ನಂಬಿದ ತತ್ವಗಳನ್ನು ಪ್ರಾಮಾಣಿಕವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಬಾಲ್ಯ ವಿವಾಹದ ತೀವ್ರ ವಿರೋಧಿಯಾಗಿದ್ದ ದಾಸಪ್ಪನವರು ೧೯೨೬ ರಲ್ಲಿ ತಮ್ಮ ೩೧ ನೇ ವಯಸ್ಸಿನಲ್ಲಿ ೨೧ ವರ್ಷದ ಯಶೋಧರಾ ಅವರನ್ನು ವಿವಾಹವಾದರು. ಯಶೋಧರಾ ಅಂದಿನ ಮತ್ತೊಬ್ಬ ಸಮಾಜ ಸುಧಾರಕರೂ ಥಿಯಾಸಾಫಿಸ್ಟ್ ಆಗಿದ್ದ ಕೆ.ಹೆಚ್. ರಾಮಯ್ಯ ಅವರ ಮಗಳು, ಪ್ರಜಾಪ್ರತಿನಿಧಿ ಸಭೆಯಲ್ಲಿ ದಾಸಪ್ಪನವರು ವಾದಿಸುತ್ತಾ ಮುಂದಿನ ಜನಾಂಗ ಸಶಕ್ತವಾಗಿ ಸದೃಢವಾಗಿರಬೇಕಾದರೆ ಬಾಲ್ಯ ವಿವಾಹ ಸಂಪೂರ್ಣವಾಗಿ ಹೋಗಬೇಕು. ಪುಟ್ಟ ಮಕ್ಕಳನ್ನು ಬೊಂಬೆಗಳಂತೆ ಭಾವಿಸಿ ಮದುವೆ ಮಾಡುವುದು ಅಪಚಾರ ಎಂದು ಕೊನೆಗೆ ಪ್ರಜಾಪ್ರತಿನಿಧಿಸಭೆಯಲ್ಲಿ ಸಾಕಷ್ಟು

ಚರ್ಚೆಗಳಾಗಿ ೧೯೩೭ ರ ಜೂನ್ ತಿಂಗಳಲ್ಲಿ ವಿವಾಹದ ವಯಸ್ಸನ್ನು ಹೆಚ್ಚಿಸುವ ಮಸೂದೆ ಜಾರಿಗೆ ಬಂದಿತು. ಇದೇ ರೀತಿ ದಾಸಪ್ಪನವರು ವಿಧವಾ ವಿವಾಹಕ್ಕೆ ಹಾಗೂ ಹೆಣ್ಣು ಮಕ್ಕಳಿಗೆ ಆಸ್ತಿ ನೀಡಬೇಕೆಂದು ವಾದಿಸಿದರು.

೧೯೩೮ರಲ್ಲಿ ಸಂಯುಕ್ತ ಪ್ರಜಾಪಕ್ಷ ಹಾಗೂ ಮೈಸೂರು ಕಾಂಗ್ರೆಸ್ ವಿಲೀನವಾದ ಮೇಲೆ ದಾಸಪ್ಪನವರು ಕಾಂಗ್ರೆಸ್ಸಿನ ಪ್ರಮುಖ ನಾಯಕರಾದರು. ಅದೇ ವರ್ಷ ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಮೊದಲ ಅಧಿವೇಶನವು ಶಿವಪುರದಲ್ಲಿ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಂಗ್ರೆಸ್ಸಿನ ತ್ರಿವರ್ಣ ಧ್ವಜ ಹಾರಿಸಬೇಕೆಂಬುದು ಈ ಅಧಿವೇಶನದ ಉದ್ದೇಶ. ಇದಕ್ಕೆ ಮೈಸೂರು ಸಂಸ್ಥಾನದ ಸರ್ಕಾರ ವಿರೋಧಿಸಿ ನಿಷೇಧಾಜ್ಞೆ ಹಾಕಿತ್ತು. ಶಿವಪುರದಲ್ಲಿ ಧ್ವಜ ಸತ್ಯಾಗ್ರಹವೇ ನಡೆಯಿತು. ಮೊದಲ ದಿನ ಟಿ. ಸಿದ್ಧಲಿಂಗಯ್ಯ, ಎಂ. ಎನ್. ಜೋಯಿಸ್ ಬಂಧಿತರಾದರು. ಎರಡನೆಯ ದಿನ ದಾಸಪ್ಪನವರು ಧ್ವಜಾರೋಹಣ ಮಾಡಿ ಬಂಧನಕ್ಕೊಳಗಾದರು. ಈ ಧ್ವಜ ಸತ್ಯಾಗ್ರಹ ಮೈಸೂರು ಸಂಸ್ಥಾನದಾದ್ಯಂತ ನಡೆಯಿತು. ದುರದೃಷ್ಟವಶಾತ್ ವಿದುರಾಶ್ವತ್ಥದಲ್ಲಿ ನಡೆದ ಗೋಲಿಬಾರಿನಿಂದಾಗಿ ಅಶಾಂತಿಯುತ ವಾತಾವರಣ ಏರ್ಪಟ್ಟಿತು. ಗಾಂಧೀಜಿಯವರು ಸರ್ದಾರ್ ಪಟೇಲರನ್ನು ತಮ್ಮ ಪ್ರತಿನಿಧಿಯಾಗಿ ಶಾಂತಿ ಏರ್ಪಡಿಸಲು ಕಳಿಸಿದರು. ಆಗ ಮಿರ್ಜಾ ಇಸ್ಮಾಯಿಲ್ ಮೈಸೂರಿನ ದಿವಾನರಾಗಿದ್ದರು. ಕೊನೆಗೆ ಮಿರ್ಜಾ ಪಟೇಲ್ ಒಪ್ಪಂದವಾಗಿ ಮೈಸೂರಿನ ಗಂಡುಭೇರುಂಡ ಧ್ವಜವನ್ನು ಹಾರಿಸಬೇಕೆಂದು ತೀರ್ಮಾನವಾಯಿತು. ೧೯೩೯ರಲ್ಲಿ ದಾಸಪ್ಪನವರು ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ದಾಸಪ್ಪನವರು ರಾಜ್ಯದಾದ್ಯಂತ ಪ್ರವಾಸ ಮಾಡಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂದು ಜನತೆಗೆ ಕರೆ ನೀಡಿದರು. ಎಲ್ಲೆಡೆಯೂ ತೀವ್ರ ಚಳುವಳಿ ಆರಂಭವಾಗಲು ಸಾವಿರಾರು ಜನ ಬಂಧನಕ್ಕೊಳಗಾದರು. ಚಳುವಳಿ ನಿಲ್ಲಿಸಲು ಸರ್ಕಾರ ದಬ್ಬಾಳಿಕೆಯ ದೌರ್ಜನ್ಯದ ನೀತಿ ಅನುಸರಿಸಿತು. ಗಾಂಧೀಜಿ ಮತ್ತೊಮ್ಮೆ ಮಧ್ಯೆ ಪ್ರವೇಶಿಸಿ ಪರಿಸ್ಥಿತಿಯ ಅಧ್ಯಯನ ಮಾಡಲು ಮಹಾದೇವ ದೇಸಾಯಿ ಅವರನ್ನು ಕಳಿಸಿದರು. ಮಹಾದೇವ ದೇಸಾಯಿ ಪೂರ್ಣವಾಗಿ ಅಹಿಂಸಾತ್ಮಕವಾಗಿದ್ದ ಕಾಂಗ್ರೆಸ್‌ನ ಚಳುವಳಿಯನ್ನು ಬಹುವಾಗಿ ಶ್ಲಾಘಿಸಿದ್ದರು. ಸರ್ಕಾರವು ಎಲ್ಲ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿತು. ಈ ಚಳುವಳಿಯ ಸಮಯದಲ್ಲಿ ನಡೆದ ಪೋಲೀಸರ ದೌರ್ಜನ್ಯದ ಬಗ್ಗೆ ತನಿಖೆ ಮಾಡಲು ಸರ್ಕಾರವು ಜಸ್ಟೀಸ್ ನಾಗೇಶ್ವರ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಇಲಾಖಾ ತನಿಖಾ ಸಮಿತಿಯನ್ನು ನೇಮಿಸಿದರು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ದಾಸಪ್ಪನವರು ಈ ಸಮಿತಿಯನ್ನು ಬಹಿಷ್ಕರಿಸಲು ತೀರ್ಮಾನಿಸಿ ಕಾಂಗ್ರೆಸ್ ಸದಸ್ಯರಿಗೂ ಇದನ್ನು ಬಹಿಷ್ಕರಿಸುವ ಆದೇಶ ನೀಡಿದರು. ಇದರಿಂದ ಕುಪಿತವಾದ ಸಂಸ್ಥಾನ ಸರ್ಕಾರ ದಾಸಪ್ಪನವರ ವಕೀಲಿ ಸನ್ನದನ್ನು ರದ್ದು ಮಾಡಿತು. ಇದರಿಂದಾಗಿ ದಾಸಪ್ಪನವರಿಗೆ ಸಂಪಾದನೆಯ ಮೂಲ ನಿಂತುಹೋಗಿ ಬಡ

ತನದ ಬವಣೆಯನ್ನು ಅನುಭವಿಸಬೇಕಾಯಿತು. ಆ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು ೧೯೪೦ರ ಜುಲೈ ೧೩ರ ಹರಿಜನ ಪತ್ರಿಕೆಯಲ್ಲಿ ದಾಸಪ್ಪನವರ ಬಗ್ಗೆ ಈ ರೀತಿ ಬರೆದರು.

"ಶ್ರೀ ದಾಸಪ್ಪನವರು ಮೈಸೂರಿನ ಅತ್ಯಂತ ಗೌರವಾನ್ವಿತ ವ್ಯಕ್ತಿ. ಇಪ್ಪತ್ತು ವರ್ಷಗಳ ವಕೀಲ ಕೆಲಸದ ಅನುಭವವುಳ್ಳವರು. ಮೈಸೂರಿನ ಒಂದು ಭಾಗದಲ್ಲಿ ದಂಡಾಧೀಶರ ಆಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದ ಕೆಚ್ಚು ಅವರದು. ಜಸ್ಟೀಸ್ ನಾಗೇಶ್ವರ ಅಯ್ಯರ್ ಅವರಿಂದ ನಡೆಯಲಿದ್ದ ಅಧಿಕೃತ ವಿಚಾರಣೆಯನ್ನು ಬಹಿಷ್ಕರಿಸಬೇಕೆಂದು ರಾಜಕೀಯ ಖೈದಿಗಳಿಗೆ ತಿಳಿಸಿ ಹೇಳುವ ಸಾಹಸ ಮಾಡಿದ್ದರು. ಆ ಕೆಲಸವನ್ನು ಅವರು ನನ್ನ ಸೂಚನೆಯ ಮೇರೆಗೆ ಮಾಡಿದ್ದರು. ಈ ಗುರುತರ ಅಪರಾಧಗಳಿಗಾಗಿ ಶ್ರೀ ದಾಸಪ್ಪನವರು ಎಂದೆಂದಿಗೂ ವಕೀಲ ವೃತ್ತಿಯನ್ನು ಕೈಗೊಳ್ಳದಂತೆ ಮಾಡಲಾಗಿದೆ. ಶ್ರೀ ದಾಸಪ್ಪನವರನ್ನು ನಾನು ಚೆನ್ನಾಗಿ ಬಲ್ಲೆ. ಅವರು ನಿಷ್ಕಳಂಕ ಚಾರಿತ್ರ್ಯವುಳ್ಳವರು. ಅತ್ಯಂತ ಪ್ರಾಮಾಣಿಕರು. ಅವರು ತಮ್ಮ ಕೈಲಾದ ಮಟ್ಟಿಗೂ ಅಹಿಂಸೆಯನ್ನು ಅನುಸರಿಸಲು ಸ್ಥೈರ್ಯದಿಂದ ಯತ್ನಿಸುತ್ತಿದ್ದಾರೆ. ಬ್ರಿಟೀಷ್ ಭಾರತದ ದೇಶಭಕ್ತ ವಕೀಲರು ಏನು ಮಾಡಿದ್ದಾರೋ ಅಥವಾ ಇತರ ವಕೀಲರು ಏನು ಮಾಡಲಿಲ್ಲವೋ ಅದನ್ನು ಶ್ರೀ ದಾಸಪ್ಪನವರು ಮಾಡಿದ್ದಾರೆ.

ದಾಸಪ್ಪನವರು ಹಾಗೂ ಅವರ ಕುಟುಂಬದವರು ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ರಚನಾತ್ಮಕ ಕಾರ್ಯಗಳಿಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟರು. ೧೯೪೨ರ ಚಲೇಜಾವ್ ಚಳುವಳಿಯ ಸಂದರ್ಭದಲ್ಲಿ ಮತ್ತೆ ದಾಸಪ್ಪನವರು ಸೆರೆಮನೆ ವಾಸ ಅನುಭವಿಸಿದರು. ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ನಡೆದ ಮೈಸೂರು ಚಲೊ ಸತ್ಯಾಗ್ರಹದಲ್ಲೂ ನಾಯಕರಾಗಿ ಸಕ್ರಿಯವಾಗಿ ಭಾಗವಹಿಸಿ ಬಂಧನಕ್ಕೊಳಗಾದರು.

ಅವರು ಸ್ವಾತಂತ್ರ್ಯ ನಂತರ ಮೈಸೂರು ಸಂಸ್ಥಾನದ ಆರ್ಥಿಕ ಹಾಗೂ ಕೈಗಾರಿಕಾ ಸಚಿವರಾಗಿ ೧೯೪೭–೫೨ರ ತನಕ ಕೆಲಸ ನಿರ್ವಹಿಸಿದರು. ಮೂರು ವರ್ಷಗಳ ಕಾಲ ರಾಜ್ಯ ಸಭೆಯ ಸದಸ್ಯರಾಗಿದ್ದರು. ಲೋಕಸಭೆಗೆ ಎರಡು ಬಾರಿ ಚುನಾಯಿತರಾದರು. ದಾಸಪ್ಪನವರು ೧೯೫೯–೬೩ರ ತನಕ ಎಸ್ಟಿಮೇಟ್ಸ್ ಸಮಿತಿ (ಅಂದಾಜು ಸಮಿತಿ)ಯ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಉಪನಾಯಕರೂ ಆಗಿದ್ದರು. ಅಂದಿನ ಪ್ರಧಾನಿಯಾಗಿದ್ದ ಜವಾಹರ್‌ಲಾಲ್ ನೆಹರೂ ಅವರು ದಾಸಪ್ಪನವರನ್ನು ಕೇಂದ್ರ ಮಂತ್ರಿಮಂಡಲಕ್ಕೆ ತೆಗೆದುಕೊಂಡು ರೈಲ್ವೆ ಖಾತೆಯನ್ನು ವಹಿಸಿದರು. ನಂತರ ಲಾಲ್ ಬಹದ್ದೂರ್ ಶಾಸ್ತ್ರಿಯವರ ಮಂತ್ರಿಮಂಡಲದಲ್ಲಿ ಮೊದಲು ನೀರಾವರಿ ಸಚಿವರಾಗಿಯೂ ನಂತರ ಕೈಗಾರಿಕಾ ಸಚಿವರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದು ಹಠಾತ್ ಹೃದಯಾಘಾತದಿಂದ ದಿನಾಂಕ ೨೯–೧೦–೧೯೬೪ರಲ್ಲಿ ನಿಧನರಾದರು.

ದಾಸಪ್ಪ ದಂಪತಿಗಳು ಮಹಾತ್ಮಾ ಗಾಂಧೀಜಿಯವರ ನಿಕಟ ಅನುಯಾಯಿಗಳಾಗಿದ್ದು ಒಂದೆರಡು ಅವಧಿಯಲ್ಲಿ ಸೇವಾ

ಗ್ರಾಮದ ನಿವಾಸಿಗಳಾಗಿಯೂ ಇದ್ದರು. ಗಾಂಧೀಜಿಯವರ ರಚನಾತ್ಮಕ ಕಾರ್ಯದಲ್ಲಿ ಅತೀವ ಆಸಕ್ತಿ ಹೊಂದಿದ್ದ ಯಶೋಧರಮ್ಮ ಮತ್ತು ದಾಸಪ್ಪನವರು ಗ್ರಾಮಾಭಿವೃದ್ಧಿ, ಹರಿಜನ ಸೇವೆ, ಹಿಂದಿ ಪ್ರಚಾರ ಮುಂತಾದ ಕಾರ್ಯಗಳಲ್ಲಿ ಸಮರ್ಪಣಾ ಭಾವದಿಂದ ಕೆಲಸ ಮಾಡಿದರು. ಮೈಸೂರಿನಲ್ಲಿರುವ ಕೆ. ಹೆಚ್. ರಾಮಯ್ಯ ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿದ್ದು ನೂರಾರು ಗ್ರಾಮೀಣ ಬಡ ಒಕ್ಕಲಿಗ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ನೀಡಿ ಉನ್ನತ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟರು. ಮೈಸೂರು ರಾಮಕೃಷ್ಣ ಆಶ್ರಮದ ಕಾರ್ಯದರ್ಶಿಗಳಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಮೈಸೂರು ರಿಯಾಸತ್ ಹಿಂದಿ ಪ್ರಚಾರ ಸಭೆಯ ಅಧ್ಯಕ್ಷರೂ ಆಗಿದ್ದರು. ಕೆಲವು ಕಾಲ ಮಂಡ್ಯದ ಸಕ್ಕರೆ ಕಾರ್ಖಾನೆ ಕಾರ್ಮಿಕ ಸಂಘದ ಅಧ್ಯಕ್ಷರೂ ಆಗಿದ್ದರು. ಸಮಾಜ ಸುಧಾರಣೆಯಲ್ಲಿ ಆಸಕ್ತಿಯಿದ್ದ ಅವರು ಒಬ್ಬ ಹರಿಜನ ಹೆಣ್ಣು ಮಗುವನ್ನು ದತ್ತು ತೆಗೆದುಕೊಂಡು ಸಾಕಿದರು. ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿದ್ದ ಶ್ರೀಮತಿ ಯಶೋಧರಮ್ಮ ಕರ್ನಾಟಕ ರಾಜ್ಯದಲ್ಲಿ ನಿಜಲಿಂಗಪ್ಪನವರ ಮಂತ್ರಿ ಮಂಡಲದ ಸಂಪುಟ ದರ್ಜೆಯ ಸಚಿವರಾಗಿದ್ದರು. ಅಂದಿನ ಮಂತ್ರಿ ಮಂಡಲ ಪಾನ ನಿರೋಧ ನೀತಿಯನ್ನು ರದ್ದು ಪಡಿಸಿದ್ದನ್ನು ಪ್ರತಿಭಟಿಸಿ ಅವರು ರಾಜಿನಾಮೆ ನೀಡಿದರು.

ಸ್ವಾತಂತ್ರ್ಯ ಹೋರಾಟಗಾರರೂ, ಶ್ರೇಷ್ಠ ರಾಜಕಾರಣ ಪಟುವೂ ಆಗಿದ್ದ ಹೆಚ್. ಸಿ. ದಾಸಪ್ಪನವರ ಜನ್ಮ ಶತಾಬ್ಧಿ ವರ್ಷದ ಈ ಸಂದರ್ಭದಲ್ಲಿ ಅವರ ಸ್ಮರಣೆ ಸ್ಫೂರ್ತಿದಾಯಕವಾಗುತ್ತದೆ.

ಸೂರ್ಯ ಚಂದ್ರರನ್ನು ನಾವು ಹುಟ್ಟಿದಂದಿನಿಂದಲೂ ನೋಡುತ್ತಿದ್ದೇವೆ. ಆದರೆ ಅವರಂತೆ ಕೆಲಸ ಮಾಡುವುದು ಹೇಗೆ ಎಂಬುದನ್ನು ಮಾತ್ರ ತಿಳಿದುಕೊಳ್ಳುವ ಗೋಜಿಗೆ ಯಾರೂ ಹೋಗುವುದಿಲ್ಲ.

—ವಿವೇಕಾನಂದ

ಜನರಿಗೆ ತಿಳಿಯದ್ದನ್ನು ತಿಳಿಸಿ ಹೇಳುವುದಕ್ಕಿಂತ ಮೊದಲು ಅವರ ನಡನೀಕೆಯನ್ನು ತಿದ್ದುವುದು ನಿಜವಾದ ಶಿಕ್ಷಣವಾಗಿದೆ.

—ರಸ್ಕಿನ್

ಪುಸ್ತಕ ಪರಿಚಯ

ಡಾ|| ಆರ್ವಿಯಸ್. ಸುಂದರಂ

ತಮಿಳುನಾಡಿನ ಜಾನಪದ : ಎಸ್. ಎಮ್. ಎಲ್. ಲಕ್ಷ್ಮಣನ್ ಚೆಟ್ಟಿಯಾರ್, ಭಾರತೀಯ ಜಾನಪದ ಮಾಲೆ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸ ದೆಹಲಿ ೧೧೦೦೧೬. ೧೯೯೪, ರೂ. ೪೧-೦೦.

ಇದು 'ಫೋಕ್ ಲೋರ್ ಆಫ್ ತಮಿಳ್ ನಾಡು' ಎಂಬ ಇಂಗ್ಲಿಷ್ ಕೃತಿಯ ಕನ್ನಡ ಅನುವಾದ. ಅನುವಾದಕರು ಡಾ. ಜೀ. ಶಂ. ಪರಮಶಿವಯ್ಯ, ನ್ಯಾಷನಲ್ ಬುಕ್ ಟ್ರಸ್ಟ್ ಅವರ ಭಾರತೀಯ ಜಾನಪದ ಮಾಲೆಯಲ್ಲಿ ಈ ಪುಸ್ತಕ ಮೂಡಿ ಬಂದಿದೆ. ಆಂಧ್ರ ಪ್ರದೇಶ, ಮಹಾರಾಷ್ಟ್ರ, ಬೆಂಗಾಲ್ ಮುಂತಾದ ಪ್ರದೇಶಗಳಿಗೆ ಸಂಬಂಧಿಸಿದಂತೆ ಇದೇ ಮಾಲೆಯಲ್ಲಿ ಪುಸ್ತಕಗಳು ಪ್ರಕಟವಾಗಿವೆ. ಭಾರತದ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದ ಜನಪದ ಜೀವನ, ಸಂಸ್ಕೃತಿ ಮತ್ತು ಸಾಹಿತ್ಯಗಳನ್ನು ಪರಿಚಯಿಸುವ ಈ ಪುಸ್ತಕಗಳು ಅತ್ಯಂತ ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತವೆ.

ಪ್ರಸ್ತುತ ಗ್ರಂಥದಲ್ಲಿ ಎಂಟು ಅಧ್ಯಾಯಗಳಿವೆ. 'ಪ್ರದೇಶ ಹಾಗೂ ಜನತೆ' ಎಂಬ ಮೊದಲನೆಯ ಅಧ್ಯಾಯದಲ್ಲಿ ತಮಿಳುನಾಡಿನ ಗ್ರಾಮೀಣರ ಬದುಕಿನಲ್ಲಿ ಪರಂಪರಾಗತವಾಗಿ ಉಳಿದಿರುವ ಸಂಪ್ರದಾಯ, ಆಚಾರ, ರೀತಿ ನೀತಿಗಳನ್ನು ವಿವರಿಸಲಾಗಿದೆ. ತಮಿಳುನಾಡಿನ ಎಲ್ಲೆಗಳು, ಪರ್ವತಗಳು, ಅರಣ್ಯಗಳು, ನದಿಗಳು ಮುಂತಾದವುಗಳ ವಿವರಣೆಯೊಂದಿಗೆ ತಮಿಳುನಾಡಿನ ಚಾರಿತ್ರಿಕ ಹಿನ್ನೆಲೆಯನ್ನೂ ತಿಳಿಸಲಾಗಿದೆ. ಪಲ್ಲವರು, ಚೇರರು, ಚೋಳರು, ಪಾಂಡ್ಯರು, ವಿಜಯನಗರದ ಅರಸರು, ಮರಾಠರು, ಮುಸ್ಲಿಮರು ಮತ್ತು ಬ್ರಿಟಿಷರು ತಮಿಳುನಾಡನ್ನು ಆಳಿದ ವಿಚಾರವಿದೆ. ಸ್ವಾತಂತ್ರ್ಯ ನಂತರದ ತಮಿಳುನಾಡು ಮುನ್ನಡೆ ಸಾಧಿಸಿದ ರೀತಿಯನ್ನು ತಿಳಿಸಲಾಗಿದೆ.

'ಐತಿಹ್ಯಗಳು ಮತ್ತು ಪುರಾಣಗಳು' ಎರಡನೆಯ ಅಧ್ಯಾಯ. ಈ ಅಧ್ಯಾಯದಲ್ಲಿ ಆಕಾಶ, ಸೂರ್ಯ, ಚಂದ್ರ, ಪ್ರಳಯ, ಮಳೆ, ನದಿಗಳು ಪುರುಷ ಮತ್ತು ಸ್ತ್ರೀ ದೇವತೆಗಳ ಬಗೆಗೆ ಹೇಳಲಾಗಿದೆ. ತಮಿಳುನಾಡಿನ ಜನಪದ ಪುರಾಣಗಳು ಮತ್ತು ಐತಿಹ್ಯಗಳನ್ನು ತಿಳಿಯಲಿಚ್ಛಿಸುವ ಓದುಗರಿಗೆ ಈ ಅಧ್ಯಾಯ ತೀವ್ರ ನಿರಾಶೆಯನ್ನು

ನೀಡುತ್ತದೆ. ಇಲ್ಲಿಯ ವಿವರಣೆ ತಮಿಳು ನಾಡಿನ ಜನಪದ ಪುರಾಣ ಮತ್ತು ಐತಿಹ್ಯಗಳನ್ನು ಆಧರಿಸಿ ಬರೆದದ್ದಲ್ಲ. ಆದುದರಿಂದ ಜನಪದ ಕಥನಗಳನ್ನು ತಿಳಿಯಲು ಇದು ನೆರವಾಗುವುದಿಲ್ಲ.

ಮೂರನೆಯ ಅಧ್ಯಾಯದಲ್ಲಿ ಧರ್ಮ ಮತ್ತು ಮಂತ್ರ ವಿದ್ಯೆಯ ಬಗೆಗೆ ತಿಳಿಸಲಾಗಿದೆ. ಶೈವ, ವೈಷ್ಣವ, ಕ್ರೈಸ್ತ ಆಚರಣೆಗಳು, ಹಿಂದೂ ಪೂಜಾ ವಿಧಾನಗಳು, ಪಿತೃಪೂಜೆ, ಭೂತಾರಾಧನೆ, ವೀರ ಪೂಜೆ, ವೃಕ್ಷಪೂಜೆ, ಪ್ರಾಣಿ ಪೂಜೆ, ಸ್ಥಳೀಯ ದೇವತೆಗಳು, ನಂಬಿಕೆಗಳು, ಮೂಢ ವಿಶ್ವಾಸಗಳು, ವಿಧಿನಿಷೇಧಗಳು ಮುಂತಾದವುಗಳ ವಿವರಣೆ ಇದೆ. ಜನಪದ ವೈದ್ಯ, ಮಾಟ, ಮೋಡಿ— ಇವುಗಳ ಬಗ್ಗೆಯೂ ಈ ಅಧ್ಯಾಯದಿಂದ ತಿಳಿಯಬಹುದು. ಅತಿಮಾನುಷ ಶಕ್ತಿಗಳಲ್ಲಿ ತಮಿಳುನಾಡಿನ ಜನರಿಗಿರುವ ನಂಬಿಕೆಗಳನ್ನು, ಅಲ್ಲಿಯ ಆಚಾರ ಸಂಪ್ರದಾಯಗಳನ್ನು, ದೇವದೇವತೆಗಳನ್ನು ಕುರಿತ ಅನೇಕ ವಿವರಗಳು ಈ ಅಧ್ಯಾಯದಲ್ಲಿವೆ.

'ಸಂಪ್ರದಾಯಗಳು ಮತ್ತು ಪರಂಪರೆಗಳು' ಎಂಬುದು ನಾಲ್ಕನೆಯ ಅಧ್ಯಾಯ. ಬಂಧುತ್ವ, ಹುಟ್ಟು, ಮದುವೆ, ಆದಿವಾಸಿಗಳ ಮದುವೆ, ಮರಣ, ಶವಸಂಸ್ಕಾರ ಮುಂತಾದವುಗಳ ಬಗೆಗೆ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಸಮಾಜ, ಸಂಸ್ಕೃತಿ, ಬಾಂಧವ್ಯ, ಜೀವನ ಚಕ್ರದ ವಿವಿಧ ಘಟ್ಟಗಳು ಮುಂತಾದವು ಮನುಷ್ಯನ ಜೀವನದಲ್ಲಿ ಪ್ರಮುಖಸ್ಥಾನ ಪಡೆದಿವೆ. ಕೆಲವು ಜಾತಿಗಳಲ್ಲಿ ಒಂದೇ 'ಕಿಲೈ'ಗೆ ಸೇರಿದ ಹುಡುಗಿಯನ್ನು ಮದುವೆಯಾಗುವಂತಿಲ್ಲ. ಸೋದರತ್ತೆ ಅಥವಾ ಸೋದರ ಮಾವನ ಮಗಳೊಡನೆ ನಡೆಯುವ ಮದುವೆಗೇ ಹೆಚ್ಚು ಆದ್ಯತೆ. ಸೋದರ ಮಾವನನ್ನೂ ಹೆಣ್ಣು ಮಕ್ಕಳು ಮದುವೆಯಾಗುವ ಪದ್ಧತಿಯು ಕಂಡುಬರುತ್ತದೆ. ಶವ ಸಂಸ್ಕಾರದ ಸಂದರ್ಭದಲ್ಲಿ ತಾಯಿಯ ಕಡೆಯವರಿಗೆ ನಿರ್ದಿಷ್ಟ ಹಕ್ಕುಗಳಿರುತ್ತವೆ, ಸೋದರ ಮಾವನಾದವನು ನಾಮಕರಣ, ಮದುವೆ, ಶವಸಂಸ್ಕಾರ ಮುಂತಾದ ಸಂದರ್ಭಗಳಲ್ಲಿ ಪ್ರಮುಖಪಾತ್ರ ಪಡೆದಿರುತ್ತಾನೆ.

ಐದನೆಯ ಅಧ್ಯಾಯ ಜಾತ್ರೆಗಳು ಮತ್ತು ಹಬ್ಬಗಳ ಬಗ್ಗೆ ಹೇಳುತ್ತದೆ. ಹಬ್ಬಗಳನ್ನು ಕಾಲಾನುಗುಣ ಹಬ್ಬಗಳು ಮತ್ತು ಧಾರ್ಮಿಕ ಹಬ್ಬಗಳು ಎಂದು ವಿಂಗಡಿಸಲಾಗಿದೆ. ಒಂದೊಂದು ತಿಂಗಳಲ್ಲೂ ಹಬ್ಬಗಳು ಬರುತ್ತವೆ. ಇವುಗಳಲ್ಲಿ ಕೆಲವು ಶೈವ ಹಬ್ಬಗಳು, ಕೆಲವು ವೈಷ್ಣವ ಹಬ್ಬಗಳು. ಕ್ರೈಸ್ತರ ಮತ್ತು ಮಹಮದೀಯರ ಕೆಲವು ಹಬ್ಬಗಳನ್ನು ಕೂಡ ಪರಿಚಯಿಸಲಾಗಿದೆ. ಜೀವನದ ಮುಖ್ಯ ಉತ್ಸವವಾದ ಜಾತ್ರೆಯನ್ನು ಕುರಿತಂತೆ ಮತ್ತಷ್ಟು ವಿವರಗಳನ್ನು ನೀಡಿದ್ದರೆ ಚೆನ್ನಾಗಿರುತ್ತಿತ್ತು.

ಮೌಖಿಕ ಸಾಹಿತ್ಯವನ್ನೂ ಕುರಿತು ಆರನೆಯ ಅಧ್ಯಾಯದಲ್ಲಿ ತಮಿಳುನಾಡಿನ ವೃತ್ತಿಗಾಯಕರನ್ನು ಪರಿಚಯಮಾಡಿಕೊಡಲಾಗಿದೆ. ಆದರೆ ಜನಪದ ವೃತ್ತಿಗಾಯಕರ ಪರಿಚಯಕ್ಕಿಂತ ಹೆಚ್ಚಾಗಿ ತಮಿಳು ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ವೃತ್ತಿಗಾಯಕರ ಪರಿಚಯವೇ ಹೆಚ್ಚಾಗಿದೆ. ತಮಿಳುನಾಡಿನ ಲಾವಣಿಸಾಹಿತ್ಯದ ಬಗೆಗೆ ಉಪಯುಕ್ತ ಮಾಹಿತಿಗಳಿವೆ. ಏಳನೆಯ ಅಧ್ಯಾಯದಲ್ಲಿ ಜಾನಪದ ಸಂಗೀತ ಮತ್ತು

ನೃತ್ಯವನ್ನು ಕುರಿತ ಹಲವು ವಿವರಗಳು ಸಿಕ್ಕುತ್ತವೆ. ಕುಮ್ಮಿ, ಕೋಲಾಟಂ, ಕರಗ, ಮುಂತಾದ ಅನೇಕ ಕಲೆಗಳ ವಿವರಣೆ ಇದೆ. ತೊಗಲು ಗೊಂಬೆಯಾಟ, ಕುರವಂಜಿ, ಭಾಗವತ ಮೇಳ ಮುಂತಾದವನ್ನು ದಕ್ಷಿಣ ಭಾರತದ ಇತರ ಪ್ರಾದೇಶಿಕ ಕಲೆಗಳೊಂದಿಗೆ ಹೋಲಿಸಬಹುದು. ಎಂಟನೆಯ ಅಧ್ಯಾಯ ದಲ್ಲಿ ಜಾನಪದ ನಾಟಕಗಳು ಮತ್ತು ಮನ ರಂಜನೆಗಳ ಬಗೆಗೆ ಹೇಳಲಾಗಿದೆ. ಆದರೆ ಇಲ್ಲಿಯು ವಿವರಣೆ ಅಸಮಗ್ರ.

'ತಮಿಳುನಾಡಿನ ಜಾನಪದ' ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಉಪಯುಕ್ತ ವಾದ ಗ್ರಂಥವೇನೋ ಸರಿ. ಆದರೆ ಲೇಖ ಕರು ಕ್ಷೇತ್ರಕಾರ್ಯ ನಡೆಸದ ಕಾರಣ ಮೌಖಿಕ ಪರಂಪರೆಯ ಜಾನಪದ ಅಸಮಗ್ರ ವಾಗಿ ಮೂಡಿ ಬಂದಿದೆ. ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ ಮಾಡಿದ ಡಾ. ಜೀ. ಶಂ. ಪರಮಶಿವಯ್ಯ ಮೂಲ ಕೃತಿಯನ್ನು ಸ್ವತಂತ್ರ ಕೃತಿಯಂತೆ ಮೂಡಿಸಿದ್ದಾರೆ. ತಮಿಳಿನ ಮೂಲವನ್ನು ಕೆಲವೆಡೆ ಕೊಟ್ಟು ಅನುವಾದವನ್ನೂ ಕೊಟ್ಟಿರುವುದರಿಂದ ತುಂಬ ಉಪಯೋಗವಾಗಿದೆ. ಮೂಲ ಭಾಷೆಯ ಪದಗಳು ತಿಳಿಯದಿರುವುದರಿಂದ ಮಹವರ್ (ಮಾಹವರ್) ಕವಾಡಿ ನೃತ್ಯ (ಕಾವಡಿ ನೃತ್ಯ) ಮುಂತಾದ ದೋಷಗಳು ಉಂಟಾಗಿವೆ. ಆದರೆ ಒಟ್ಟಿನಲ್ಲಿ ಈ ತರಹದ ಪುಸ್ತಕಗಳಿಂದ ನೆರೆಹೊರೆಯ ಪ್ರದೇಶಗಳ ಜಾನಪದ, ಸಂಸ್ಕೃತಿ, ಸಂಪ್ರದಾಯಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಇಂಥ ಮಾಲೆಯನ್ನು ಯೋಜಿಸಿದ ನ್ಯಾಷನಲ್ ಬುಕ್ ಟ್ರಸ್ಟ್ ಅವರನ್ನು ಅಭಿನಂದಿಸ ಬೇಕು.

* * *

ಅನುಭವದ ವಿಶಿಷ್ಟ ದಾಖಲೆ

ಗೌರ್ಮೆಂಟ್ ಬ್ರಾಹ್ಮಣ (ಆತ್ಮಕಥನ) ಲೇಖಕರು: ಅರವಿಂದ ಮಾಲಗತ್ತಿ. ಪ್ರಕಟಣೆ: ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ). ಪುಟ-೯೪. ಮೊದಲ ಮುದ್ರಣ: ೧೯೯೪. ಬೆಲೆ: ರೂ. ೩೫.

ಹಾಲತಿ ಸೋಮಶೇಖರ್

ಮರಾಠಿಯಲ್ಲಿ ಅನೇಕ ದಲಿತ ಲೇಖಕರು ಸ್ವಾನುಭವಗಳ ನೆಲೆಯಲ್ಲಿ ತಮ್ಮ ಸಮು ದಾಯದ ಬದುಕನ್ನು ಆತ್ಮಕಥನಗಳ ಮೂಲಕ ದಾಖಲಿಸಿದ್ದಾರೆ. ಇದರಿಂದಾಗಿ ಮರಾಠಿಯಲ್ಲಿ ಸಮೃದ್ಧವಾಗಿ ಆತ್ಮಕಥನ ಗಳು ಬಂದವು. ಮರಾಠಿಯಲ್ಲಿ ಮಾತ್ರವೇ ಆತ್ಮಕಥನಗಳು ವಿಪುಲವಾಗಿ ಬಂದಾಗ ಕನ್ನಡದಲ್ಲಿ ಏಕೆ ಬರುತ್ತಿಲ್ಲವೆಂಬ ಪ್ರಶ್ನೆ ಸಹಜವಾಗಿಯೇ ನಮ್ಮಲ್ಲಿ ಹುಟ್ಟಿ ಕೊಂಡಿತು. ಈ ಬಗೆಯ ಚರ್ಚೆಯನ್ನು ಆರಂಭಿಸಿದ ನಮ್ಮ ವಿಮರ್ಶಕರು ಉತ್ತರ ಕೊಡುವ ಪ್ರಯತ್ನ ಕೂಡ ಮಾಡಿದರು. ಡಾ. ಎಚ್. ಎಸ್. ರಾಘವೇಂದ್ರರಾವ್ ಅವರು ಈ ಬಗ್ಗೆ ಆಲೋಚಿಸುತ್ತಾ ಬಹುಶಃ ಕನ್ನಡದಲ್ಲಿ ದಲಿತರು ತಮ್ಮ ಸೃಜನಶೀಲ ಕೃತಿಗಳಲ್ಲೇ ತಮ್ಮ ಅನುಭವ ಗಳನ್ನು ಬಳಸಿಕೊಳ್ಳುವ ಕಾರಣವಾಗಿರ ಬಹುದು ಎಂದಿದ್ದಾರೆ. ಆತ್ಮ ಕಥನಗಳ

ಅದೇ "ಅದೇತನ"ಕ್ಕಿಂತಲೂ ಸೃಜನಶೀಲ ಕೃತಿಗಳು ಬೇರೆ ಬೇರೆ ಓದುಗರಿಗೆ ಬೇರೆ ಬೇರೆ ಸ್ತರಗಳಲ್ಲಿ ಭಿನ್ನಭಿನ್ನ ನೆಲೆಯಲ್ಲಿ ದಲಿತಾನುಭವದ ಅನೇಕ ಸಾಧ್ಯತೆಗಳನ್ನು ತಂದು ಕೊಡಬಲ್ಲವು ಎಂಬುದೇನೂ ಸುಳ್ಳಲ್ಲ. ಈ ಬಗೆಯ ಚರ್ಚೆಯ ಸಂದರ್ಭದಲ್ಲಿಯೇ 'ಅಕ್ರಮ ಸಂತಾನ', 'ಉಚಲ್ಯಾ'ದಂಥ ಮರಾಠಿ ಆತ್ಮ ಕಥನಗಳು ಕನ್ನಡಕ್ಕೆ ಅನುವಾದಗೊಂಡವು. ಈ ಕೃತಿಗಳು ಮರಾಠಿಯ ದಲಿತರ ಬದುಕನ್ನು ಕನ್ನಡಿಗರು ಗ್ರಹಿಸಲು ನೆರವಾದವು. ವಾಸ್ತವವಾಗಿ 'ಅಕ್ರಮ ಸಂತಾನ' ಮತ್ತು 'ಉಚಲ್ಯಾ'ದ ಲೇಖಕರು ತಮ್ಮ ಅವಮಾನಕರ ಅನುಭವಗಳ ನಿರ್ಭೀತ ಅಭಿವ್ಯಕ್ತಿಯೊಂದಿಗೆ ಒಂದು ಸಮುದಾಯದ ಬದುಕನ್ನು ಒಟ್ಟಂದದಲ್ಲಿ ಕಾಣಿಸುವ ಪ್ರಯತ್ನ ಮಾಡಿದರು.

ಇದೇ ಸಿಟ್ಟಿನಲ್ಲಿ ಕನ್ನಡದಲ್ಲಿ ಬಂದದ್ದು, ಶಿವರುದ್ರ ಕಲ್ಲೋಳಿಕರ ಕಾದಂಬರಿ— 'ಹೊಲಗೇರಿಯ ರಾಜಕುಮಾರ.' ಈ ಕಾದಂಬರಿ ವಿಚಿತ್ರ ಐತಿಹಾಸಿಕ ಸತ್ಯದ ತುಣುಕನ್ನು ಆಧರಿಸಿ ಬರೆದದ್ದಾದ್ದರಿಂದ ಇಲ್ಲಿ ಇತಿಹಾಸ, ಅನುಭವ. ಕನಸು, ಕಲ್ಪನೆಗಳು ಮೇಳೈಸಿಕೊಂಡು ಬರುತ್ತವೆ. ಏಕಕಾಲಕ್ಕೆ ಪರಸ್ಪರ ವಿರುದ್ಧವಾದ ಎರಡು ಮುಖಗಳಲ್ಲಿ ಕಾಣಿಸಿಕೊಳ್ಳುವ ನಾಯಕ ಅಂತಿಮವಾಗಿ 'ಮಾನವೀಯ ಶೋಧಕನಾಗುತ್ತಾನೆ. ಒಟ್ಟಾರೆ 'ಹೊಲಗೇರಿಯ ರಾಜಕುಮಾರ' ಕಾದಂಬರಿ ಎಂದು ಕರೆದುಕೊಂಡಿದ್ದರೂ ಸಹ ದಲಿತನ ಅನುಭವವನ್ನು ಕಲಾತ್ಮಕವಾಗಿ ಸಾಹಿತ್ಯದ ಚೌಕಟ್ಟಿನಲ್ಲಿ ಹೇಳುವ ಆತ್ಮ ಕಥನದಂತಿದೆ. ಇದೀಗ ಬಂದ "ಗೌರ್ಮೆಂಟ್ ಬ್ರಾಹ್ಮಣ" ಕನ್ನಡದಲ್ಲಿ ಬಂದ ದಲಿತರ ಮೊದಲ ಆತ್ಮ ಚರಿತ್ರೆಯಾಗಿ ನಮ್ಮ ಮುಂದಿದೆ.

ಒಂದಂತೂ ನಿಜ; ಕಾದಂಬರಿಯೋ, ಆತ್ಮಕಥನವೋ 'ದಲಿತಾನುಭವ' ಈ ಹೊತ್ತು ಸಾಹಿತ್ಯದ ಬೇರೆ-ಬೇರೆ ಪ್ರಕಾರಗಳಲ್ಲಿ ನಮ್ಮನ್ನು ತಲುಪುತ್ತಿದೆ. ಆತ್ಮ ಕಥನಗಳಲ್ಲಿ ನೇರವಾಗಿ, ಅಧಿಕೃತವಾದ ಪ್ರಾಮಾಣಿಕವಾಗಿ ತಲುಪುವ ಪ್ರಯತ್ನ ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ.' ಮರಾಠಿ ಆತ್ಮ ಕಥನಗಳಿಂದ ಬೇರೆಯಾಗಿಯೇ ನಿಲ್ಲುತ್ತದೆ. ಅಲ್ಲದೆ ಇದು ಲೇಖನಗಳ ಮೂಲಕ ಅನುಭವಗಳನ್ನು ದಾಖಲಿಸುವ ತಂತ್ರವಾಗಿ ಬಂದಿದೆ. ಇಪ್ಪತ್ತು ಬಿಡಿ ಲೇಖನಗಳು ತಮ್ಮಷ್ಟಕ್ಕೆ ಸ್ವತಂತ್ರವೆನಿಸಿದರೂ ಸಹ ಒಟ್ಟಂದದಲ್ಲಿ ಒಂದೇ ಸೂತ್ರದಲ್ಲಿ ಸೇರಿ ಆತ್ಮಕಥನವೆನಿಸಿವೆ. ಇದು ಲೇಖಕರ ಆತ್ಮ ಕಥೆಯ ಮೊದಲ ಕಂತು. ಇಲ್ಲಿ ಅರವಿಂದ ಮಾಲಗತ್ತಿಯವರು ತಮ್ಮ ಬಾಲ್ಯ, ವಿದ್ಯಾಭ್ಯಾಸ ಹಾಗೂ ಸಂಶೋಧನೆಯ ದಿನಗಳಲ್ಲಿನ ಅನುಭವಗಳನ್ನು ನೇರವಾಗಿ ನಿವೇದಿಸಿಕೊಂಡಿದ್ದಾರೆ. ಆದರೆ 'ಗೌರ್ಮೆಂಟ್ ಬ್ರಾಹ್ಮಣ' ಕೇವಲ ಅನುಭವಗಳ ದಾಖಲೆಯಲ್ಲಿ ಪ್ರತಿಯೊಂದು ಅನುಭವವೂ ತಾತ್ವಿಕ ವಿವೇಚನೆಯಿಂದ ಕೂಡಿದ್ದು ಓದುಗನನ್ನು ಚರ್ಚೆಗೆ ಒಳಗು ಮಾಡುತ್ತವೆ. ಸ್ವಅನುಭವಗಳನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ನುಸುಳಬಹುದಾದ ವೈಭವೀಕರಣ ಮತ್ತು ಅಪ್ರಾಮಾಣಿಕತೆಯಿಂದ ಈ ಕೃತಿ ಪಾರಾಗಿದೆ. ಇದರಿಂದಾಗಿಯೇ ಹಳ್ಳಿಗಳಲ್ಲಿ ದಲಿತನಾದವನು ಅನು

ಭವಿಸುವ ಸಾಮಾನ್ಯ ಅನುಭವಗಳು ಇಲ್ಲಿ ವಿಶಿಷ್ಟಾನುಭವಗಳಂತೆ ತೋರಿ ಓದುಗ ನನ್ನು ಹಲವು ಬಗೆಯಲ್ಲಿ ಕಾಡುತ್ತವೆ.

ನಮ್ಮ ಸಮಾಜ ವ್ಯವಸ್ಥೆಯ ಜಾತೀಯತೆ, ಪಾಳೆಯಗಾರಿಕೆ, ಬ್ರಾಹ್ಮಣಿಕೆ ಮತ್ತು ಅಜ್ಞಾನಗಳು "ಹೆಣದ ದುಡ್ಡು ಮತ್ತು ಮದುವೆಯ ಊಟ", "ಕರಿಯ ಬೆಕ್ಕು ಬೆಳ್ಳಗಾಗಲಿಲ್ಲ", "ಓಕಳಿ" ಎಂಬ ಈಸ್ಟಮನ್ ಕಲರ್ ಚಿತ್ರ "ಜನಿವಾರ ಶಿವದಾರಗಳ ಮಹಾತ್ಮೆ" – ಮುಂತಾದ ಅಧ್ಯಾಯಗಳಲ್ಲಿ ಕಂಡು ಬರುತ್ತವೆ. ನಮ್ಮ ಸಾಮಾಜಿಕ ಸಂಬಂಧಗಳ ಚೌಕಟ್ಟಿನಲ್ಲಿ ಜರುಗುವ ಗೊಡ್ಡು ಸಂಪ್ರದಾಯ ಮತ್ತು ಬೂರ್ಜ್ವಾ ಆಚರಣೆಗಳನ್ನು ಹೇಳುತ್ತಲೇ ಲೇಖಕರು ಒಂದು ಸಮುದಾಯ ಅನುಭವಿಸಿದ ಆಳದ ನೋವುಗಳನ್ನೂ ತಳಮಳಗಳನ್ನೂ ಅರಿವಿಗೆ ತರುತ್ತಾರೆ.

ಇಡೀ ಕೃತಿಯಲ್ಲಿ 'ನನ್ನ ಮಾಜಿ ಪ್ರೇಯಸಿ' ಎಂಬುದು ದೀರ್ಘ ಅಧ್ಯಾಯವಾಗಿದೆ. ಲಿಂಗಾಯತ ಹುಡುಗಿ ಮತ್ತು ದಲಿತ ಲೇಖಕರ ನಡುವಿನ ಪ್ರೇಮ ಸಂಬಂಧ ಇಲ್ಲಿದೆ. ತಾನು ಅಪಾರವಾಗಿ ಪ್ರೀತಿಸುತ್ತಿದ್ದ ಗೆಳತಿ ಇನ್ನೊಬ್ಬರ ಪಾಲಾದಾಗ ಉಂಟಾದ ಯಾತನೆಯನ್ನು ವಿಸ್ತಾರವಾಗಿ ಇಲ್ಲಿ ದಾಖಲಿಸಿದ್ದಾರೆ. ಮತೀಯ ಮಲಿನತೆಗೊಳಗಾದ ಪುರಾಣದ ಕಲ್ಪನೆಗಳು ನಮ್ಮ ಶ್ರೇಣೀಕೃತ ಸಮಾಜದ ಅನಿಷ್ಟವನ್ನೇ ಪ್ರತಿನಿಧಿಸುವುದನ್ನು "ನನ್ನ ಜೀವ ತಿನ್ನುವ ಬಾಳೆ ಎಲೆ" "ಬೆವೆಗೆ ಬಿದ್ದ ಎಮ್ಮೆ ಮತ್ತು ಓಡಿ ಬಂದ ಕೋಣ" ಮುಂತಾದ ಅಧ್ಯಾಯಗಳಲ್ಲಿ ಚರ್ಚೆಗೆ ಒಳಗುಮಾಡಿದ್ದಾರೆ.

ಒಟ್ಟಾರೆ ವ್ಯಾಪಕ ಅಧ್ಯಯನ, ತೀಕ್ಷ್ಣ ಸಮಾಜ ವಿಮರ್ಶೆ, ಪ್ರಬುದ್ಧ ಚಿಂತನೆ ಮತ್ತು ವಿಶಿಷ್ಟ ಜೀವನಾನುಭವದಿಂದ ರೂಪುಗೊಂಡಿರುವ ಮಾಲಗತ್ತಿಯವರಿಗೆ ಸಮತೋಲನದ ಬರವಣಿಗೆ ಸಾಧ್ಯವಾಗಿದೆ. ಆದ್ದರಿಂದ ಇವರಿಗೆ ಆತ್ಮಕಥೆಯನ್ನು ಹೇಳುವಾಗ ಕೂಡ "ಶತಮಾನಗಳ ತಲೆಮಾರಿನ ದ್ವೇಷಗಳನ್ನು ಇಂದಿನ ತಲೆಮಾರಿನ ಕೆಲ ಜನಾಂಗದ ಮೇಲೆ ಮಾತ್ರ ಹೇರಿ ಕೆಂಡ ಕಾರುವುದು ಎಷ್ಟು ಸಮಂಜಸವಾದುದು" (ಪು ೪೪) ಎಂಬ ಪ್ರಶ್ನೆ ಕಾಡುತ್ತದೆ.

* * *

ರಾಜಾಸ್ಥಾನದ ಜಾನಪದ: ಲೇಖಕರು: ಡಿ. ಆರ್. ಅಹುಜ; ಅನುವಾದಕರು: ಸಿ.ಪಿ.ಕೆ; ಪ್ರಕಾಶಕರು: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೧೯೯೪; ಪುಟ: viii+೧೭೬; ಬೆಲೆ ೩೬ ರೂ.

ಡಾ|| ಅಂಬಳಿಕೆ ಹಿರಿಯಣ್ಣ

ವಿವಿಧ ಭಾಷೆ, ಸಮಾಜಗಳ ಒಕ್ಕೂಟವಾಗಿರುವ ಭಾರತದ ಪರಂಪರಾಗತ ಬದುಕು ಮತ್ತು ಸಂಸ್ಕೃತಿಯ ಹಿರಿಮೆಯನ್ನು ಅರಿಯಲು ಈ ದೇಶದ ಪ್ರತಿಯೊಂದು ಭಾಷೆ, ಸಮಾಜ ಹಾಗೂ ಪ್ರದೇಶಗಳ ಜಾನಪದದ ಕ್ರಮಬದ್ಧವಾದ ಅಧ್ಯಯನ ನಡೆಯಬೇಕಾಗಿದೆ. ಭಾರತೀಯರ ಆಸೆ ಆಕಾಂಕ್ಷೆ ದುಃಖ ದುಮ್ಮಾನಗಳನ್ನು

ಅರಿಯಲು ಅವರ ಸ್ವಭಾವ ನಡವಳಿಕೆಗಳನ್ನು ಅರ್ಥೈಸಲು ಜನಭಾಷೆಯಲ್ಲಿ ಪ್ರಚಲಿತವಿರುವ ಮೌಖಿಕ ಸಾಹಿತ್ಯ ಹಾಗೂ ಸಾಹಿತ್ಯೇತರ ಅರಿವನ್ನು ಗ್ರಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ ಹಮ್ಮಿಕೊಂಡ ಯೋಜನೆ ಆಶಾದಾಯಕವಾಗಿದೆ.

ಭಾರತೀಯ ಜಾನಪದ ಮಾಲೆಯಲ್ಲಿ ಹೊರಬಂದಿರುವ ಪ್ರಕೃತ ಗ್ರಂಥವನ್ನು ಇಂಗ್ಲಿಷ್ ಮೂಲದಿಂದ ಕನ್ನಡಕ್ಕೆ ಅನುವಾದಿಸಿದವರು ಕನ್ನಡದ ಗಣ್ಯ ಭಾಷಾಂತರಕಾರರಲ್ಲೊಬ್ಬರಾದ ಡಾ. ಸಿ. ಪಿ. ಕೃಷ್ಣಕುಮಾರ್ ಅವರು. ಇಲ್ಲಿಯ ಅನುವಾದ ಸರಳವೂ ಪರಿಣಾಮಕಾರಿಯೂ ಆಗಿದ್ದು ಕನ್ನಡದ ಒಂದು ಸ್ವತಂತ್ರ ಕೃತಿಯೋ ಎನ್ನುವಷ್ಟು ಸಹಜವಾಗಿ ಓದಿಸಿಕೊಂಡು ಹೋಗುತ್ತದೆ. ಅಷ್ಟೇ ಅಲ್ಲ, ಸ್ವಯಂ [illegible] ಅವರೇ ರಾಜಾಸ್ಥಾನದಲ್ಲಿ ಕ್ಷೇತ್ರ ಕಾರ್ಯ ನಡೆಸಿ ಗ್ರಂಥ ರಚನೆ ಮಾಡಿರುವಷ್ಟು ಆಕೃತಕವಾಗಿದೆ.

ರಜಪೂತ ನಾಡೆಂದು ಹೆಸರಾಗಿರುವ ರಾಜಾಸ್ಥಾನ ವಿಶಿಷ್ಟ ಪರಂಪರೆಯನ್ನು ರೂಢಿಸಿಕೊಂಡಿರುವ ಒಂದು ಪ್ರದೇಶ. ವಿಭಿನ್ನ ಸಾಮಾಜಿಕ ವೈವಿಧ್ಯಗಳ ನಡುವೆಯೂ ಈ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸಿರುವ ಈ ಪ್ರದೇಶದ ಜಾನಪದವನ್ನು ಲೇಖಕ ಅಹುಜ ಅವರು ಮಾನವಶಾಸ್ತ್ರೀಯ ತತ್ವಗಳ ನೆಲೆಯಲ್ಲಿ ಕ್ರಮಬದ್ಧ ರೀತಿಯಲ್ಲಿ ಅಭ್ಯಸಿಸುವ ಯತ್ನ ಮಾಡಿದ್ದಾರೆ. ಒಟ್ಟು ಒಂಬತ್ತು ಅಧ್ಯಾಯಗಳಲ್ಲಿ ರಾಜಾಸ್ಥಾನದ ಜಾನಪದವನ್ನು ಪರಿಚಯಿಸಿದ್ದಾರೆ.

ಮೊದಲ ಅಧ್ಯಾಯದಲ್ಲಿ ರಾಜಾಸ್ಥಾನದ ಸಂಸ್ಕೃತಿಯ ಅಧ್ಯಯನಕ್ಕೆ ಅಗತ್ಯವಾದ ಆ ಪ್ರದೇಶದ ಭೌಗೋಳಿಕ ವೈಶಿಷ್ಟ್ಯ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಒದಗಿಸಿರುವುದರೊಂದಿಗೆ ಜನಾಂಗಿಕ ಮಾಹಿತಿಯನ್ನು ದೊರಕಿಸಿಕೊಟ್ಟಿದ್ದಾರೆ. ಅಲ್ಲಿನ ಜನ, ನಿಸರ್ಗವ್ಯಾಪಾರಗಳ ಬಗೆಗೆ, ಅದರಲ್ಲೂ ಸೂರ್ಯಚಂದ್ರರ ಬಗೆಗೆ, ಜಲ ಪ್ರಳಯ ಮತ್ತು ಮಳೆ ಬಗೆಗಿನ ಅಲ್ಲಿನ ಜನರ ಗ್ರಹಿಕೆಗಳನ್ನು ಪ್ರಾತಿನಿಧಿಕ ಎನ್ನಬಹುದಾದ ಕೆಲವು ಪುರಾಣಗಳ ಮೂಲಕ ಪರಿಚಯಿಸಲಾಗಿದೆ.

ರಾಜಾಸ್ಥಾನದ ವಿಭಿನ್ನ ಸಮಾಜಗಳ 'ಧರ್ಮ ಮತ್ತು ಮಾಟ–ಮಂತ್ರ'ದ ಅಧ್ಯಾಯದಲ್ಲಿ ನಿರೂಪಿತವಾಗಿದೆ. ಇದೇ ಅಧ್ಯಾಯದಲ್ಲಿ ನಂಬಿಕೆ, ಮೂಢನಂಬಿಕೆಗಳ ಪರಿಚಯವನ್ನು ಮಾಡಿಕೊಡಲಾಗಿದೆ. ದೇವಾನುದೇವತೆಗಳ ವಿವರಗಳೊಡನೆ ಪಂಚಪೀರರ ಪೂಜೆ, ಪ್ರಾಚೀನ ಯಕ್ಷಪೂಜೆ, ನಾಗಪೂಜೆಗಳ ಸಮನ್ವಯ ಅದರ ಮೇಲೆ ಇಸ್ಲಾಮಿಕ್ ಸಂಸ್ಕೃತಿಯ ಪ್ರಭಾವವಿದ್ದು ನಾಥಪಂಥದ ಅಂಶಗಳನ್ನು ಒಳಗೊಂಡಿರುವುದರ ಕಡೆಗೂ ಲೇಖಕರು ಗಮನ ಸೆಳೆಯುತ್ತಾರೆ. ಅಲ್ಲದೆ ಪರಂಪರಾಗತ ರೂಢಿಗಳು ಮತ್ತು ಸಂಪ್ರದಾಯಗಳ ಸ್ಥೂಲ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ. ತಮ್ಮ ಇತಿಹಾಸ, ಧರ್ಮ ಮತ್ತು ಪರಂಪರೆಗಳ ಬಗೆಗೆ ಸಾಂಪ್ರದಾಯಿಕ ದೃಷ್ಟಿಯನ್ನುಳ್ಳ ರಾಜಾಸ್ಥಾನದ ಜನರ ಪಾಲಿಗೆ ಹಬ್ಬ ಜಾತ್ರೆಗಳಂತೂ ಮಹತ್ವದ ಸಂದರ್ಭಗಳಾಗಿವೆ. ಪುಷ್ಕರ, ಖ್ವಾಜಾ ಮೊಯಿನುದ್ದೀನ್ ಚಿಷ್ಟಿಯ ಉರುಸ್, ಶ್ರೀ ಮಹಾವೀರ್‌ಜಿ

ಜಾತ್ರೆ, ಕೈಲಾದೇವಿ ಜಾತ್ರೆ, ಶೀತ್ಲಮಾತಾ ಜಾತ್ರೆ, ಕರ್ಣಿಮಾತಾ, ಕಪಿಲಮುನಿ ಜಾತ್ರೆ, ಬಂಗಾಂಗ ಜಾತ್ರೆ, ಜಂಭೇಶ್ವರ ಜಾತ್ರೆ, ಸೀತಾಬರಿ ಜಾತ್ರೆ, ಗಲಿಯ ಕೋಟ್ ಉರುಸ್, ಜೀನ್ ಮಾತಾ ಮತ್ತು ಅನ್ನಕೂಟ್ ಜಾತ್ರೆಗಳ ವಿವರಗಳೊಡನೆ ಆದಿವಾಸಿ ಜಾತ್ರೆಗಳ ಬಗೆಗೂ ವಿವರಗಳನ್ನು ಒದಗಿಸಲಾಗಿದೆ. ಆದರೆ ಸುಸಂಬದ್ಧ ವರ್ಗೀಕರಣ ಮತ್ತು ಮಂಡನೆಯ ಕೊರತೆಯಿಂದಾಗಿ ಈ ಅಧ್ಯಯನ ಸಮರ್ಪಕವಾಗಿರುವಂತೆ ಕಾಣುವುದಿಲ್ಲ.

ಪ್ರಕೃತ ಗ್ರಂಥದ ಹೃದಯಭಾಗವೆನಿಸಿರುವ 'ರಾಜಾಸ್ಥಾನಿ ಭಾಷೆ, ಉಪಭಾಷೆಗಳು ಮತ್ತು ಸಾಹಿತ್ಯ' ಎಂಬ ಅಧ್ಯಾಯ ರಾಜಾಸ್ಥಾನಿ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಬಹು ಮಹತ್ವದ ಸಂಗತಿಗಳನ್ನು ಒದಗಿಸುತ್ತದೆ. ಮಾರವಾರಿ, ಧುಂದರಿ, ಹರೌಟಿ, ಮಾಲ್ವಿ ಭಾಷೆಗಳ ಬಗೆಗೆ ವಿಶೇಷ ಪ್ರಸ್ತಾಪವಿದ್ದು ಉಪಯುಕ್ತ ವಿವರಗಳಿವೆ.

ರಾಜಾಸ್ಥಾನದಲ್ಲಿ ಕಥೆಗಳು, ಗಾದೆಗಳು ಮತ್ತು ಸೂಕ್ತಿಗಳು, ಗೀತೆಗಳು, ಲಾವಣಿಗಳಂತೆಯೇ ದೃಶ್ಯ ಸಾಹಿತ್ಯ ಕೂಡ ವೈವಿಧ್ಯಮಯವಾಗಿದೆ ಎಂಬುದನ್ನು ಲೇಖಕರು ಮೌಖಿಕ ಸಾಹಿತ್ಯ ಕುರಿತು ನಡೆಸಿದ ಅಧ್ಯಯನದಲ್ಲಿ ಮನಗಾಣಿಸಿದ್ದಾರೆ. ರಾಜಾಸ್ಥಾನದ ಜನಪದ ಗೀತೆಗಳ ಸಂಗೀತಾಂಶ, ರಾಗಗಳು, ತಾಳ, ಜನಪದ ಗೀತೆಗಳ ಗಾಯನ, ಭಜನೆಗಳು ಮತ್ತು ಬನಿಗಳು, ಜನಪದ ಸಂಗೀತ ವಾದ್ಯಗಳು, ವೃತ್ತಿಗಾಯಕ ಸಮುದಾಯಗಳು, ಪ್ರಾದೇಶಿಕ ನೃತ್ಯ ಪ್ರಕಾರಗಳನ್ನು ಕುರಿತು ಕೂಡ ವಿವೇಚನೆ ನಡೆಸಲಾಗಿದೆ.

ರಾಜಾಸ್ಥಾನ ಹೊರನೋಟಕ್ಕೆ ಒರಟು ಸಂಸ್ಕೃತಿಯ ಒಂದು ವಲಯವಾಗಿ ತೋರಿ ಬರುವುದಾದರೂ ತನ್ನ ಸೃಜನಶೀಲ ಸಹಜ ಕೌಶಲದಿಂದ ಅದು ವಾಸ್ತುಶಿಲ್ಪ ಹಾಗೂ ಕಲೆಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ರಾಜ್ಯವಾಗಿದೆ. ಜನಪದ ಕಲೆ, ನೃತ್ಯಗಳು, ಗೀತೆಗಳು, ಕಾವ್ಯ, ಖ್ಯಾಲ್‌ಗಳು, ರಾಮಲೀಲಾ, ರಾಸಲೀಲಾ, ಸೂತ್ರದ ಗೊಂಬೆ ಆಟಗಳು, ದೊಂಬರಾಟ ಕಲೆಗಳ ಬಗೆಗೆ ಉಪಯುಕ್ತ ಸಾಮಗ್ರಿಯನ್ನು ಒದಗಿಸಲಾಗಿದೆ. ಆದರೆ ಇಲ್ಲಿಯ ಕಲೆಗಳನ್ನು ಇನ್ನೂ ಸಮಗ್ರವಾಗಿ ಶೋಧಿಸುವ, ಅವನ್ನು ವಿವರವಾಗಿ ಪರಿಚಯಿಸುವ ಅಗತ್ಯವಿದೆ.

ಅನುಬಂಧದಲ್ಲಿ ಒದಗಿಸಲಾಗಿರುವ ಸಾಹಿತ್ಯ ರಾಜಾಸ್ಥಾನಿ ಜನಪದರ ಬದುಕು ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಪೂರಕ ಸಾಮಗ್ರಿಯನ್ನು ಒದಗಿಸುವುದರಿಂದ ಉಪಯುಕ್ತ ಎನಿಸಿದೆ. ವಿಷಯ ಪ್ರತಿಪಾದನೆಗಾಗಿ ಅಲ್ಲಲ್ಲಿ ಒದಗಿಸಿರುವ ಛಾಯಾಚಿತ್ರಗಳು ಆಕರ್ಷಕವಾಗಿವೆ.

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಸಿ. ನಾಗಣ್ಣ, ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು.

೨. ಜೆ. ಆರ್. ಲಕ್ಷ್ಮಣರಾವ್
ಮೈತ್ರಿ, ೧೨ ನೆಯ ಮುಖ್ಯ ರಸ್ತೆ, ಸರಸ್ವತಿಪುರಂ
ಮೈಸೂರು-೫೭೦ ೦೦೯

೩. ಪಿ. ಶಿವಕುಮಾರಿ
ಕುಂಚಿನಡ್ಕ ಹೌಸ್, ಕಾಟುಕುಕ್ಕೆ ಅಂಚೆ, ಪೆರ್ಲ ಮಾರ್ಗ
ಕಾಸರಗೂಡು-೬೭೧ ೫೫೨

೪. ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ' ಸಾವಯುವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ, ಮೈಸೂರು-೫೭೦ ೦೦೮

೫. ವೈದೇಹಿ ರಾಮಾನುಜ ಅಯ್ಯಂಗಾರ್
೩೫೮, ನವಿಲು ರಸ್ತೆ, ಕುವೆಂಪುನಗರ, ಮೈಸೂರು-೫೭೦ ೦೨೩

೬. ಎಸ್. ರೋಹಿಣಿಶರ್ಮ
ತ್ಯಾಗರಾಜ ಬಡಾವಣೆ, ಅಜ್ಜಂಪುರ, ತರಿಕೆರೆ-೫೭೭ ೫೪೭
ಚಿಕ್ಕಮಗಳೂರು ಜಿಲ್ಲೆ

೭. ಲೀಲಾಮಣ್ಣಾಲ, ಶಿಕ್ಷಕಿ
ಸಂತಥಾಮಸ್ ಪ್ರೌಢಶಾಲೆ, ವಿಶ್ವೇಶ್ವರನಗರ
ಮೈಸೂರು-೫೭೦ ೦೦೮

೮. ಸರಸ್ವತಿ ಬಡೆಕ್ಕಿಲ
ನಂ. ಎಂ-೪೭, ೩ನೇ ಹಂತ, ಕುವೆಂಪುನಗರ
ಮೈಸೂರು-೫೭೦ ೦೨೩

೯. ಚಂದ್ರಶೇಖರಾರಾಧ್ಯ, ಸಂಪಾದಕ
ಕ.ರಾ.ವ.ಶಿ.ಸ, ಮೈಸೂರು-೫೭೦ ೦೦೬

೧೦. ಎಸ್. ರಘು
ನಂ. ೪೪, ೧೨ನೆಯ ಅಡ್ಡ ರಸ್ತೆ, ಕುವೆಂಪುನಗರ, ಮೈಸೂರು.

೧೧. ಮಾಧವರಾವ್ ಮುಧೋಳ್, "ರಾಮಶ್ರೀ" ನಂ. ೧೧೬೭-ಬಿ೧,
ಹೆಚ್.ಐ.ಜಿ. ೨ನೇ ಹಂತ, ಶ್ರೀರಾಮಪುರ, ಮೈಸೂರು.

೧೨. ಶಿಕ್ಕೇರಿ ನಾರಾಯಣ
ಕೇಂದ್ರಿಯ ಭಾಷಾ ಸಂಸ್ಥಾನ, ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

೧೩. ಪಿ. ಮಂಜುಳಾದೇವಿ, ಶಿಕ್ಷಕಿ
ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಪ್ರೌಢಶಾಲೆ
ಕುವೆಂಪುನಗರ, ಮೈಸೂರು-೫೭೦ ೦೨೩

೧೪. ಡಾ|| ಬಿ. ಪಿ. ಇಂದಿರಾ, ಇತಿಹಾಸ ಉಪನ್ಯಾಸಕಿ
ಮಹಾರಾಣಿ ಕಲಾ ಕಾಲೇಜು, ಮೈಸೂರು.

ಓದುಗರ ಅನಿಸಿಕೆಗೆ ಆಹ್ವಾನ

—ಪುಸ್ತಕ ಪ್ರಪಂಚದಲ್ಲಿ 'ಓದುಗರ ಅನಿಸಿಕೆ' ವಿಭಾಗ ಪ್ರಾರಂಭಿಸಿದ್ದು, ಪ್ರಿಯ ಓದುಗರ ಸಲಹೆ ಸೂಚನೆಗಳನ್ನು ಸ್ವಾಗತಿಸಿದೆ.

—'ಪುಸ್ತಕ ಪ್ರಪಂಚ'ದಲ್ಲಿನ ಬಿಡಿ ಲೇಖನಗಳು ಹಾಗೂ ಒಟ್ಟಾರೆ ಸಂಚಿಕೆಯನ್ನು ಕುರಿತು ತಮ್ಮ ಅನಿಸಿಕೆ ವ್ಯಕ್ತಪಡಿಸಬಹುದು. ಅನಿಸಿಕೆಗಳು ಸಾಧ್ಯವಾದ ಮಟ್ಟಿಗೂ ಸಂಕ್ಷಿಪ್ತವಾಗಿರುವುದು ಅಪೇಕ್ಷಣೀಯ.

—ರಚನಾತ್ಮಕ ಅನಿಸಿಕೆಗಳನ್ನು ಪುಸ್ತಕ ಪ್ರಪಂಚದಲ್ಲಿ ಪ್ರಕಟಿಸಲಾಗುವುದು.

Statement of ownership and other particulars about he monthly periodical **"PUSTAKA PRAPANCHA"** s required to be published under rule 8 of the Registraion of Newspapers (Central) Rules 1956.

FORM IV

Place of Publication	—	Karnataka State Adult Education Council. 5/1 Vinoba Road, Manasagangothri, Mysore-6
Periodicity	—	Monthly
Printer's Name	—	Sri H. V. Srinivasachar
Nationality & Address	—	Indian Karnataka State Adult Education Council Printing Press 5/1 Vinoba Road, Manasagangothri, Mysore-6
Publisher's Name & Address	—	R. Shantharaj General Secretary Karnataka State Adult Education Council 5/1 Vinoba Road, Manasagangothri, Mysore-6
Nationality	—	Indian
Editor's Name	—	Sri Chandrashekhararadhya
Nationality	—	Indian
Address	—	Karnataka State Adult Education Council 5/1 Vinoba Road, Manasagangothri, Mysore 6

I, the General Secretary hereby declare that the particulars given above are true to the best of my knowledge and belief.

R. Shantharaj
General Secretary
KARNATAKA STATE ADULT EDUCATION COUNCIL
MYSORE

1 March 1995

Reg. No. KRNN.29 / WPP 6

LICENSE No. 21
LICENSED TO POST WITH PAYMENT

ತಲಾ ರೂ. ೨-೫೦ ದರದಲ್ಲಿ ಸಮಿತಿಯ ಕೆಳಕಂಡ ಪ್ರಕಟಣೆಗಳು ದೊರೆಯುತ್ತವೆ.

ಪ್ರತಿ ಪುಸ್ತಕಗಳು ಅಷ್ಟದಳದಲ್ಲಿ ಗರಿಷ್ಠ ೩೨ ಪುಟಗಳನ್ನು ಹೊಂದಿರುತ್ತವೆ. ಅಂಚೆ ಮೂಲಕ ಪುಸ್ತಕಗಳನ್ನು ಅಪೇಕ್ಷಿಸುವವರು, ಅಂಚೆ ವೆಚ್ಚ ಪ್ರತ್ಯೇಕವಾಗಿ ಕಳುಹಿಸಬೇಕು.

ಪುಟ್ಟಾಚಾರಿಯ ಕಾಡುಕೋಳಿ—ಕುವೆಂಪು
ಗೋಪಾಲಕೃಷ್ಣ ಗೋಖಲೆ—ಡಾ॥ ದೇ. ಜವರೇಗೌಡ
ಗುರುದೇವ ರವೀಂದ್ರರು—ಡಾ॥ ಹಾ. ಮಾ. ನಾಯಕ
ಮಾನೌವಿ ಪದಗಳು—ಕೆ. ಆರ್. ಲಿಂಗಪ್ಪ
ಡಾ॥ ಜಕೀರ್ ಹುಸೇನ್—ಭಾರತೀಸುತ
ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರ ಭಟ್ಟ
ಪುಟಾಣಿಗಳ ರಾಜ್ಯ—ಎಸ್. ಅನಂತನಾರಾಯಣ
ನಂಬಿಕೆಯ ನಂಟ—ದೇವನೂರು ಮಹಾದೇವ
ನಾಗಮಹಾಶಯ—ಉ. ಕಾ. ಸುಬ್ಬರಾಯಾಚಾರ್
ತಿರುವಲ್ಲವರ್—ಸಿಂಪಿ ಲಿಂಗಣ್ಣ
ಸೀತಾ ವನವಾಸ—ತ. ಸು. ಶಾಮರಾವ್
ದ್ರೌಪದಿಯ ಭಂಗ—ಕೂಡಲಿ ಚಿದಂಬರಂ
ಬೆಳಗೊಳದ ಗೊಮ್ಮಟೇಶ—ಜೀ. ಶಂ. ಪರಮಶಿವಯ್ಯ
ಬದುಕು ಬಂಗಾರ—ಕ್ಯಾತನಹಳ್ಳಿ ರಾಮಣ್ಣ
ಕೂಡಲ ಸಂಗಮ—ಈಶ್ವರಚಂದ್ರ ಚಿಂತಾಮಣಿ
ಜಪಾನ್—ಸಿಸು ಸಂಗಮೇಶ
ನನ್ನ ಮಗುವಿನ ಶಾಲೆ—ವಿರ್ಜೆ ಅಣ್ಣಾರಾಯ
ನಾಗರಮರಿ—ತ.ರಾ.ಸು
ಅಲ್ಲಮ ಪ್ರಭು—ಡಾ॥ ಪ್ರಭುಶಂಕರ್
ಸಾಕ್ರೆಟೀಸ್—ಡಾ॥ ಸಿ. ಪಿ. ಕೃಷ್ಣಕುಮಾರ್
ಶಕುಂತಲೆ—ವಿ. ಸೀತಾರಾಮಯ್ಯ
ಮಾರಿಯ ಕಲ್ಲು—ಕೆ. ಎಸ್. ನರಸಿಂಹಸ್ವಾಮಿ
ಶಾಲುಸಾಬಿ—ಗೊರೂರು ರಾಮಸ್ವಾಮಿ ಅಯ್ಯಂಗಾರ್
ನಳಚರಿತ್ರೆಯ ಸಂಗ್ರಹ—ಎಚ್. ಎಂ. ಶಂಕರನಾರಾಯಣರಾವ್
ಮಕ್ಕಳ ಬೆಳವಣಿಗೆ—ಡಾ॥ ಬಿ. ಕುಪ್ಪುಸ್ವಾಮಿ

Edited by Chandrashekhararadhya, Printed by H. V. Sreenivasa char, Printed and Published by Karnataka State Adult Education Council, 5/1, Vinoba Road, Manasa Gangothri, Mysore-570 006.